ರಂಜನೆ ಬೋಧನೆ ಪ್ರಚೋದನೆ


ಗೌರಿ ಲಂಕೇಶ್

ಜೂನ್ 18, 2008 ರೂ. 12/-





ಬ್ಲೂ ಫಿಲಂನಲ್ಲಿ ನಟ ಬಿರಾದಾರ್



ಪಿಂಡ ಹಾಕೋ ಟೈಮಲ್ಲಿ ಯಡ್ಡಿ ಪ್ರಮಾಣ ಖಾತೆ ಕ್ಯಾತೆ!




ರೇಷ್ಮೆ ಇಲಾಖೆ ಕಚ್ಚೆಹರುಕ ಕಾಂಬ್ಳೆ

ಹುಬ್ಬಳ್ಳಿ ಶೂಟ್‌ಔಟ್

ಚಂದನರಾಣಿ ಔಟ್ ಹಿರೇಮಠ ಇನ್!



ಕಾರ್ಟೂನ್ ಕಾರ್ನರ್



ಜೈವಿಕ ಇಂಧನದ ಒಂದು ಮುಖ



"ನೀರು ಮತ್ತು ಗಾಳಿಯಂತೆಯೇ ಸಂಗೀತ. ಅದಕ್ಕೆ ಯಾವ ಧರ್ಮದ ಸೋಂಕು ಇಲ್ಲ, ಬದಲಾಗಿ ಇಡೀ ಜಗತ್ತನ್ನೇ ಒಂದು ಗೂಡಿಸುತ್ತದೆ."

-ಸಲ್ಮಾನ್ ಅಹಮ್ಮದ್, ಪಾಕಿಸ್ತಾನಿ ಜುನೂನ್ ತಂಡದ ಗಾಯಕ

"ದೇವೇಗೌಡ ಎಲ್ಲವನ್ನೂ ಸರ್ವನಾಶ ಮಾಡಿದ."

-ಲಾಲೂ ಪ್ರಸಾದ್ ಯಾದವ್

"ದೇಶದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡೇ ಪ್ರಧಾನಿಗಳು ತೈಲ ಬೆಲೆಗಳನ್ನು ಹೆಚ್ಚಿಸಿದ್ದಾರೆ."

-ಕಪಿಲ್ ಸಿಬಾಲ್, ಕೇಂದ್ರ ಮಂತ್ರಿ



"ಸತ್ತ ಕೈದಿಗಳ ಹೆಣಗಳ ಮೇಲೆ ರಾಜಕೀಯ ಮಾಡಬೇಡಿ"

-ಪಾಕಿಸ್ತಾನಿ ಮಾನವ ಹಕ್ಕುಗಳ ಹೋರಾಟಗಾರ ಅನ್ಸರ್ ಬ್ಯುನಿ

"ನನ್ನ ದೇಹ ತೂಕವೇಕೆ ರಾಷ್ಟ್ರೀಯ ಸುದ್ದಿಯಾಗಿದೆ? ನಾನೇನು ಷೇರು ಮಾರ್ಕೆಟ್ಟಾ ಅಥವಾ ಸೆನ್ಸೆಕ್ಸಾ?"

- ನಟಿ ಕರೀನಾ ಕಪೂರ್

ಒಂದು ಜೋಕ್



ನಲವತ್ತು ವರ್ಷಗಳ ಹಿಂದೆ ಕೇರಳದ ಪ್ರಥಮ ಚುನಾಯಿತ ಕಮ್ಯುನಿಸ್ಟ್ ಸರಕಾರವನ್ನು ಅಂದು ಕೇಂದ್ರದಲ್ಲಿ ಅಧಿಕಾರ ಹಿಡಿದಿದ್ದ ಕಾಂಗ್ರೆಸ್ ಸರ್ಕಾರ ವಜಾಗೊಳಿಸಿದ್ದರ ಹಿಂದೆ ಅಮೆರಿಕದ ಸಿಐಎನಿಂದ ಹಣ ಸಹಾಯವಿತ್ತು ಎಂಬುದರ ಬಗ್ಗೆ ಕೇರಳದ ಪ್ರಸ್ತುತ ಕಮ್ಯುನಿಸ್ಟ್ ಸರ್ಕಾರದ ಹಣಕಾಸು ಸಚಿವ ಥಾಮಸ್ ಐಸಾಕ್ ಪೊನ್ನೆ ತಾನೇ ಅಮೆರಿಕದಿಂದ 'ಸಾಕ್ಷಿ'ತಂದಿದ್ದಾರಂತೆ.

ಆದರೆ ಆ ದಿನಗಳಲ್ಲಿ ಸ್ವತಃ ಕಮ್ಯುನಿಸ್ಟ್ ಪಕ್ಷಗಳಿಗೆ ರಷ್ಯಾ ಹಣ ನೀಡುತ್ತಿದ್ದರ ಬಗ್ಗೆ ಮಾತ್ರ ಕಾಮ್ರೇಡ್ ಥಾಮಸ್ ಇಲ್ಲಿಯತನಕ ಪತ್ತೇದಾರಿ ಕಾರ್ಯಾಚರಣೆಯನ್ನು ಪ್ರಾರಂಭಿಸಿಲ್ಲವಂತೆ. ಎಲ್ಲರಿಗೂ ಗೊತ್ತಿರುವ ಈ ಸತ್ಯವನ್ನು ಸಂಶೋಧಿಸುವ ಅಗತ್ಯ ಅವರಿಗೆ ಕಂಡುಬಂದಿಲ್ಲದಿರುವುದು ಅಚ್ಚರಿಯೇನಲ್ಲ, ಅಲ್ಲವೇ?

ಒಂದು ತರ್ಕ



"ಜಾತಿ ಮತ್ತು ಪ್ರಾದೇಶಿಕ ರಾಜಕಾರಣದಲ್ಲಿ ತೊಡಗುವವರಿಗೆ ದೇಶದ ರಾಜಕಾರಣದಲ್ಲಿ ಜಾಗ ಇರಕೂಡದು" ಎಂದು ಬಜೆಪಿ ಅಧ್ಯಕ್ಷ ರಾಜನಾಥ್ ಸಿಂಗ್ ಗುಡುಗಿದ್ದಾರೆ. ಆದರೆ ರಾಜಸ್ಥಾನದಲ್ಲಿ ಅವರ ಪಕ್ಷದವರೇ ಆದ ವಸುಂಧರ ರಾಜೆ ಗುಜ್ಜರ್, ಜಾಟ್ ಮತ್ತು ಮೀನಾ ಸಮುದಾಯಗಳ ನಡುವೆ ಮಾಡುತ್ತಿರುವ ಜಾತಿ ರಾಜಕಾರಣದ ಬಗ್ಗೆ ಮೌನ ವಹಿಸಿದ್ದಾರೆ.

ಆಚಾರ ಹೇಳೋಕೆ, ಬದನೇಕಾಯಿ ತಿನ್ನೋಕೆ ಎಂಬ ಗಾದೆ ಮಾತನ್ನು ರಾಜನಾಥ್‌ರವರೇ ಸೃಷ್ಟಿಸಿರಬೇಕಲ್ಲವೇ?

ನನಸಾದ ಕುಡುಕರ ಕನಸು!

ಕೊನೆಗೂ ನಮ್ಮೆಲ್ಲರ ಕನಸು ನನಸಾಗಿದೆ. ಮನಮೋಹನ್ ಸಿಂಗ್‌ರವರ ಕೃಪಾಶೀರ್ವಾದದಿಂದ ಇವತ್ತು ಬೀರ್‌ಗಿಂತ ಪೆಟ್ರೋಲ್ ಹೆಚ್ಚು ದುಬಾರಿಯಾಗಿದೆ.


ಇದನ್ನು ಎಲ್ಲರೂ "Drink and Drive" ಮಾಡುವ ಮೂಲಕ ಸಂಭ್ರಮಿಸಬೇಕು!

- *Cheers* ಎಂಬಾತ ಕಳುಹಿಸಿರುವ *sms*



ಕಬೀರ್ ಮತ್ತು ನನ್ನ ಕಾಯಂ ಅಡ್ಡೆಯಾಗಿದ್ದ ಕೋಶಿಸ್ ಹೋಟೆಲ್‌ಗೆ ಪ್ರಥಮ ಬಾರಿ ಭೇಟಿ ನೀಡಿದೆ. ನನ್ನನ್ನು ಮತ್ತೆ ಕಂಡು ಅಲ್ಲಿನ ವೈಟರ್‌ಗಳಿಗೆಲ್ಲ ಖುಷಿ "How are you Madam?" "ಹೇಗಿತ್ತು ಅಮೆರಿಕಾ?" "ನಿಮ್ಮ colour ಗೆ ಮ್ಯಾಚ್ ಆಗುವ ಕಾಫಿ ಬೇಕು ತಾನೆ" ಎಂದೆಲ್ಲ ಆತ್ಮೀಯವಾಗಿ, ತಮ್ಮ ಸಂಬಂಧಿಯೊಬ್ಬಳು ತಮ್ಮ ಮನೆಗೆ ಹಿಂದಿರುಗಿದ್ದಾಳೆಂಬಂತೆ ನನ್ನನ್ನು ವಿಚಾರಿಸಿದರು.

ಹೇಗಿದ್ದರೂ ಕೆಲಸ ಮತ್ತು ಆಫೀಸು ಎಂಬ ಒತ್ತಡ ಗಳಿಲ್ಲದ ಕಾರಣ ಕಬೀರ್ ಭೇಟಿಯಾಗೋಣವೆಂದು ಹೇಳಿದ್ದ ಆರು ಗಂಟೆಗಿಂತಲೂ ಒಂದು ಗಂಟೆ ಮುಂಚಿತವಾಗಿಯೇ ಕೋಶಿಸ್‌ನಲ್ಲಿ ಹಾಜರಾಗಿದ್ದೆ. ಕಿಟಕಿ ಪಕ್ಕದಲ್ಲಿನ ನಮ್ಮ ಎಂದಿನ ಟೇಬಲ್ ಖಾಲಿ ಇದ್ದುದರಿಂದ ಅಲ್ಲೇ ಕುಳಿತು ಹೊರಗಡೆ ಚಲಿಸುತ್ತಿದ್ದ ಎಲ್ಲವನ್ನು ನೋಡುತ್ತಿದ್ದೆ. ಎಲ್ಲಿಗೋ ಬೇಗನೆ ತಲುಪಬೇಕೆಂದು ತಮ್ಮ ವಾಹನವನ್ನು ಜೋರಾಗಿ ಓಡಿಸುತ್ತಿದ್ದವರು, ಅವರ ಪರಿವೆಯೇ ಇಲ್ಲದಂತೆ ತನ್ನ ಪ್ರೇಯಸಿಗಾಗಿ ತಾಳ್ಮೆಯಿಂದ ಕಾಯುತ್ತಿದ್ದ ಹುಡುಗ, ರೆಡ್‌ಸಿಗ್ನಲ್ ಬಂದಾಗ ಸಾಕಷ್ಟು ವಾಹನ ಚಾಲಕರಿಂದ ಭಿಕ್ಷೆ ಬೇಡಲು ತವಕಿಸುತ್ತಿದ್ದ ದೇಹಗಳು, ಪುರುಷರ ರಕ್ತದೊತ್ತಡವನ್ನು ಹೆಚ್ಚಿಸುವಂತಿದ್ದ ಹೊಸ ಫ್ಯಾಷನ್ ಅನ್ನು ತೊಟ್ಟಿದ್ದ ತರುಣಿಯರು... ಅತ್ಯಾಧುನಿಕ ಹೋಮ್ ಥಿಯೇಟರ್ ಅನ್ನು ಮೀರಿಸುವಂತಿತ್ತು ನನ್ನ ಪಕ್ಕದಲ್ಲಿದ್ದ ಕಿಟಕಿಯಿಂದ ಕಾಣಿಸುತ್ತಿದ್ದ ದೃಶ್ಯಗಳು.



ಇದ್ದಕ್ಕಿದ್ದಂತೆ ಯಾರೋ "ನೀವು ಶಾರದೆ ಅಲ್ಲವೇ" ಎಂದು ಕೇಳಿ ನನ್ನ ಮುಂದೆ ನಿಂತಿದ್ದ ವ್ಯಕ್ತಿಯತ್ತ ತಿರುಗಿದಾಗ ನನಗೊಂದು ಅಚ್ಚರಿ ಕಾದಿತ್ತು. ನರ್ಸರಿಯಿಂದ ಹೈಸ್ಕೂಲ್‌ತನಕ ನನ್ನ ಸಹಪಾಠಿಯಾಗಿದ್ದ ನವೀನ್ ನನ್ನ ಎದುರು ನಿಂತಿದ್ದ. ತಲೆಯ ಮೇಲಿನ ಕೂದಲು ಕಡಿಮೆಯಾಗಿತ್ತಾದರೂ ಅದೇ ಮುಖ, ಅದೇ ನಗೆ. "Hi ನವೀನ್ What a surprise!" ಎಂದೆ.

"ಹೋಟೆಲ್‌ಗೆ ಎಂಟ್ರಿಯಾದಾಗಲೇ ನಿನ್ನನ್ನು ನೋಡಿ ನೀನು ಶಾರದೆಯೇ ಇರಬೇಕು ಅನ್ನಿಸಿತು. ಎಷ್ಟು ಬೇಗನೆ ಒಬ್ಬರನ್ನೊಬ್ಬರು ಗುರುತು ಹಿಡಿದೆವು ನೋಡು" ಎಂದ ನವೀನ್.

"ಬಾ, ಕೂತ್ಕೊ, ಇಲ್ಲೇನು ಮಾಡ್ತಿದ್ದೀ? ಯಾರನ್ನಾದರೂ ಭೇಟಿ ಆಗಬೇಕಿತ್ತಾ?" ಎಂದೆ.

"ಹಾ, ಆದರೆ ಈ ಟ್ರಾಫಿಕ್‌ನಲ್ಲಿ ಅವರು ಬರುವುದಕ್ಕೆ ತಡ ಆಗಬಹುದು. ಅದಿರಲಿ, ನೀನು ಹೇಗಿದ್ದಿ, ಏನ್ ಮಾಡ್ತಿದ್ದಿ?" ಎಂದು ನವೀನ್ ಕೇಳಿದ. ಪರಸ್ಪರರ ಬಗ್ಗೆ ಸ್ವಲ್ಪ ಹೊತ್ತು ಚರ್ಚಿಸಿ ನಮ್ಮ ಇತರೆ ಹೈಸ್ಕೂಲ್ ಮಿತ್ರರ ಬಗ್ಗೆ ನಮಗೆ ಗೊತ್ತಿದ್ದ ಮಾಹಿತಿಯನ್ನು ವಿನಿಮಯ ಮಾಡಿಕೊಂಡೆವು. ನವೀನ್ ಈಗ ಖ್ಯಾತ ಆಸ್ಪತ್ರೆಯೊಂದರಲ್ಲಿ ವೈದ್ಯನಾಗಿದ್ದಾನೆ. ತನ್ನ ವೃತ್ತಿಗೆ ಸಂಬಂಧಿಸಿದಂತೆ ಹುಡುಗಿಯೊಬ್ಬಳಿಗೆ ಚಿಕಿತ್ಸೆ ಕೊಡುವ ಬಗ್ಗೆ ತನ್ನ ಮಿತ್ರ ವೈದ್ಯರೊಬ್ಬರೊಂದಿಗೆ ಚರ್ಚಿಸಲೆಂದೇ ಅಂದು ಕೋಶಿಸ್‌ಗೆ ಬಂದಿದ್ದ.



ಲೈಂಗಿಕ ಶಿಕ್ಷಣದ ಬಗ್ಗೆ ಯಾಕಿಷ್ಟು ಭಯ

"ಆಕೆಗಿನ್ನೂ ಹದಿನೆಂಟು ವರ್ಷ ವಯಸ್ಸು. ಅಪ್ಪ ಅಮ್ಮನಿಗೆ ಅವಳೊಬ್ಬಳೇ ಮಗಳು. ಸಾಕಷ್ಟು ಶ್ರೀಮಂತ ವಂಶ. ಅವಳ ಎಲ್ಲ ಬೇಕುಗಳನ್ನು ಈಡೇರಿಸುವುದರಲ್ಲೇ ತೃಪ್ತಿ ಕಾಣುತ್ತಿದ್ದ ತಂದೆ-ತಾಯಿ. ಹೋದ ವರ್ಷ ಆ ಹುಡುಗಿ ತನ್ನ ಕಾಲೇಜ್ ಸ್ನೇಹಿತರೊಂದಿಗೆ ಹಾಲಿಡೆಗೆಂದು ಗೋವಾಗೆ ಹೋಗಿದ್ದಳಂತೆ. ಅಲ್ಲಿ ಆಕೆ ಯಾರೊಂದಿಗೆ ಸಂಪರ್ಕ ಮಾಡಿದಳೋ ಏನೋ, ಈಗ ಅವಳಿಗೆ ಏಡ್ಸ್ ರೋಗ ತಾಗಿಕೊಂಡಿದೆ. ಈ ಸುದ್ದಿ ಕೇಳುತ್ತಿದ್ದಂತೆ ಅವಳ ಅಪ್ಪ ಶಾಕ್ ಆದರು, ಅವಳ ಅಮ್ಮ ಮೂರ್ಛೆ ಹೋದರು. ಆದರೆ ಆ ಹುಡುಗಿಗೆ ತನಗೆ ಏನಾಗಿದೆ ಎಂದೇ ಅರ್ಥವಾಗಿಲ್ಲ. 'ನೀವು ಡಾಕ್ಟರ್ ಅಲ್ಲವೇ? ನನ್ನನ್ನು ಸರಿಪಡಿಸೋದು ನಿಮ್ಮ ಜವಾಬ್ದಾರಿ' ಎಂದು ನನಗೆ ಹೇಳಿದಳು. ಅವಳಿಗೆ ಏಡ್ಸ್ ಬಗೆಗಿನ ವಿಚಾರವನ್ನು ಸೂಕ್ಷ್ಮವಾಗಿ ತಿಳಿಸುವುದು ಹೇಗೆಂದು ಚರ್ಚಿಸಲು ನನ್ನ ಮಿತ್ರರೊಬ್ಬರನ್ನು ಭೇಟಿಯಾಗಲು ಬಂದೆ" ಎಂದ ನವೀನ್.

ಅಷ್ಟೊತ್ತಿಗೆ ಕಬೀರ್ ಹಾಜರಾದನಲ್ಲದೆ, ನವೀನ್ ಕಾಯುತ್ತಿದ್ದ ಮಿತ್ರ ಕೂಡ ಆಗಮಿಸಿದರು. ಆದ್ದರಿಂದ ನವೀನ್ ಮತ್ತು ಕಬೀರ್‌ನನ್ನು ಪರಸ್ಪರ ಪರಿಚಯಿಸಿದ ನಂತರ ನವೀನ್ ಅಲ್ಲಿಂದ ಹೊರಟು ಆತ ಖಾಲಿ ಮಾಡಿದ್ದ ಜಾಗದಲ್ಲಿ ಕಬೀರ್ ಕೂತ.

"ಏನು? ಕೆಲ್ಸ ಗಿಲ್ಸ ಬಗ್ಗೆ ಯೋಚನೆ ಮಾಡಿದ್ದೀಯೋ ಅಥವಾ ಹೀಗೆ ಟೈಮ್ ಪಾಸ್ ಮಾಡಬೇಕು ಅಂತ ನಿರ್ಧರಿಸಿದ್ದೀಯೊ?" ಎಂದು ಕೇಳುತ್ತಾ ಕಬೀರ್ ಸಿಗರೇಟ್ ಒಂದನ್ನು ಹಚ್ಚಿದ.

"ಅದನ್ನೆಲ್ಲ ಆಮೇಲೆ ಚರ್ಚಿಸಿದರಾಯ್ತು, ಈಗತಾನೆ ನವೀನ್ ಎಂಥ ದುರಂತ ಕತೆ ಹೇಳಿದ ಗೊತ್ತಾ?" ಎಂದು ನಾನು ನವೀನ್ ಹೇಳಿದ್ದನ್ನೆಲ್ಲ ವಿವರಿಸಿದೆ. ಅದನ್ನು ಕೇಳಿ ಕಬೀರ್‌ಗೂ ಬೇಸರವಾಯಿತು. "ಈ ಕಾಲದ ಯುವ ಜನಾಂಗಕ್ಕೆ ದೇಹ ಬೆಳೆದಿರುತ್ತೆ ಆದರೆ ಬುದ್ಧಿ ಬೆಳೆದಿರುವುದಿಲ್ಲ, ಆ ಕಾರಣಕ್ಕೇ ಇಂತಹ ದುರಂತಗಳು ಆಗುತ್ತೆ" ಎಂದ.

"ಹಾಗಲ್ಲ ಕಬೀರ್, ಆ ವಯಸ್ಸಿನವರಲ್ಲಿ ಇಂತಹ ವಿಷಯಗಳ ಬಗ್ಗೆ ಅರಿವನ್ನು ಮೂಡಿಸುವ ಜವಾಬ್ದಾರಿ ಸಮಾಜದ್ದಲ್ಲವೇ?"

"ನಿನಗೆ ಗೊತ್ತಿಲ್ಲ ಅನ್ನಿಸುತ್ತೆ, ಕಳೆದ ವರ್ಷ ಸೆಕ್ಸ್ ಎಜುಕೇಷನ್ ಬಗ್ಗೆನೇ ಎಲ್ಲೆಡೆ ದೊಡ್ಡ ಚರ್ಚೆ ನಡೆಯಿತು. ಬಹಳಷ್ಟು ತಂದೆ-ತಾಯಂದಿರು ಸೆಕ್ಸ್ ಎಜುಕೇಷನ್‌ನಿಂದಾಗಿ ತಮ್ಮ ಮಕ್ಕಳು ಹಾದಿ ತಪ್ಪುತ್ತಾರೆ. ಆದ್ದರಿಂದ ಅದನ್ನು ಶಾಲಾ ಕಾಲೇಜುಗಳಲ್ಲಿ ಹೇಳಿಕೊಡಬಾರದೆಂದೇ ಅಭಿಪ್ರಾಯಪಟ್ಟರು" ಎಂದ ಕಬೀರ್.

"ಅಲ್ಲಾ ಲೈಂಗಿಕ ಶಿಕ್ಷಣ ಅಂದರೆ ಸೆಕ್ಸ್ ಟ್ರೈನಿಂಗ್ ಅಲ್ಲ. ಬದಲಾಗಿ ತಮ್ಮ ದೇಹದಲ್ಲಾಗುತ್ತಿರುವ ಬದಲಾವಣೆಗಳು, ಅದರಿಂದಾಗುವ ಪರಿಣಾಮಗಳು, ಎಂತಹ ಎಚ್ಚರಿಕೆಗಳನ್ನು ವಹಿಸಬೇಕೆಂಬುದರ ಬಗ್ಗೆ ಮಾಹಿತಿ ನೀಡಿ ಯುವಕರಲ್ಲಿ ಅರಿವನ್ನು ಮೂಡಿಸಿ ಇಂತಹ ಅವಘಡಗಳನ್ನು ಮಾಡಿಕೊಳ್ಳದಂತೆ ತಡೆಯುವುದು ಎಂಬುದು ನಮ್ಮ ಜನರಿಗೆ ಅರ್ಥವಾಗಲ್ಲ ಯಾಕೆ?" ಎಂದು ಅಚ್ಚರಿ ವ್ಯಕ್ತಪಡಿಸಿದೆ.

"ಶಾರು, ಇಲ್ಲಿ ಎಂತೆಂತಹ ಅಡಚಣೆಗಳು ಬರುತ್ತೆ ಅಂತ ನಿಂಗೆ ಗೊತ್ತು, ಬಡ ಶಾಲಾ ಮಕ್ಕಳಿಗೆ ಪೌಷ್ಟಿಕ ಮತ್ತು ಸುರಕ್ಷಿತ ಆಹಾರ ಸಿಗಲೆಂದು ಅವರಿಗೆಲ್ಲ ಕೋಳಿಮೊಟ್ಟೆ ನೀಡಲು ಸರ್ಕಾರ ಮುಂದಾದರೆ ಅದನ್ನು ಜಾತಿ, ಧರ್ಮದ ಹೆಸರಲ್ಲಿ ವಿರೋಧಿಸುವ ಜನ ಇಲ್ಲಿದ್ದಾರೆ. ಅಂಥದ್ದರಲ್ಲಿ ಲೈಂಗಿಕ ಶಿಕ್ಷಣ ನೀಡುತ್ತೇವೆ ಎಂದರೆ ಜನ ಸುಮ್ಮನಿರುತ್ತಾರೆಯೇ?" ಎಂದು ಕಬೀರ್ ನನ್ನನ್ನು ಗೇಲಿ ಮಾಡುವವನಂತೆ ಕೇಳಿದ.

"ನೋಡು, ಹಲವು ಸಮೀಕ್ಷೆಗಳು ಹೇಳುತ್ತಿರುವುದು ಏನನ್ನು ಗೊತ್ತಾ? ಭಾರತದಲ್ಲಿ ಇವತ್ತು ಏಡ್ಸ್‌ಗೆ ಬಲಿಯಾಗುತ್ತಿರುವವರಲ್ಲಿ ಶೇ. 50 ಜನ 15 ವರ್ಷದಿಂದ 29 ವರ್ಷದ ವಯಸ್ಸಿನವರೇ ಆಗಿದ್ದಾರೆ. ಅಂದರೆ ನಮ್ಮ ಹೊಸ ತಲೆಮಾರಿನ ಅದೆಷ್ಟೋ ಹೂಗಳು ಅರಳುವ ಮುನ್ನವೇ ಬಾಡುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಅಜ್ಞಾನದಿಂದಾಗಿ ನಮ್ಮ ಹುಡುಗ ಹುಡುಗಿಯರು ಸತ್ತರೂ ಪರವಾಗಿಲ್ಲ, ಅವರಿಗೆ ಲೈಂಗಿಕತೆಯ ಬಗ್ಗೆ ಎಚ್ಚರಿಕೆ ನೀಡಬಾರದೆಂದರೆ ಏನರ್ಥ?" ಎಂದೆ ನಾನು.

"ಈ ದೇಶಾನ ಮುಂದಕ್ಕೆ ತೆಗೆದುಕೊಂಡು ಹೋಗುವ ಬದಲು ಹಿಂದಕ್ಕೆ ಎಳೆಯುವವರೇ ಹೆಚ್ಚು ಜನ ಇದ್ದಾರೆ. ಅದೆಲ್ಲ ಇರಲಿ, ಈಗ ನಿನಗೊಂದು ಪ್ರಶ್ನೆ ಕೇಳ್ತೀನಿ. ಆನ್ಸರ್ ಮಾಡ್ತೀಯಾ?"

"ಏನ್ ಪ್ರಶ್ನೆ?"

"ಈ ಸೆಕ್ಸ್ ಎಜುಕೇಷನ್ ಅನ್ನು ನಂಗೂ ಒಂದು ಸ್ವಲ್ಪ ಹೇಳಿಕೊಡ್ತೀಯಾ?" ಎಂದ ಕಬೀರ್ ಒಂದು ಕಣ್ಣು ಮಿಟುಕಿಸುತ್ತಾ.

"ಲೋಫರ್" ಎಂದು ನಾನು ಅವನ ಕೈಗೆ ಒಂದೇಟು ಕೊಟ್ಟೆ...

■ ಶಾರದೆ

ಪೆಟ್ರೋಲ್, ಪತ್ರಿಕೋದ್ಯಮ ಮತ್ತು ನಿದ್ರೆ



ಪೆಟ್ರೋಲ್ ಬೆಲೆಯನ್ನು ಇನ್ನಿಲ್ಲದಂತೆ ಏರಿಸಿರುವ ಕೇಂದ್ರ ಸರ್ಕಾರ ಅದಕ್ಕೆ ಹಲವಾರು ಸಮಜಾಯಿಷಿಗಳನ್ನು ನೀಡುತ್ತಿದೆ. ಅವುಗಳಲ್ಲಿ ತೈಲ ಉತ್ಪಾದನಾ ಕಂಪನಿಗಳ ನಷ್ಟ 42 ಸಾವಿರ ಕೋಟಿಯಿಂದ 60 ಸಾವಿರ ಕೋಟಿ ರೂಪಾಯಿಗಳಿಗೆ ಏರದಂತೆ ತಡೆಯಲೆಂದು ಬೆಲೆಯನ್ನು ಹೆಚ್ಚಿಸಬೇಕಾಯಿತು ಎಂಬುದು ಒಂದು.



ಆದರೆ ವಿಚಿತ್ರ ಸಂಗತಿ ಯಾವುದೆಂದರೆ ಸರ್ಕಾರಿ ಸ್ವಾಮ್ಯದ ಇಂಡಿಯನ್ ಆಯಿಲ್, ಭಾರತ್ ಗ್ಯಾಸ್ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಕಂಪನಿಗಳು ಕಳೆದ ವರ್ಷ ಇಷ್ಟೊಂದು ನಷ್ಟವನ್ನು ಕಂಡಿದ್ದರೆ, ಅದೇ ಸಾಲಿನಲ್ಲಿ ರಿಲೆಯನ್ಸ್ ಕಂಪನಿಯು ಇದೇ ತೈಲ ಉತ್ಪಾದನೆಯಲ್ಲಿ 10,372 ಕೋಟಿ ರೂಪಾಯಿಗಳಷ್ಟು ಲಾಭವನ್ನು ಕಂಡಿದೆ. ಇದು ಹೇಗೆ ಸಾಧ್ಯವಾಯಿತು?

ಇನ್ನೊಂದು ಸಂಗತಿ ಯಾವುದೆಂದರೆ ಇವತ್ತು ತೈಲ ಬೆಲೆಯನ್ನು ಏರಿಸಿ ಜನಸಾಮಾನ್ಯರನ್ನು ಸಂಕಷ್ಟಕ್ಕೆ ದೂಡಿರುವ ಕೇಂದ್ರ ಸರ್ಕಾರ ತನ್ನ 2008 ನೇ ಬಜೆಟ್‌ನಲ್ಲಿ ಹೇಳಿದ್ದೇನೆಂದರೆ 2007-08 ನೇ ಆರ್ಥಿಕ ವರ್ಷದಲ್ಲಿ ಕಾರ್ಪೊರೇಟ್ ಕಂಪೆನಿಗಳಿಗೆ ನೀಡಿದ ತೆರಿಗೆ ರಿಯಾಯಿತಿಯಿಂದಾಗಿ 58,655 ಕೋಟಿ ರೂಪಾಯಿಗಳ ನಷ್ಟ ಮತ್ತು ಅಬಕಾರಿ ಶುಲ್ಕ ರಿಯಾಯಿತಿಯಿಂದಾಗಿ 87,992 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ ಎಂದು. ಇವೆರಡರ ಒಟ್ಟು ಮೊತ್ತ 1,46,642 ಕೋಟಿ ರೂಪಾಯಿಗಳು.

ಆ ಹಣವನ್ನು ವಸೂಲಿ ಮಾಡದ ಸರ್ಕಾರ ಇಂದು ತೈಲ ಬೆಲೆಯನ್ನು ಏರಿಸಿ ಈಗಾಗಲೇ ಹಣದುಬ್ಬರದಿಂದ ತತ್ತರಿಸುತ್ತಿರುವ ಜನಸಾಮಾನ್ಯರ ಮೇಲೆ ಮತ್ತಷ್ಟು ಒತ್ತಡ ಹೇರುತ್ತಿದೆ ಎಂದರೆ ಈ ಸರ್ಕಾರಕ್ಕೆ ಜನ ಏನು ಮಾಡಬೇಕು?

****

ಇಲ್ಲಿಯ ತನಕ ಸಿನಿಮಾ, ಆರ್ಟ್ ಗ್ಯಾಲರಿ, ನಾಟಕ ಇಂತಹವುಗಳ ಮೇಲೆ ದಾಳಿ ಇಡುತ್ತಿದ್ದ ಕೋಮುವಾದಿಗಳು ಈಗ ಪತ್ರಿಕಾ ಕಚೇರಿಗಳ ಮೇಲೂ ದಾಳಿ ಮಾಡಲಾರಂಭಿಸಿವೆ. ಇತ್ತೀಚೆಗೆ ಮಹಾರಾಷ್ಟ್ರದಲ್ಲಿ 'ಲೋಕಸತ್ತಾ' ಎಂಬ ಮರಾಠಿ ಪತ್ರಿಕೆಯ ಸಂಪಾದಕ ಕುಮಾರ್ ಕೇಟ್ಕರ್‌ರವರ ಮನೆಯ ಮೇಲೆ ಶಿವ ಸಂಗ್ರಾಮ್ ಪಾರ್ಟಿ ಎಂಬ ಸಂಘಟನೆಯ ಸದಸ್ಯರು ದಾಳಿ ಮಾಡಿದರು.

ಅದಕ್ಕೆ ಕಾರಣ ಕೇಟ್ಕರ್‌ರವರು ಬರೆದಿದ್ದ ಒಂದು ಲೇಖನ. ಇತ್ತೀಚೆಗೆ ಮಹಾರಾಷ್ಟ್ರ ಸರ್ಕಾರವು ಅಮೆರಿಕದ ಸ್ಟ್ಯಾಚು ಆಫ್ ಲಿಬರ್ಟಿದಂತೆಯೇ ಮುಂಬೈನ ಸಮುದ್ರದಲ್ಲಿ ಶಿವಾಜಿಯ ದೊಡ್ಡ ಪ್ರತಿಮೆಯನ್ನು ಸ್ಥಾಪಿಸುವ ಪ್ರಸ್ತಾಪವನ್ನು ಎತ್ತಿಕೊಂಡಿತು. ಆ ಪ್ರತಿಮೆಯನ್ನು ಸ್ಥಾಪಿಸಲು ಹಲವು ಕೋಟಿ ರೂಪಾಯಿಗಳು ವೆಚ್ಚವಾಗುತ್ತದೆಂದು ಅಂದಾಜಿಸಲಾಗಿತ್ತು.

ಹೇಳಿಕೇಳಿ ಮಹಾರಾಷ್ಟ್ರದ ವಿದರ್ಭಾ ಪ್ರದೇಶದಲ್ಲಿ ನೂರಾರು ಅಸಹಾಯಕ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಇತರೆಡೆ ಬಡತನ ತಾಂಡವವಾಡುತ್ತಿದೆ, ಜನಸಾಮಾನ್ಯರಿಗೆ ಕುಡಿಯುವ ನೀರೂ ಅಲಭ್ಯವಾಗಿದೆ. ಇಂಥ ಪರಿಸ್ಥಿತಿಯಲ್ಲಿ ಜನರ ಸಮಸ್ಯೆಯನ್ನು ನೀಗಿಸುವ ಬದಲಾಗಿ ಒಂದು ಪ್ರತಿಮೆಗೆ ಕೋಟ್ಯಂತರ ರೂಪಾಯಿಗಳನ್ನು ವೆಚ್ಚ ಮಾಡುವುದು ಸರಿಯೇ? ಎಂದು ಕೇಟ್ಕರ್ ತಮ್ಮ ಲೇಖನದಲ್ಲಿ ಪ್ರಶ್ನಿಸಿದರು.

ಅವರ ಪ್ರಶ್ನೆ ಸರಿಯಾಗಿಯೇ ಇತ್ತು.

ಆದರೆ ಶಿವ ಸಂಗ್ರಾಮ್ ಪಾರ್ಟಿಯವರಿಗೆ ಕೇಟ್ಕರ್ ಶಿವಾಜಿಗೆ ಅವಮಾನ ಮಾಡಿದ್ದಾರೆ ಎನಿಸಿತು. ಶಿವಾಜಿಯ ಪ್ರತಿಮೆ ಅಗತ್ಯವಿಲ್ಲ ಎಂದೇ ಆತ ಹೇಳಿದ್ದಾರೆಂದು ಭಾವಿಸಿದ ಅವರು ಕೇಟ್ಕರ್‌ರವರ ಮನೆಯ ಮೇಲೆ ದಾಳಿ ಮಾಡಿದರು. ಆದರೆ ಶಿವ ಸಂಗ್ರಾಮ್ ಪಾರ್ಟಿಯವರು ಶರದ್ ಪವಾರ್‌ರವರ ಎನ್‌ಸಿಪಿ ಪಕ್ಷದ ಅಂಗ ಸಂಸ್ಥೆಯಾಗಿರು



ವುದರಿಂದ ಅವರ ವಿರುದ್ಧ ಯಾವ ಕಾನೂನು ಕ್ರಮವನ್ನು ಅಲ್ಲಿನ ಸರ್ಕಾರ ತೆಗೆದುಕೊಂಡಿಲ್ಲ.

ಈ ಪ್ರಕರಣ ನಡೆದ ವಾರವೇ ದಿ ಟೈಮ್ಸ್ ಆಫ್ ಇಂಡಿಯಾದ ಮೇಲೂ ಗುಜರಾತ್ ಸರ್ಕಾರ ಮುಗಿಬಿದ್ದಿತು. ಅಹಮದಾಬಾದಿನ ಪೊಲೀಸ್ ಕಮೀಷನರ್ ಓ.ಪಿ. ಮಾಥುರ್‌ನ ವೃತ್ತಿನಿಷ್ಠೆಯ ಬಗ್ಗೆ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ ಹಲವು ವರದಿಗಳನ್ನು ಪ್ರಕಟಿಸಿದ್ದನ್ನೇ ನೆಪ ಮಾಡಿಕೊಂಡು ಆ ಪತ್ರಿಕೆಯ ಮೇಲೆ ರಾಷ್ಟ್ರದ್ರೋಹದ ಕೇಸನ್ನು ಜಡಿಯಲಾಗಿದೆ. ಆದರೆ ವಾಸ್ತವವಾಗಿ ಗುಜರಾತಿನ ಮುಖ್ಯಮಂತ್ರಿ ನರೇಂದ್ರ ಮೋದಿಯ ಕೆಂಗಣ್ಣಿಗೆ ಕಾರಣವಾಗಿರುವುದು ಟೈಮ್ಸ್ ಪತ್ರಿಕೆ ಪ್ರಕಟಿಸಿದ ಖ್ಯಾತ ಸಮಾಜಶಾಸ್ತ್ರಜ್ಞ ಆಶೀಶ್ ನಂದಿಯವರ ಲೇಖನ.

ಕಳೆದ ಜನವರಿ 8 ರಿಂದ ಪ್ರಕಟಗೊಂಡ ಆ ಲೇಖನದಲ್ಲಿ ನಂದಿಯವರು ಗುಜರಾತಿನ ಸಮಾಜ ಹೇಗೆ ಹಿಂದೂ ಕೋಮುವಾದಿ ಸಿದ್ಧಾಂತಕ್ಕೆ ಶರಣಾಗಿದೆ, ಅದನ್ನು ಹೇಗೆ ಮೋದಿ ಸರ್ಕಾರ ವ್ಯವಸ್ಥಿತವಾಗಿ ಸಾಧಿಸಿದೆ ಎಂದೆಲ್ಲಾ ವಿವರಿಸಿದ್ದರು.


ಅವರ ಲೇಖನದ ಹಲವು ಸಾಲುಗಳು ಹೀಗಿವೆ:

ಹಿಂದೊಮ್ಮೆ ಭಾಷೆ, ಸಂಸ್ಕೃತಿ ಮತ್ತು ವ್ಯವಹಾರದಿಂದಾಗಿ ಬೆಸೆದುಕೊಂಡಿದ್ದ ಗುಜರಾತಿನ ಹಿಂದೂ ಮತ್ತು ಮುಸಲ್ಮಾನರು ಇವತ್ತು ವಿ.ಡಿ. ಸಾವರ್ಕರ್ ಮತ್ತು ಎಂ.ಎ. ಜಿನ್ನಾರವರ ಅಪೇಕ್ಷೆಗಳನ್ನು ಈಡೇರಿಸಿದ್ದಾರೆ. ಇವತ್ತು ಆ ಎರಡು ಸಮುದಾಯಗಳು ವೈರಿ ದೇಶಗಳಂತೆ ಮುಖಾಮುಖಿಯಾಗಿದ್ದಾವೆ....

ಭಾರತೀಯ ಸಂವಿಧಾನವನ್ನು ಸಂಪೂರ್ಣವಾಗಿ ತಿರಸ್ಕರಿಸಿರುವ ಗುಜರಾತ್ ಇವತ್ತು ಮಹಾತ್ಮಾ ಗಾಂಧಿಯನ್ನೂ ನಿರಾಕರಿಸಿದೆ. ಮಧ್ಯಮ ವರ್ಗದ ಗುಜರಾತಿಗಳು ಗಾಂಧಿ ತತ್ವಗಳ ಬಗ್ಗೆ ಅಪಹಾಸ್ಯ ಮಾಡುತ್ತಾರೆ. ಎಷ್ಟರ ಮಟ್ಟಿಗೆ ಎಂದರೆ ಗಾಂಧಿವಾದಿಗಳು ಕೂಡ ಇವತ್ತು ಸಾರ್ವಜನಿಕ ವಲಯದಿಂದ ಹಿಂದೆ ಸರಿದಿದ್ದಾರೆ. ಸ್ವತಃ ಗಾಂಧಿಗೇ ಹಿಂದೂ ರಾಷ್ಟ್ರವಾದಿಯ ಸ್ಥಾನವನ್ನು ನೀಡಲಾಗಿದೆಯಲ್ಲದೆ ಅವರ ಬರಹಗಳನ್ನು ಗುಜರಾತಿ ಭಾಷೆಗೆ ಅನುವಾದಿಸುವಾಗ ಕಪಟತನದಿಂದ ಅವುಗಳನ್ನು ಹಿಂದೂತ್ವ ಸಿದ್ಧಾಂತಕ್ಕೆ ತಿರುಚಲಾಗಿದೆ...

ಗುಜರಾತಿನ ನಗರಗಳಲ್ಲಿನ ಮಧ್ಯಮ ವರ್ಗದ ಜನರ ಮನಸ್ಸುಗಳನ್ನು ಮತ್ತೆ ಜಾತ್ಯತೀತತೆಯತ್ತ ಒಲ್ಲಿಸುವುದು ಕಷ್ಟವಾಗುತ್ತದೆ. ಯಾಕೆಂದರೆ ಉಗ್ರ ಧಾರ್ಮಿಕ ರಾಷ್ಟ್ರೀಯವಾದದಲ್ಲಿ ಈ ವರ್ಗ ಒಂದು ರೀತಿಯ ಗೌರವವನ್ನು ಕಂಡಿದೆಯಲ್ಲದೆ ತಮ್ಮದು ಕೆಚ್ಚೆದೆಯ ಸಮುದಾಯ ಎಂದು ಸಂಭ್ರಮಿಸುತ್ತಿದೆ. ಹಿಂದೊಮ್ಮೆ ಬಂಗಾಲಿ ಬಾಬುಗಳು, ಮಹಾರಾಷ್ಟ್ರದ ಬ್ರಾಹ್ಮಣರು, ಕಾಶ್ಮೀರದ ಮುಸಲ್ಮಾನರು ಹಿಂಸೆಯ ಮೂಲಕವೇ ಆತ್ಮೋದ್ಧಾರ ಕಾಣಲು ಹೊರಟರಂತೆ ಇವರೂ ಹೊರಟರೆ ಅಚ್ಚರಿ ಇಲ್ಲ. ಏಕೆಂದರೆ ಗುಜರಾತಿನ ಈ ವರ್ಗದ ಜನ ರಕ್ತದ ರುಚಿಯನ್ನು ಕಂಡಿದ್ದಾರೆ....

ಮಧ್ಯಮ ವರ್ಗವೇ ಇವತ್ತು ಮಾಧ್ಯಮ ಮತ್ತು ಶಿಕ್ಷಣ ವಲಯಗಳನ್ನು ನಿಯಂತ್ರಿಸುತ್ತಿದೆ. ಹಾಗೆಯೇ ಆ ಎರಡೂ ವಲಯಗಳು ಇವತ್ತು ದ್ವೇಷವನ್ನು ಉತ್ಪಾದಿಸುವ ಕಾರ್ಖಾನೆಗಳಾಗಿವೆ. ಇವೆಲ್ಲವುಗಳಿಗೆ ಅನಿವಾಸಿ ಭಾರತೀಯರ ಬೆಂಬಲವಿದೆ. ಯಾಕೆಂದರೆ ದೂರದಲ್ಲಿ ಸುರಕ್ಷಿತವಾಗಿ ಕೂತಿರುವ ಅವರಿಗೆ ಯಾವುದೇ ಹೊಣೆಗಾರಿಕೆ ಇಲ್ಲದೆ ರಾಷ್ಟ್ರೀಯವಾದವನ್ನು ಮತ್ತು ರಕ್ತದಾಹವನ್ನು ಪ್ರಚೋದಿಸುವ ಶಕ್ತಿ ಇದೆ....



ನೀವೇ ಯೋಚಿಸಿ, ಆಶೀಶ್ ನಂದಿ ಹೇಳಿರುವುದರಲ್ಲಿ ತಪ್ಪೇನಿದೆ.

ಆದರೆ ಇಂತಹ ಟೀಕೆಯನ್ನು ಸಹಿಸಲಾಗದ ಮೋದಿ ಆ ಪತ್ರಿಕೆಯ ವಿರುದ್ಧ ಪೊಲೀಸರನ್ನು ಛೂ ಬಿಟ್ಟಿದ್ದಾನೆ.

ಈ ವಾರ ನಡೆದಿರುವ ಈ ಪ್ರಕರಣಗಳು ಮೊದಲ ಬಾರಿಗೆ ನಡೆದಿರುವಂತಹದ್ದೇನಲ್ಲ. ಕಳೆದ ವರ್ಷ 'ದಿನ ಸುಡರ್' ಪತ್ರಿಕೆ ನಡೆಸಿದ ಸಮೀಕ್ಷೆಯೊಂದರಿಂದ ಉದ್ರೇಕಗೊಂಡ ಕರುಣಾನಿಧಿಯ ಬೆಂಬಲಿಗರು ಆ ಪತ್ರಿಕೆಯ ಕಚೇರಿಯ ಮೇಲೆ ದಾಳಿ ನಡೆಸಿ ಇಬ್ಬರ ಸಾವಿಗೆ ಕಾರಣರಾಗಿದ್ದರು. ಹಾಗೆಯೇ ಸರ್ವೋಚ್ಚ ನ್ಯಾಯಾಲಯದ ಮಾಜಿ ಮುಖ್ಯ ನ್ಯಾಯಮೂರ್ತಿ ವೈ.ಕೆ. ಸಬರ್‌ವಾಲ್‌ರ ಬಗ್ಗೆ ತನಿಖಾ ವರದಿಗಳನ್ನು ಪ್ರಕಟಿಸಿದ್ದಕ್ಕೆ ದೆಹಲಿ ನ್ಯಾಯಾಲಯ ಮಿಡ್ ಡೆ ಪತ್ರಿಕೆಯ ಮೂವರು ಪತ್ರಕರ್ತರಿಗೆ ಜೈಲು ಶಿಕ್ಷೆಯನ್ನು ನೀಡಿತ್ತು.

ಪ್ರಜಾಪ್ರಭುತ್ವದ ನಾಲ್ಕನೆ ಸ್ತಂಭವಾಗಿರುವ ಪತ್ರಿಕೋದ್ಯಮದ ಮೇಲೆ ಹೀಗೆ ಒಂದೆಡೆಯಿಂದ ಕೋಮುವಾದಿಗಳಿಂದ ದಾಳಿ, ಇನ್ನೊಂದೆಡೆ ವ್ಯವಸ್ಥೆಯಿಂದ ದಾಳಿ ನಡೆದರೆ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವವಾದರೂ ಉಳಿಯುದಾದರೂ ಹೇಗೆ?

****

ಅಮೆರಿಕದ ಅಧ್ಯಕ್ಷ ಚುನಾವಣೆಯಲ್ಲಿ ಡೆಮಾಕ್ರೆಟ್ ಪಕ್ಷದ ಅಭ್ಯರ್ಥಿಯಾಗಲು ಕಳೆದ ಹಲವಾರು ತಿಂಗಳಿಂದ ತೀವ್ರತರವಾದ ಪೈಪೋಟಿ ನಡೆಸಿದ್ದ ಹಿಲರಿ ಕ್ಲಿಂಟನ್ ಕೊನೆಗೆ ಸೋಲೊಪ್ಪಿಕೊಂಡು ಸ್ಪರ್ಧೆಯಿಂದ ಹಿಂದೆ ಸರಿದಿದ್ದಾರೆ.

ಈಗ ಆಕೆ ಏನು ಮಾಡಬೇಕು?

ಆ ಪ್ರಶ್ನೆಗೆ ಬಾಬ್ ಡೋಲ್ ಅನುಭವವೇ ಉತ್ತರ ನೀಡಬಹುದು. ಬಾಬ್ ಡೋಲ್ ಕೂಡ ಹಿಂದೊಮ್ಮೆ ಅಧ್ಯಕ್ಷ ಪದವಿಯ ಆಕಾಂಕ್ಷಿಯಾಗಿದ್ದು ಚುನಾವಣೆಯಲ್ಲಿ ಸೋತಿದ್ದರು. ಆಗ ಪತ್ರಕರ್ತನೊಬ್ಬ "ಇಂತಹ ನಿರಾಶಾದಾಯಕ ಫಲಿತಾಂಶದ ನಂತರ ನೀವು ಹೇಗೆ ನಿದ್ರಿಸಿದಿರಿ?" ಎಂದು ಪ್ರಶ್ನಿಸಿದ್ದ.

ಆ ಪ್ರಶ್ನೆಗೆ ಡೋಲ್ ನೀಡಿದ ಉತ್ತರ:

"ನಾನು ಚಿಕ್ಕ ಮಗುವಿನಂತೆ ನಿದ್ರಿಸಿದೆ. ಎರಡು ಗಂಟೆಗೊಮ್ಮೆ ಎಚ್ಚರಗೊಂಡು ಅತ್ತೆ, ಅಷ್ಟೇ!" ■











ಹಾಸ್ಯನಟ ಬಿರಾದಾರ ಬ್ಲೂಫಿಲ್ಮ್ ಸರದಾರ

ಹಾಸ್ಯನಟ ವೈಜನಾಥ್ ಬಿರಾದಾರ್ ಯಾರಿಗೆ ಗೊತ್ತಿಲ್ಲ?

ಭಿಕ್ಷುಕನ ಪಾತ್ರದಲ್ಲೋ, ತರಕಾರಿ ಮಾರುವವನಾಗೋ, ಕುಡುಕನಾಗೋ, ಚಿಂದಿ ಆಯುವವನಾಗೋ, ಹೋಟೆಲ್ ಮಾಣಿಯಾಗೋ, ಮನೆ ಕೆಲಸಗಾರ, ಅಡುಗೆಯವ, ತೋಟದ ಮಾಲಿ; ಇತ್ಯಾದಿ ಛಪ್ಪರ್ ಪಾತ್ರಗಳಿಗೆಲ್ಲ ತೆರೆಮೇಲೆ ಜೀವ ಕೊಟ್ಟ ಅಪರೂಪದ ಕಮೇಡಿಯನ್ ಬಿರಾದಾರ್!

ಅದು ಜಗ್ಗೇಶ್ ಚಿತ್ರವಾಗಲಿ, ಕಾಶೀನಾಥ್‌ನ 'ಪೋಲಿ' ಟೈಪಿನ ಸಿನಿಮಾನೇ ಇರಲಿ; ಹೀರೋಯಿನ್ನಾಗಿ ಯಾರಿರುತ್ತಾರೆ ಎಂಬುದಕ್ಕಿಂತಲೂ ಅದರಲ್ಲಿ ಬಿರಾದಾರ್ ಮತ್ತು ಎಂ.ಎನ್. ಲಕ್ಷ್ಮಿದೇವಿ ಇರುತ್ತಾರಾ ಎಂಬುದೇ ಮುಖ್ಯ ಮತ್ತು ಇದ್ದರಷ್ಟೇ ಅದಕ್ಕೊಂದು ಬೆಲೆ. ಕೆಲವೊಮ್ಮೆ ಬಿರಾದಾರ್‌ನ ಡೇಟು ಸಿಗದೇ 'ಜಗ್ಗೇಶ್' ಥರದವರೇ ವಾರಗಟ್ಟಲೇ ಕಾಯುವುದುಂಟು. ನರಸಿಂಹ ರಾಜು, ದಿನೇಶ್, ಬಾಲಕೃಷ್ಣರ ಮಟ್ಟಕ್ಕಲ್ಲದೇ ಹೋದರೂ; ಎನ್.ಎಸ್. ರಾವ್, ಮುಸುರಿ ಲೆವೆಲ್ಲಿಗೆ ತೂಗದಿದ್ದರೂ; ಆನಂತರದ ಪೀಳಿಗೆಯ ಸಾಧು ಕೋಕಿಲ, ಟೆನ್ನಿಸ್ ಕೃಷ್ಣ ಮಂಡ್ಯ ರಮೇಶ್, ಡಿಂಗ್ರಿ ನಾಗರಾಜ್, ಹೊನ್ನವಳ್ಳಿ ಕೃಷ್ಣರ ಸರಿಸಮಕ್ಕೆ ನಿಲ್ಲದಿದ್ದರೂ; 'ಜೋಕರ್' ಬಿರಾದಾರ್ ನಿಸ್ಸಂಶಯವಾಗಿ ಕಮೇಡಿಯನ್ ಗುಗ್ಗೂನ ಉತ್ತರಾಧಿಕಾರಿ.

ಇಂಥನೊಬ್ಬ ಅಪರೂಪದ ಕಲಾವಿದನ ದೌರ್ಭಾಗ್ಯಕ್ಕೆ ಇಲ್ಲಿನ ಕೆಲ ಫೋಟೋಗಳೇ ಸಾಕ್ಷಿ ಹೇಳುತ್ತಿವೆ. ಇದ್ಯಾವುದೂ ಕನ್ನಡ ಅಥವಾ ದೇಶದ ಬೇರಾವುದೇ ಭಾಷೆಯ ಸಿನಿಮಾ ದೃಶ್ಯಾವಳಿಗಳಲ್ಲ. ಇವೆಲ್ಲವೂ ಪಕ್ಕಾ ಬ್ಲೂಫಿಲ್ಮ್‌ನ ವಿವಿಧ ಫೋಟೋಗಳು. ಐವರು ಅರೆನಗ್ನ ಹೆಂಗಸರ ಮಧ್ಯೆ 'ಸ್ಯಾಂಡ್‌ವಿಚ್'ನಂತೆ ಸಿಲುಕಿ ಬಿದ್ದಿದ್ದಾನೆ ಬಿರಾದಾರ್. ಅದು ಪಕ್ಕಾ ಕಾಮಕೇಳಿಯ ಚಿತ್ರಾವಳಿ. ಈ ಹೆಂಗಸರ ಪೈಕಿ ಯಾರೊಬ್ಬರಿಗೂ ಇಂಚುದ್ದದ ಸ್ಕರ್ಟ್ ಬಿಟ್ಟರೆ ಬಟ್ಟೆ ಅಂತ ಮತ್ತೊಂದಿಲ್ಲ, ಬಿರಾದಾರ್ ಕೂಡ ಬಿಳಿಯ ಚೆಡ್ಡಿಯ ಹೊರತಾಗಿ ಬೇರೇನೂ ತೊಟ್ಟಿಲ್ಲ. ಹಾಸ್ಯನಟನೊಬ್ಬ ಹೀಗೆ ಐವರು ಅರೆಬೆತ್ತಲೆ ಲಲನೆಯರನ್ನು ಇಷ್ಟೊಂದು ಅಸಹ್ಯದ ಭಂಗಿಗಳಲ್ಲಿ ಅಲ್ಲೆಗರೆಯುತ್ತಿರುವ ಹಸೀಹಸೀ ದೃಶ್ಯಾವಳಿಗಳಿರುವ ಬ್ಲೂಫಿಲ್ಮ್ ಒಂದು ಸದ್ಯ ಕರ್ನಾಟಕದ ಬಿ ಮತ್ತು ಸಿ ಸೆಂಟರ್‌ಗಳೆಂಬ ಸಿನಿಮಾ ಟೆಂಟುಗಳಲ್ಲಿ ವಿಜೃಂಭಣೆಯಿಂದ ಪ್ರದರ್ಶನಗೊಳ್ಳುತ್ತಿದೆ.

ಬಹುಶಃ ಇದು ಐದಾರು ವರ್ಷಗಳ ಹಿಂದಿನ 'ಸೆಕ್ಸ್' ಚಿತ್ರವಿರಬೇಕು. ಗೋರಿಪಾಳ್ಯದ ಅಭಿಮಾನ್, ಆವಲಹಳ್ಳಿಯ ವೆಂಕಟೇಶ್ವರ, ದಿಣ್ಣೂರು ರಸ್ತೆಯ ಇಂಜಲಿ, ಉತ್ತರಹಳ್ಳಿಯ ಬಾಲಾಜಿ, ಗೌಡನಪಾಳ್ಯದ ವೆಂಕಟೇಶ್ವರ, ಚಂದಾಪುರದ ಸ್ವಾಗತ್, ಮೂಡಲಪಾಳ್ಯದ ಮಂಜುನಾಥ್, ಫ್ರೇಜರ್ ಟೌನ್‌ನ ಎವರೆಸ್ಟ್, ಸ್ಪ್ರಿಂಗ್ಸ್ ರಸ್ತೆಯ ಪ್ಯಾಲೇಸ್ ಇತ್ಯಾದಿ ಕೊಂಪೆ ಏರಿಯಾಗಳ ಟೆಂಟುಗಳಲ್ಲಿನ ಪ್ರತಿ ಮಾರ್ನಿಂಗ್ ಷೋ ಅಥವಾ ಮ್ಯಾಟನಿ ಪ್ರದರ್ಶನದ ಮಧ್ಯೆ ಹತ್ತೋ ಹದಿನೈದೋ ನಿಮಿಷಗಳ ಕಾಲದ ಇಂಥದೊಂದು 'ಬಿಟ್' ಇದ್ದೇ ಇರುತ್ತದೆ.

ಈತನಕ ಮಲೆಯಾಳಿ ಬ್ಲೂಫಿಲ್ಮುಗಳೇ ಇಂಥ ಟೆಂಟುಗಳ ಪ್ರೇಕ್ಷಕರನ್ನು ತಣಿಸುತ್ತಿದ್ದು ಪೊಲೀಸರಿಗೂ ವಿಕೃತ ಪ್ರೇಕ್ಷಕರಿಗೂ ಚಿರಪರಿಚಿತ ಸತ್ಯವಾಗಿತ್ತು, ಇಂಥ ದೇವರ ಚಿತ್ರಗಳ ಸಾಲಿಗೆ ಈಗ ಬಿರಾದಾರನ ಕಾಮ ಕೇಳಿಯ ಸೇರ್ಪಡೆಯಾಗಿದೆ. ಜಗ್ಗೇಶ್ ಚಿತ್ರದಲ್ಲೋ, ಕಾಶೀನಾಥ್ ಚಿತ್ರದಲ್ಲೋ ಹಾಸ್ಯನಟನಾಗಿ ಪ್ರೇಕ್ಷಕರ ಹೊಟ್ಟೆ ಹುಣ್ಣು ಮಾಡುತ್ತಿದ್ದ ಬಿರಾದಾರ್ ಕನ್ನಡ ಚಿತ್ರರಂಗ ಕಂಡ ಅಪರೂಪದ ಹಾಸ್ಯ ನಟ. ಮೂಲತಃ ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಹಲಬುರ್ಗಾ ಹೋಬಳಿಯ ತೇಜಾಂಪೂರ್ ಗ್ರಾಮದ ಬಿರಾದಾರ್ ಸಿನಿಮಾಕ್ಕೆ ಕಾಲಿಡುವುದಕ್ಕೂ ಮುನ್ನ ಉತ್ತರ ಕರ್ನಾಟಕದ ಪ್ರಖ್ಯಾತ ರಾಮರಾವ್ ದೇಸಾಯಿ ನಾಟಕ ಕಂಪೆನಿಯಲ್ಲಿ ಹಾಸ್ಯ ಕಲಾವಿದನಾಗಿದ್ದ. ಆನಂತರ ಗುಬ್ಬಿ ವೀರಣ್ಣ ಕಂಪೆನಿ ಸೇರಿ ಖ್ಯಾತಿಗೆ ಬಂದ. ಉತ್ತರ ಕರ್ನಾಟಕದುದ್ದಕ್ಕೂ, ಸಂಚಲನವೆಬ್ಬಿಸಿದ ಹೆಸರಾಂತ 'ಗೌಡ್ರಗದ್ಲ' ನಾಟಕದಲ್ಲಿ ಬಿರಾದಾರ್‌ನ ನಟನೆ ಅವಿಸ್ಮರಣೀಯವಾಗಿತ್ತು.

ಅಂಥಾ ಬಿರಾದಾರ್ ಗಾಂಧಿನಗರಕ್ಕೆ ಕಾಲಿಟ್ಟದ್ದು ಕೂಡ ಆತನ ವಿಲಕ್ಷಣ ಮ್ಯಾನರಿಸಂನ ಕಾರಣಕ್ಕೇ ಹೊರತು ಬೇರೆ ಹಾಸ್ಯನಟರಿಲ್ಲವೆಂದಲ್ಲ. ಬರುಬರುತ್ತ ಬಿರಾದಾರ್ ಕನ್ನಡ ಚಿತ್ರರಂಗಕ್ಕೆ ಅನಿವಾರ್ಯವಾಗಿಬಿಟ್ಟ. ಶಂಕರ್‌ನಾಗ್ ಕಾಲಕ್ಕೆ ಹೇಗೆ ಕಮೇಡಿಯನ್ ಗುಗ್ಗು ಬಹುತೇಕ ಚಿತ್ರಗಳಿಗೆ ಅನಿವಾರ್ಯವಾಗುತ್ತಿದ್ದನೋ ಬಿರಾದಾರ್ ಆತನ ಉತ್ತರಾಧಿಕಾರಿಯಂತಿದ್ದ. ಟೆನ್ನಿಸ್ ಕೃಷ್ಣ ಮತ್ತು ಸಾಧು ಕೋಕಿಲರಂತೆ ಹೆಚ್ಚಿಗೆ ಮಾತಿಲ್ಲದೇ ತನ್ನ ಹಾವಭಾವದಿಂದಲೇ ಪ್ರೇಕ್ಷಕರನ್ನು ನಗಿಸುತ್ತಿದ್ದ. ಈತನಿಂದಾಗಿಯೇ ಕಾಶೀನಾಥ್ ಮತ್ತು ಜಗ್ಗೇಶ್‌ರಂಥವರ ವಿಕಟ ಸಾಮರ್ಥ್ಯ ವೃದ್ಧಿಸುತ್ತಿತ್ತು. ಬಹುಶಃ ಬಿರಾದಾರ್‌ನಷ್ಟು ವೇಗವಾಗಿ ಇತ್ತೀಚಿನ ದಿನಗಳಲ್ಲಿ ಮತ್ತೊಬ್ಬ ಹಾಸ್ಯನಟ ಬೆಳೆದಿರಲಿಕ್ಕಿಲ್ಲ.

ಕಾಶೀನಾಥ್‌ನ 'ಲವ್ ಟ್ರೈನಿಂಗ್' ಚಿತ್ರದಲ್ಲಿ ಹೆಚ್ಚೂಕಮ್ಮಿ ಈತನೇ ಎರಡನೇ ಹೀರೋ. ಜಗ್ಗೇಶ್‌ನ ಅಳಿಯ ಅಲ್ಲ ಮಗಳ ಗಂಡ, ರೂಪಾಯಿ ರಾಜ, ಬಂದ ನನ್ನ ಗಂಡ, ಮಿಸ್ಟರ್ ಬಕ್ರ, ಕಾಸು ಇದ್ದೋನೇ ಬಾಸು, ಮಠ ಮುಂತಾದ ಚಿತ್ರಗಳೆಲ್ಲ ಬಿರಾದಾರ್ ಕಾರಣಕ್ಕಾಗಿಯೇ ಮತ್ತಷ್ಟು ರುಚಿಕಟ್ಟಾಗಿದ್ದವು. ಓ ಮಲ್ಲಿಗೆ, ಸುಂಟರಗಾಳಿ, ಲವಕುಶ, ಮಿ. ಗರಗಸದಂಥ ಚಿತ್ರಗಳಲ್ಲಿ ಬಹುಶಃ ಬಿರಾದಾರ್ ಇಲ್ಲದೇ ಹೋಗಿದ್ದರೆ ನಿರ್ಮಾಪಕನ ಗತಿ ಏನಾಗುತ್ತಿತ್ತೊ!


ಪಾತ್ರ ಅದೆಂಥದ್ದೇ ಇರಲಿ; ಕೇವಲ ಹತ್ತೇ ವರ್ಷದಲ್ಲಿ ವರನಟ ರಾಜ್, ವಿಷ್ಣು ರವಿಚಂದ್ರನ್ ಸೇರಿದಂತೆ ಕನ್ನಡದ ಎಲ್ಲಾ ಹೀರೋಗಳ ಜೊತೆಗೆ ನಟಿಸಿದ್ದ ವೈಜನಾಥ್ ಬಿರಾದಾರ್ ಇನ್ನೂರೈವತ್ತಕ್ಕೂ ಅಧಿಕ ಚಿತ್ರಗಳಲ್ಲಿ ಅವಕಾಶ ಗಿಟ್ಟಿಸಿದ್ದು ಕೂಡ ಸುಮ್ಮನೇನಲ್ಲ. ಆತನ ತೀರ ಇತ್ತೀಚಿನ ರೇಟು ದಿನವೊಂದಕ್ಕೆ ಐದು ಸಾವಿರ!

ಬ್ಲೂಫಿಲ್ಮ್‌ಗಳಲ್ಲಿ ಬೆತ್ತಲಾಗುವಷ್ಟು ದಾರಿದ್ರ್ಯವೂ ಇಲ್ಲ. ತಿಂಗಳೊಂದಕ್ಕೆ ಕನಿಷ್ಠ ಹತ್ತು ದಿನಗಳ ಕಾಲ ಸಿನಿಮಾ ಶೂಟಿಂಗ್ ಇದ್ದೇ ಇರುತ್ತದೆ. ಅದೇ ಸರಾಸರಿ ಐವತ್ತು ಸಾವಿರವಾಗುತ್ತದೆ. ಸಾಲದ್ದಕ್ಕೆ ಬಿರಾದಾರ್ ಬೇಕಾಬಿಟ್ಟಿ ಟೀವಿ ಧಾರಾವಾಹಿಗಳಲ್ಲಿ ನಟಿಸುತ್ತಾನೆ. ಮಧ್ಯೆ ಬಿಡುವಾದಾಗೆಲ್ಲ ಉತ್ತರ ಕರ್ನಾಟಕದ ವಿವಿಧ ಊರುಗಳಿಗೆ ಹೋಗಿ ನಾಟಕಗಳಲ್ಲಿ ಬಣ್ಣ ಹಚ್ಚುತ್ತಾನೆ. ಹೀಗೆ ತನ್ನ ನಟನೆಯಿಂದಲೇ ತಿಂಗಳೊಂದಕ್ಕೆ ಕಮ್ಮಿಯೆಂದರೂ ಎಂಬತ್ತು ಸಾವಿರ ರೂಪಾಯಿ ದುಡಿಯುವ ಬಿರಾದಾರ್ ಇಂಥ ಹೊಲಸು ಕೆಲಸಕ್ಕೆ ಏಕೆ ಕೈಯಿಟ್ಟ?

ಮರ್ಯಾದೆಯಾಗಿ ಹಾಸ್ಯ ಪಾತ್ರಗಳನ್ನು ನಿರ್ವಹಿಸಿಯೇ ಕೈತುಂಬಾ ಸಂಪಾದಿಸುವ ಅವಕಾಶವಿರುವಾಗ ಈ ರೀತಿ ಬ್ಲೂಫಿಲ್ಮ್‌ಗಳಲ್ಲಿ ಕಾಮಕೇಳಿ ನಡೆಸಿ ಏನು ಮಹಾ ಸಂಪಾದಿಸಬಲ್ಲ.

ಹಾಗೇ ನೋಡಿದರೆ ಬಿರಾದಾರ್‌ನದ್ದು ಸಣ್ಣ ಪ್ರಾಯವೇನಲ್ಲ. ವಯಸ್ಸು ಐವತ್ತನ್ನು ದಾಟಿ ಮಕ್ಕಳು ಮದುವೆಗೆ ಬಂದಿದ್ದಾರೆ. ಕರ್ನಾಟಕದುದ್ದಕ್ಕೂ ಜನ ಗುರುತಿಸುತ್ತಾರೆ. ಹಾಗೊಮ್ಮೆ ಯಾರಾದರೂ ಕುಡಿಸಿ ಚಿತ್ತಾಗಿಸಿ ಆತನಿಂದ ಇಂಥ ಕೆಲಸ ಮಾಡಿಸಿರಬಹುದಾ ಎಂದರೆ ಬಿರಾದಾರ್ ಅದೆಷ್ಟೇ ಕುಡಿದರೂ ಪ್ರಜ್ಞೆ ತಪ್ಪುವವನಲ್ಲ. ಇಂಥ ಚಿತ್ರಗಳಲ್ಲಿ ನಟಿಸಿದ ಮಾತ್ರಕ್ಕೇ ಲಕ್ಷಗಟ್ಟಲೇ ದುಡ್ಡು ಹುಟ್ಟುತ್ತಾ ಎಂದರೆ ಅದೂ ಇಲ್ಲ. ತೀರ ಗೊತ್ತಿಲ್ಲದೇ ಯಾಮಾರುವಷ್ಟು ಮುಗ್ಧನೂ ಅಲ್ಲ. ಇದರರ್ಥ ಬಿರಾದಾರ್ ಪ್ರಜ್ಞಾಪೂರ್ವಕವಾಗಿಯೇ ನಟಿಸಿದ್ದಾನೆ. ಅದು ಚಪಲಕ್ಕಾ? ವಿಕೃತಿಗಾ? ಮೋಜಿಗಾ? ಅಥವಾ ಹೊಟ್ಟೆಪಾಡಿಗಾ?

ಈ ಬಗ್ಗೆ ಆತನನ್ನೇ ಕೇಳಿದರೆ ಬಿರಾದಾರ್ ವಿಚಿತ್ರ ವೇದಾಂತವನ್ನು ಬೋಧಿಸುತ್ತಾನೆ. 'ಅಲ್ರೀ ಈ ದೇಶದಲ್ಲಿ ಎಷ್ಟೆಲ್ಲ ಮಂತ್ರಿಗಳು ಎಷ್ಟು ಕೋಟಿ ನುಂಗಿಲ್ಲ? ಏನೆಲ್ಲ ಪಾಪ ಮಾಡಿಲ್ಲ? ನಾನು ಯಾವುದೋ ಕಾಲಕ್ಕೆ ತುತ್ತು ಅನ್ನಕ್ಕೂ ಗತಿಯಿಲ್ಲದಿರುವಾಗ ಯಾಮಾರಿಬಿಟ್ಟೆ. ಇದೇನ್ ಮಹಾ ಪಾಪಾನಾ? ನಾನೇನು ಮಂತ್ರಿಗಳಂತೆ ದೇಶ



'ಮಠ' ಚಿತ್ರದಲ್ಲಿ ಬಿರಾದಾರ್

ದರೋಡೆ ಮಾಡಿದ್ದೀನಾ?...'

ಇದು ಬಿರಾದಾರನ ಗೀತೋಪದೇಶ. ನಿಜ, ಮಂತ್ರಿಗಳಂತೆ ಆತ ಕೊಳ್ಳೇ ಹೊಡೆದಿಲ್ಲ, ಹಾಗಂತ ಬ್ಲೂಫಿಲ್ಮ್‌ನಲ್ಲಿ ಕಾಮಕೇಳಿ ನಡೆಸುವುದು, ತನ್ಮೂಲಕ ಸೆಕ್ಸ್ ಸಿನಿಮಾ ಖದೀಮರ ಜೊತೆ ಕೈಜೋಡಿಸುವುದು ಇದ್ಯಾವುದಕ್ಕೂ ಪರಿಹಾರವಲ್ಲ. ಇದೇನೇ ಇರಲಿ, ಅಪರೂಪದ ನಟನೊಬ್ಬನ ಹಸಿವು, ದಾರಿದ್ರ್ಯ ದುರವಸ್ಥೆಗಳೆಲ್ಲ ಹೇಗೆ ಸೆಕ್ಸ್ ಚಿತ್ರಗಳ ಖದೀಮರ ಪಾಲಿಗೆ ಲಾಭವಾಗುತ್ತದೆ ಎಂಬುದಕ್ಕೆ ಇದೊಂದು ನಿದರ್ಶನವಷ್ಟೇ. ಆ ಸಿಪ್ಪೆ ತಿಂದ ಬಿರಾದಾರ್ ಸಿಕ್ಕಿಬೀಳುತ್ತಾನೆ, ಆತನ ಬಟ್ಟೆ ಬಿಚ್ಚಿಸಿದವರು ರೊಕ್ಕ ಎಣಿಸಿಕೊಳ್ಳುತ್ತಾರೆ. ■

ರಾ. ಸೋಮನಾಥ್

'ದೇವಾಲಯ' ಕ್ಯಾಟಗರಿ ಮತ್ತು ಸೆಕ್ಸ್ ಬಿಟ್ಸ್ ಶೂಟಿಂಗ್

ಈತನಕ ತೆರೆಕಂಡ ಕನ್ನಡ ಚಿತ್ರಗಳಲ್ಲಿ ಅತೀ ಹೆಚ್ಚು ಪ್ರದರ್ಶನ ಕಂಡ ಚಿತ್ರ ಯಾವುದು?

'ಮುಂಗಾರು ಮಳೆ' ತಾನೆ? ಅದಕ್ಕೂ ಮುನ್ನ 'ಬಂಗಾರದ ಮನುಷ್ಯ' ಎನ್ನಬಹುದಿತ್ತು. ಆದರೆ ವಾಸ್ತವ ವೇನು ಗೊತ್ತೆ? ಒಪ್ಪಿ ಬಿಡಿ ಇವತ್ತಿಗೂ ಸಾರ್ವಕಾಲಿಕ ದಾಖಲೆ ಅಂತಿರುವುದು 'ಕೂಡಿ ಬಂದ ಕಂಕಣ' ಎಂಬ ದೇವರ ಚಿತ್ರದ ಹೆಸರಲ್ಲೇ!

ಇದು ಕಹಿಸತ್ಯ. ಈ ಕೂಡಿ ಬಂದ ಕಂಕಣಕ್ಕೂ ಮುನ್ನ 'ಪ್ರೇಮದ ಕಾರಂಜಿ' ಎಂಬ ಮತ್ತೊಂದು 'ನೀಲಿ' ಚಿತ್ರ ಸಿಲ್ವರ್ ಜ್ಯೂಬಿಲಿ ಆಚರಿಸಿತ್ತು. ಇದಕ್ಕೆಂದೇ ಮೀಸಲಾಗಿದ್ದ ಕೆಂಪೇಗೌಡ ಚಿತ್ರಮಂದಿರ ಆಗಿನ್ನೂ ಮುಚ್ಚಿರಲಿಲ್ಲ. ಹೆಸರಿಗೆ ಈ ಥರದ ಸಿನಿಮಾಗಳ ಬೋರ್ಡಿರುತ್ತಿತ್ತಾದರೂ ಒಳಗೆ ಸಿನಿಮಾದ ಮಧ್ಯೆ ಎಲ್ಲೋ ಒಂದು ಕಡೆ ಸೆಕ್ಸ್ ಬಿಟ್ಸ್ ತೂರಿಬರುತ್ತಿತ್ತು. ಇಂಟರ್‌ವೆಲ್ ಮುಗಿಯುತ್ತಿದ್ದಂತೆ ಟಾಕೀಸೂ ಖಾಲಿ ಹೊಡೆಯುತ್ತಿತ್ತು.

ಪ್ರೇಮದ ಕಾರಂಜಿ ಮತ್ತು ಕೂಡಿ ಬಂದ ಕಂಕಣಕ್ಕೂ ಮುನ್ನ ಇದೇ ಕೆಂಪೇಗೌಡ ಥೇಟರಿನಲ್ಲಿ ಸಿಲ್ವರ್ ಜ್ಯೂಬಿಲಿ ಆಚರಿಸಿದ್ದು ದೇವಾಲಯ. ಹಾಗಂತ ಇದು ಪೌರಾಣಿಕ ಭಕ್ತಿ ಪ್ರಧಾನ ಚಿತ್ರವೇನಲ್ಲ. ಪಕ್ಕಾ ಸೆಕ್ಸ್ ಚಿತ್ರ. ಕೆಂಪೇಗೌಡ, ಹಿಮಾಲಯದಂಥ ಥೇಟರುಗಳಿಗೆಂದೇ ತಯಾರಾಗುತ್ತಿದ್ದ ಇಂಥ ಚಿತ್ರಗಳು 2003 ರ ತನಕ ಸಾಲುಸಾಲಾಗಿ ತೆರೆಕಂಡವು.

ನಿಸರ್ಗ ನಾಗರಾಜ್ ಎಂಬ ಘಟಿಂಗನೊಬ್ಬ ಏ ಟು ಝಡ್ ಹೆಸರಿನ ಹೊಲಸು ಚಿತ್ರ ತೆಗೆದರೆ ಶಿವಕುಮಾರ್ ಎಂಬಾತ ಬಿಸಿರಕ್ತ ಯೌವನದ ಹೊಳೆಯಲ್ಲಿ ಹೆಸರಿನ ಮತ್ತೆರಡು 'ರಸ'ಭಕ್ತಿ ಪ್ರಧಾನ ಸಿನಿಮಾ ನಿರ್ಮಿಸಿದ್ದ. ಗಜೇಂದ್ರಕೋಟೆ ಎಂಬುವವನೊಬ್ಬನ ರತಿ ವಿಜ್ಞಾನ, ಸಫೈರ್ ಮೂವೀಸ್, ಖದೀಮರು ತೆಗೆದ ರಹಸ್ಯ ತಮಿಳುನಾಡಿನಿಂದ ಬಂದಿದ್ದ ಗಣೇಶನ್ ತೆಗೆದ ನವಭಾರತಿ, ಜಿ.ಕೆ. ಕುಟ್ಟಿಯ ಶಂಭಾ, ನಾಯ್ಡು ಎಂಬಾತನ ಹೆಣ್ಣಿನ ರಹಸ್ಯ 16-20, (ಸಿಕ್ಸ್‌ಟೀನ್ ಟು ಟ್ವೆಂಟಿ) ರಹಸ್ಯ ರಾತ್ರಿ, ಏಡ್ಸ್, ಪ್ರಾಯಶ್ಚಿತ್ತ ಇತ್ಯಾದಿ ದೇವರ ಚಿತ್ರಗಳೆಲ್ಲ ಯಥೇಚ್ಛ ಉತ್ಪತ್ತಿಯಾದವು. ಯಾವತ್ತು ಪುಡಿ ಕಾಸಿಗೆ ಸೆಕ್ಸ್ ಸೀಡಿಗಳು ಮಾರುಕಟ್ಟೆಗೆ ಬಂದವೋ ಇಂಥ ಚಿತ್ರಗಳ ನಿರ್ಮಾಣವೆಂಬುದು ನಷ್ಟದ ಬಾಬತ್ತಾಯಿತು. ಕ್ರಮೇಣ ಇಂಥ ಸಿನಿಮಾ ಹಾಕುತ್ತಿದ್ದ ಥೇಟರುಗಳೂ ಕಣ್ಮರೆಯಾದವು.

ಹೀಗೆ ಕ್ಷೀಣಿಸಿದ ಸೆಕ್ಸ್ ಚಿತ್ರಗಳೇ ಈ ಥರದ ಬ್ಲೂಫಿಲ್ಮ್ ಸಂಸ್ಕೃತಿಯನ್ನು ಹುಟ್ಟುಹಾಕಿದ್ದು. ಬಿರಾದಾರ್‌ನಂಥ ಅಗದೀ ದರಕ್ಕೆ ಗಿಟ್ಟುವ ಕಲಾವಿದರನ್ನು ಹಾಕಿಕೊಂಡು ಮಾಮೂಲಿನಂತೆ ಶೂಟಿಂಗ್ ಮಾಡುವಾಗಲೇ ಒಂದಷ್ಟು ಮಂದಿ ಕಾಲ್‌ಗರ್ಲ್‌ಗಳನ್ನು ಕರೆಸಿ ಈ ಥರದ ಬ್ಲೂಫಿಲ್ಮ್ ತೆಗೆದುಬಿಡುತ್ತಾರೆ. ಇಂಥ ಬ್ಲೂಫಿಲ್ಮ್‌ಗಳಲ್ಲಿ ಬೆತ್ತಲಾಗಿ ನಟಿಸುವ ಹೆಂಗಸರದೇ ಪ್ರತ್ಯೇಕ ರೇಟು. ಕತೆಗೆ ಪೂರಕ ಎಜ್ಯುಕೇಷನ್ ಪರ್ಪೋಸು ಅಂತ ನಂಬಿಸಿ ವಿಸ್ಕಿ ಕುಡಿಸಿ ಯಾವುದೋ ಗಬ್ಬು ಲಾಡ್ಜ್ ಒಂದರಲ್ಲಿ ಶೂಟಿಂಗ್ ಮುಗಿಸುತ್ತಾರೆ. ಅಸಹ್ಯವಾಗಿದ್ದರೆ ಹೇಗೂ ಸೆನ್ಸಾರ್‌ರವರು ಕಟ್ ಮಾಡುತ್ತಾರೆಂದು ನಂಬಿಕೊಂಡೇ ಬಿರಾದಾರ್ ಥರದವರು ನಟಿಸುತ್ತಾರೆ ಅಥವಾ ಇಂಥ ಬಿಟ್ಸ್‌ಗಳನ್ನು ಕೇರಳ ಮತ್ತು ದುಬೈಗಷ್ಟೇ ಕಳಿಸುತ್ತೇವೆಂದೂ ಕರ್ನಾಟಕದಲ್ಲೆಲ್ಲೂ ಸಿಗದಂತೆ ಮಾಡುತ್ತೇವೆಂದೂ ನಂಬಿಸುತ್ತಾರೆ. ಇದಕ್ಕೆಂದು ಹೆಚ್ಚಿಗೆ ದುಡ್ಡನ್ನೂ ಕೊಡುತ್ತಾರೆ. ಅದೂ ಕೂಡ ಐದೋ ಹತ್ತೋ ಸಾವಿರ ಮಾತ್ರ!

ಬಹುಶಃ ಬಿರಾದಾರ್ ತನ್ನ ದಾರಿದ್ರ್ಯದ ದಿನಗಳಲ್ಲಿ ಇಂಥದೊಂದು ಆಮಿಷಕ್ಕೆ ಬಲಿಯಾಗಿರಬೇಕು. ಗ್ರಹಚಾರ ಕೆಟ್ಟಿದೆ. ದುರ್ದಿನಗಳಲ್ಲಿ ಮಾಡಿದ ಪಾಪಕ್ಕೆ ಬಿರಾದಾರ್ ಸುದಿನಗಳಲ್ಲಿ ಫಲ ಉಣ್ಣುತ್ತಿದ್ದಾನೆ. ■

ಜ್ಯೋತಿಷಿ : ಪಿಂಡ ಹಾಕೋ ಟೈಮಲ್ಲಿ ಯಡ್ಡಿ ಪ್ರಮಾಣ!

ಯಡ್ಡಿ ಗ್ರಹಚಾರ ಕೆಟ್ಟದೆ!

ಇದೇನು? ನಿನ್ನೆ ಮೊನ್ನೆ ಮುಖ್ಯಮಂತ್ರಿಯಾಗಿ, ಪಕ್ಷೇತರರ ಕೃಪಾಶೀರ್ವಾದದಿಂದ ಸದನದಲ್ಲಿ ವಿಶ್ವಾಸ ಮತವನ್ನೂ ಗೆದ್ದಿರುವ ಯಡ್ಡಿಯ ಗ್ರಹಚಾರವೇಕೆ ಕೆಟ್ಟದೆ ಎಂದು ಯೋಚಿಸುತ್ತಿರುವಿರಾ?

ಹೀಗೆ ಹೇಳುತ್ತಿರುವವರು ಬೇರೆ ಯಾರೂ ಅಲ್ಲ. ಯಡ್ಡಿ ಒಡ್ಡೋಲಗದಲ್ಲಿರುವ ಜ್ಯೋತಿಷಿಗಳು!

ಹೌದು, ಮುಖ್ಯಮಂತ್ರಿಗಳ ಹಿಂದೆಮುಂದೆ ಸುತ್ತುತ್ತಿರುವ ಜ್ಯೋತಿಷಿಗಳಿಗೆ ಈಗ ದಿನವೂ ಇವರೆಷ್ಟು ದಿನ ಮುಖ್ಯಮಂತ್ರಿಯಾಗಿ ಮುಂದುವರೆಯಲಿದ್ದಾರೆ ಎಂದು ಲೆಕ್ಕ ಹಾಕುವುದೇ ಕೆಲಸ. ಏಕೆಂದರೆ ಯಡ್ಡಿ ಪ್ರಮಾಣವಚನ ಸ್ವೀಕರಿಸಿದ ಟೈಮು, ಇವರೆಲ್ಲರ ಲೆಕ್ಕಾಚಾರಗಳನ್ನು ತಲೆಕೆಳಗು ಮಾಡಿದೆ. ಜೊತೆಗೆ ಪಕ್ಷದಲ್ಲಿ ಭಿನ್ನಮತ ಭುಗಿಲೆದ್ದು ಜ್ಯೋಷಿಗಳೇ ಆತಂಕಪಡುವ ಸ್ಥಿತಿ ನಿರ್ಮಾಣವಾಗಿದೆ. 'ಹೋಗಿ, ಹೋಗಿ ಪಿಂಡ ಪ್ರಧಾನ ಮಾಡುವ ಟೈಮಲ್ಲಿ ಪ್ರಮಾಣವಚನ ಸ್ವೀಕರಿಸಿದ್ದಾರಲ್ರೀ, ಯಾರ್ರೀ ಇವರಿಗೆ ಈ ಟೈಮು ಇಟ್ಟುಕೊಟ್ಟದ್ದು' ಎಂದು ಈ ಜ್ಯೋತಿಷಿಗಳು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಮಾತನ್ನು ಈಗಲೂ ಅನುಮಾನಿಸುತ್ತಿದ್ದಾರೆ. ಮಾತಿನಲ್ಲಿ ಮೋಡಿ ಮಾಡುವ ಈ ದೈವಜ್ಞ, ಎಲ್ಲಿ ತಮ್ಮ ಸರಕಾರವನ್ನು ಯಾಮಾರಿಸುತ್ತಾನೋ ಎಂಬ ಆತಂಕ ಅವರದ್ದು. ಹೀಗಾಗಿ ಸೋಮಯಾಜಿ ಇಟ್ಟು ಕೊಟ್ಟಿದ್ದ ಮುಹೂರ್ತವನ್ನು ಹಲವು ಜ್ಯೋತಿಷಿಗಳ ಹತ್ತಿರ ಪರಿಶೀಲಿಸಲಾಯಿತು. ಮಗ ವಿಜಯೇಂದ್ರ, ಕಟ್ಟಾ ಸುಬ್ರಹ್ಮಣ್ಯ ನಾಯ್ಡುಗೆ ಇದೇ ಕೆಲಸವಾಯಿತು.

ಹಿಂದೆ ದೇವೇಗೌಡ ಪ್ರಧಾನಿಯಾಗಿದ್ದಾಗ ಅವರ ತಲೆ ಸವರಿ, ಹೆಸರು-ಕಾಸು ಮಾಡಿಕೊಂಡಿದ್ದ ಕೊಪ್ಪದ ಮತ್ತೊಬ್ಬ ಕುಖ್ಯಾತ ಜ್ಯೋತಿಷಿ ಬಾಲಗೋಪಾಲ್ ಜೋಯಿಸ್ ಅವರನ್ನೂ ಮಗ ವಿಜೇಂದ್ರ ಸಂಪರ್ಕಿಸಿದ್ದಾಯಿತು. ಅವರು ಸೋಮಯಾಜಿ ಜೊತೆಗೆ ಈಗೇಕೆ ಫೈಟಿಂಗ್ ಎಂದು ಸೋಮಯಾಜಿ ಇಟ್ಟಿದ್ದ ಟೈಮಿಗೆ ಒಪ್ಪಿಗೆ ನೀಡಿದರು. ಅಂತೂ ಯಡ್ಡಿ ಪ್ರಮಾಣವಚನ ಸ್ವೀಕರಿಸಿದ್ದಾಯಿತು.

ಈಗ, ಗೌಡರು ಪ್ರಧಾನಿಯಾಗಿದ್ದಾಗ ಅವರಿಗೆ ಕಾಳಸರ್ಪ ಯೋಗವಿದೆಯೆಂದು ಬೆಳ್ತಂಗಡಿಯಲ್ಲಿ ಯಾಗ ನಡೆಸಿ, ಕೋಣವನ್ನು ಬಲಿಕೊಟ್ಟು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿ ಮಾಡಿದ್ದ ಬಾಲಗೋಪಾಲ ಜೋಯಿಸ್ ಕೂಡ ಯಡ್ಡಿ ಜ್ಯೋತಿಷಿಗಳ ಅಡ್ಡೆ



ಸೇರುವ ಹುನ್ನಾರದಲ್ಲಿದ್ದಾನೆ. ಯಡ್ಡಿ ಭವಿಷ್ಯವನ್ನು ಇನ್ನು ದೇವರೇ ಕಾಪಾಡಬೇಕು!

ಅಂತಹ ಸಲಹೆ ಕೊಟ್ಟಿದ್ದು ಕುಖ್ಯಾತ ಜ್ಯೋತಿಷಿ ಸೋಮಯಾಜಿ!

ಹಿಂದೆ ಯಡ್ಡಿ ಮುಖ್ಯಮಂತ್ರಿಯಾಗುವುದಿಲ್ಲ ಎಂದು ಭವಿಷ್ಯ ಹೇಳಿ ಬಿಜೆಪಿ ಕಾರ್ಯಕರ್ತರಿಂದ ಉಗಿಸಿಕೊಂಡಿದ್ದ ಶೃಂಗೇರಿ ಮಠದ ಜ್ಯೋತಿಷಿ ಕೆ.ಎನ್. ಸೋಮಯಾಜಿಯೇ ಈ ಮುಹೂರ್ತ ಫಿಕ್ಸ್ ಮಾಡಿದ್ದು. ಹೀಗಾಗಿ ಈಗ ಬೇರೆ ಜ್ಯೋತಿಷಿಗಳು ಅವರನ್ನು ಉಗಿದು ಉಪ್ಪಿನಕಾಯಿ ಹಾಕುತ್ತಿದ್ದಾರೆ.

ಚುನಾವಣೆಗೂ ಮೊದಲೇ 'ನಿಮ್ಮನ್ನು ಈ ಬಾರಿ ಮುಖ್ಯಮಂತ್ರಿ ಮಾಡಿಯೇ ತೀರುತ್ತೇನೆ' ಎಂದು ಯಡ್ಡಿಯಿಂದ ಕೋಟಿಗಟ್ಟಲೆ ತಿಂದು, ಶೋಭಕ್ಕನ ತಲೆ ಸವರಿ, ಆಕೆಯಿಂದಲೂ ಪೀಕಿರುವ ಈ 'ದೈವಜ್ಞ' ಈಗ ಯಡ್ಡಿಯ ಆಸ್ಥಾನ ಜ್ಯೋತಿಷಿಯಾಗಿದ್ದಾರೆ. ಇದು ಸಹಜವಾಗಿಯೇ ಲಿಂಗಾಯತ ಮತ್ತು ಇತರ ಜ್ಯೋತಿಷಿಗಳ ತಲೆ ಕೆಡಿಸಿದೆ. "ಯಡಿಯೂರಪ್ಪನವರ ಹೆಸರಿನಲ್ಲಿ ಹೋಮ-ಹವನ ಮಾಡುತ್ತಿದ್ದೇನೆ, ಇದರಿಂದಾಗಿಯೇ ಅವರು ಮುಖ್ಯಮಂತ್ರಿಯಾಗಿದ್ದು, ಶೋಭಕ್ಕ ಗೆದ್ದಿದ್ದು" ಎಂದು ನಂಬಿಸಿ, ಅವರು ನೀಡುವ ಭಕ್ಷೀಸ್‌ನಲ್ಲಿ ಹೆಲಿಕಾಪ್ಟರ್‌ನಲ್ಲಿ ಓಡಾಡುತ್ತಿರುವ ಈ 'ದೇವತಾಪುರುಷ' ಬೇರೆ ಜ್ಯೋತಿಷಿಗಳ ಹೊಟ್ಟೆ ಉರಿಸುತ್ತಿದ್ದಾನೆ.

ಇವರೇನೋ ಯಡ್ಡಿ ಐದು ವರ್ಷ ಅಧಿಕಾರದಲ್ಲಿರುವುದು ಖಚಿತ ಎಂದು ಹೇಳುತ್ತಿದ್ದಾರೆ. ಆದರೆ "ಪಿಂಡ ಪ್ರಧಾನ ಮಾಡುವ ಟೈಮಲ್ಲಿ ಪ್ರಮಾಣವಚನ ಸ್ವೀಕರಿಸಿರುವುದರಿಂದ ಆರು ತಿಂಗಳೋ, ಒಂದು ವರ್ಷವೋ ಇದ್ದರೆ ಹೆಚ್ಚು, ಐದು ವರ್ಷವಂತೂ ಕನಸಿನ ಮಾತು" ಎಂದು ಬೇರೆ ಜ್ಯೋತಿಷಿಗಳು ಹೇಳುತ್ತಿದ್ದಾರೆ. ಯಡ್ಡಿ ಜಾತಕಕ್ಕೆ ಕನ್ಯಾ ಲಗ್ನವೇ ಕರೆಕ್ಟಾಗಿ ಹೊಂದಾಣಿಕೆಯಾಗುತ್ತದೆ. ಅದಕ್ಕೆ ಈ ಟೈಮ್ ಇಟ್ಟಿರುವುದು ಎಂಬುದು ಸೋಮಯಾಜಿ ವಿವರಣೆ.

ಜ್ಯೋತಿಷ್ಯವೆಂಬ ಮೂರ್ಖರ ಕಟ್ಟೆಯಲ್ಲಿ ಈ ತಲೆ-ಬುಡವಿಲ್ಲದ ಚರ್ಚೆ ಮುಂದುವರಿದಿದೆ. ಕೋಡಿ ಮಠದ ಸ್ವಾಮೀಜಿಗಳೂ ಈ ಸರ್ಕಾರದ ಆಯುಸ್ಸು ಆರು ತಿಂಗಳು ಎಂದಿರುವುದು ಈ ಮೂರ್ಖರ ಸಂತೆಗೆ ಹೊಸ ವಿಷಯ ಒದಗಿಸಿದೆ. ಮಂತ್ರಿಸ್ಥಾನ ತಪ್ಪಿದವರು, ಯಡ್ಡಿ ವಿರೋಧಿಗಳು ಮಾತ್ರ ಜ್ಯೋತಿಷಿಗಳ ಮಾತು ಸತ್ಯವಾಗಲಿ ಎಂದು ಒಳಗೊಳಗೇ ಆಸೆ ಪಡುತ್ತಿದ್ದಾರೆ!

ಜೋಯಿಸ್ ಎಂಟ್ರಿ

ಸೋಮಯಾಜಿಯನ್ನು ಯಡ್ಡಿ ಸಂಪೂರ್ಣವಾಗಿ ನಂಬಿರಬಹುದು. ಆದರೆ ಅವರ ಮಕ್ಕಳು ಮತ್ತು ಪಕ್ಷದ ಇತರ ನಾಯಕರು ಅವರ

ಅನುಗ್ರಹಕ್ಕೆ ಹೋಗುತ್ತಿಲ್ಲ!

ಯಡ್ಡಿ ತಾವು ಈ ನಾಡಿನ ಮುಖ್ಯಮಂತ್ರಿ ಎಂಬುದನ್ನು ಮರೆತು ಮೂರ್ಖರ ಮುಖ್ಯಮಂತ್ರಿಯಾಗಲು ಹೊರಟಿದ್ದಾರೆ. ಹೀಗಾಗಿ ಅವರು ಮುಖ್ಯಮಂತ್ರಿಗಳ ಅಧಿಕೃತ ನಿವಾಸ 'ಅನುಗ್ರಹ'ಕ್ಕೆ ಹೋಗುತ್ತಿಲ್ಲ. ಅದ್ಯಾವ ತಲೆಕೆಟ್ಟ ಜ್ಯೋತಿಷಿ ಅನುಗ್ರಹಕ್ಕೆ ಹೋದರೆ ಅಧಿಕಾರ ಕಳೆದುಕೊಳ್ಳುತ್ತೀರಿ ಎಂದು ಹೇಳಿದ್ದಾನೋ ಗೊತ್ತಿಲ್ಲ. ತಾವು ಉಪಮುಖ್ಯಮಂತ್ರಿಯಾಗಿದ್ದಾಗ ರೇಸ್‌ಕೋರ್ಸ್ ರಸ್ತೆಯಲ್ಲಿ ಉಳಿದುಕೊಂಡಿದ್ದ ನಿವಾಸದಲ್ಲಿಯೇ ಉಳಿದುಕೊಳ್ಳಲಿದ್ದಾರೆ.

ವಿಕಾಸ ಸೌಧಕ್ಕೂ ಕುತ್ತು!

ಯಡ್ಡಿ ಮುಖ್ಯಮಂತ್ರಿಯಾಗುವಾಗ ದಿನವಿಡೀ ವಿಧಾನಸೌಧದ ತಮ್ಮ ಕಚೇರಿಯಲ್ಲಿ ಹೋಮ-ಹವನ ನಡೆಸಿ ಗಬ್ಬೆಬ್ಬಿಸಿದ್ದು, ಪ್ರಜಾತಂತ್ರಕ್ಕೆ ಅವಮಾನ ಮಾಡಿದ್ದು ಎಲ್ಲರೂ ಗಮನಿಸಿದ್ದಾರೆ. ದೊಡ್ಡಣ್ಣನ ಚಾಳಿ ಮನೆಮಂದಿಗೆಲ್ಲ ಎಂಬಂತೆ ಈಗ ಎಲ್ಲ ಸಚಿವರು ತಮ್ಮ ಕೊಠಡಿ ಪ್ರವೇಶಿಸುವಾಗ ಇದೇ ರೀತಿ ಪೂಜೆ ಪುನಸ್ಕಾರ ನಡೆಸಿದ್ದಾರೆ. ಅಧಿಕಾರಿಗಳ ಮತ್ತು ಜನಪ್ರತಿನಿಧಿಗಳ ತಾಣವಾಗಿದ್ದ ವಿಧಾನಸೌಧವೀಗ ಪುರೋಹಿತಶಾಹಿಗಳ ಬಿಡಾರವಾಗಿ ಬದಲಾಗಿದೆ.

ಕೊಠಡಿ ಪಡೆಯಲೂ ಸಂಖ್ಯೆ ಲೆಕ್ಕಾಚಾರ ಹಾಕುವ, ಬಾಗಿಲು ಯಾವ ದಿಕ್ಕಿನಲ್ಲಿದೆ ಎಂದು ನೋಡುವ ಮೂರ್ಖರಿಗೆ ತಾವು ಇಲ್ಲಿಗೆ ಏಕೆ ಬಂದಿದ್ದೇವೆ ಎಂಬುದಕ್ಕಿಂತ ತಾವು ಇಲ್ಲಿ ಎಷ್ಟು ದಿನ ಉಳಿದುಕೊಳ್ಳಬಹುದು ಎಂಬುದೇ ಮುಖ್ಯವಾಗಿ ಹೋಗಿದೆ.

ಅದಕ್ಕೆಲ್ಲ ಕಳಶವಿಟ್ಟಂತೆ ಮಂತ್ರಿಮಹೋದಯರನ್ನು ಮೂರ್ಖರಾಗಿಸುತ್ತಿರುವ ಜ್ಯೋತಿಷಿಗಳ ಕಣ್ಣೀಗ ವಿಕಾಸಸೌಧದ ಮೇಲೂ ಬಿದ್ದಿದೆ. ಒಬ್ಬ ಜ್ಯೋತಿಷಿಯಂತೂ ವಿಕಾಸ ಸೌಧದ ವಾಸ್ತು ಸರಿ ಇಲ್ಲ, ಹೀಗಾಗಿ ರಾಜ್ಯದಲ್ಲಿ ಸ್ಥಿರ ಸರ್ಕಾರ ಇನ್ನು ಕನಸಿನ ಮಾತು ಎಂದು ಹೇಳಿದ್ದಾನಂತೆ. ಮಾಜಿ ಮುಖ್ಯ ಮಂತ್ರಿ ಎಸ್.ಎಂ.ಕೃಷ್ಣ ಈ ಸೌಧವನ್ನು ಉದ್ಘಾಟಿಸಿದ ಮೇಲೆ ರಾಜ್ಯದಲ್ಲಿ ಸ್ಥಿರ ಸರ್ಕಾರ ರಚನೆಯಾಗಿಲ್ಲ, ಇದಕ್ಕೆ ಈ ಸೌಧದ ವಾಸ್ತುವೇ ಕಾರಣ ಎಂಬುದು ಆತನ ವಿವರಣೆಯಂತೆ!

ತಲೆಕೆಟ್ಟ ಈತನ ಮಾತನ್ನು ಕೇಳಿ ವಿಕಾಸ ಸೌಧವನ್ನೇ ನಮ್ಮ ಈ ಮೂರ್ಖ ಜನಪ್ರತಿನಿಧಿಗಳು ಕೆಡವದಿದ್ದರೆ ಸಾಕು! ■



ಚಿಕ್ಕಮಾದು ಕಿತಾಪತಿ

ಹೌದು, ಎಮ್ಮೆಲ್ಸಿ ಚಿಕ್ಕಮಾದು ಈಗ ಮತ್ತೊಂದು ಕಿತಾಪತಿ ಶುರುಹಚ್ಚಿಕೊಂಡಿದ್ದಾರೆ. ಈ ಕಾರಣಕ್ಕಾಗಿ ತಮ್ಮ ಸ್ವಂತ ಊರಾದ ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ರಾಮನಹಳ್ಳಿಯ ಜನರೇ ಇವರ ವಿರುದ್ಧ ಈಗ ತಿರುಗಿ ಬಿದ್ದಿದ್ದಾರೆ.

ರಾಮನಹಳ್ಳಿಯಲ್ಲಿ ಜಯಣ್ಣ ನಾಯಕ ಎಂಬುವವರು ತಮ್ಮ ಜಮೀನು ಆಸ್ತಿಪಾಸ್ತಿ ಎಲ್ಲ ಮಾರಿ ಬಂದ ಒಂದೂವರೆ ಕೋಟಿ ಹಣದಲ್ಲಿ ಊರಿನಲ್ಲಿ ಒಂದು ಮಾರುತಿ ಮಂದಿರ ಮತ್ತು ಮಕ್ಕಳ ಶಿಕ್ಷಣಕ್ಕೆಂದು ಒಂದು ಉಚಿತ ಶಾಲೆಯನ್ನು ಕಟ್ಟಿಸಿದ್ದಾರೆ. ಮಾರುತಿ ಮಂದಿರವನ್ನು 1994ರಲ್ಲಿಯೇ ಸ್ಥಾಪಿಸಲಾಗಿದ್ದು ಮೈಸೂರಿನ ಪರಕಾಲು ಮಠದ ಸ್ವಾಮಿಗಳೇ ಇದನ್ನು ಉದ್ಘಾಟನೆ ಮಾಡಿದ್ದರು. ನಂತರದಲ್ಲಿ ಶಾಲೆ ನಿರ್ಮಾಣವಾಯಿತು. ಈಗ ವಿವಿಧ ಧಾರ್ಮಿಕ, ಸಾಮಾಜಿಕ ಕಾರ್ಯಕ್ರಮಗಳಿಗೆ ಅನುಕೂಲವಾಗಲೆಂದು ಒಂದು ಸಮುದಾಯ ಭವನ ನಿರ್ಮಾಣಗೊಳ್ಳುತ್ತಿದೆ. ಲಕ್ಷ್ಮಣತೀರ್ಥ ನದಿಯ ತಟದಲ್ಲಿರುವ ಈ ಪ್ರದೇಶ ಬೇಲೂರು ಹೆದ್ದಾರಿಯ (ಹಾಸನ-ಕೆ.ಆರ್.ನಗರ ಹೆದ್ದಾರಿ) ಬಳಿಯಲ್ಲಿರುವುದರಿಂದ ಜನರು ಇಲ್ಲಿಗೆ ಭೇಟಿ ನೀಡುತ್ತಿರುವುದೂ ಇತ್ತೀಚೆಗೆ ಹೆಚ್ಚಾಗುತ್ತಿದೆ. ಸರಳವಿವಾಹ, ಪೂಜೆ, ಪುನಸ್ಕಾರ ಮುಂತಾದ ಕಾರ್ಯಕ್ರಮಗಳೂ ನಿತ್ಯ ನಡೆಯುತ್ತಿದ್ದು ಇದು ಒಂದು ಪರಿಪೂರ್ಣ ಧಾರ್ಮಿಕ ಕ್ಷೇತ್ರವಾಗಿ ಮೈದಳೆಯುತ್ತಿದೆ.

ಇದೆಲ್ಲದರ ರೂವಾರಿಯಾಗಿರುವ ಜಯಣ್ಣ ನಾಯಕ ಅವರಿಗೆ ಮಕ್ಕಳಿಲ್ಲ ಮರಿಗಳಿಲ್ಲ. ಹಾಗಾಗಿ ಇದ್ದ ಬದ್ದ ಆಸ್ತಿಯನ್ನು ಮಾರಿ ಈ ರೀತಿಯಲ್ಲಿ ಸಮಾಜ ಸೇವಾ ಕಾರ್ಯದಲ್ಲಿ ನಿರತನಾಗಬೇಕೆಂಬುದು ಅವರ ಇಚ್ಛೆ. ಈ ಬಯಕೆಯ ಹಿಂದೆ ಎಷ್ಟರಮಟ್ಟಿಗೆ ಪ್ರಾಮಾಣಿಕತೆಯಿದೆ ಎಂಬ ಚರ್ಚೆಗೀಗ ಹೋಗುವುದು ಬೇಡ.


ಆದರೆ, ಇಂತಹ ಒಂದು ಕೆಲಸಕ್ಕೆ ಸುಖಾಸುಮ್ಮನೇ ಅಡ್ಡಿಪಡಿಸುತ್ತಿರುವವ ಮಹಾಶಯನೇ ಎಮ್ಮೆಲ್ಸಿ ಚಿಕ್ಕಮಾದು. ಹುಣಸೂರು ಸಹಾಯಕ ಆಯುಕ್ತ ರವಿಯವರ ಮೇಲೆ ಒತ್ತಡ ತಂದು ನಿರ್ಮಾಣಗೊಳ್ಳುತ್ತಿರುವ ಸಮುದಾಯ ಭವನವನ್ನು ಅರ್ಧಕ್ಕೆ ನಿಲ್ಲಿಸಿದ್ದಾನೆ. ಚಿಕ್ಕಮಾದುವಿನ ಬೆಂಬಲಕ್ಕೆ ಅಲ್ಲಿನ ಜನರ್‍ಯಾರೂ ಇಲ್ಲ. ಇರುವ ಒಬ್ಬನೇ ಒಬ್ಬ ವ್ಯಕ್ತಿ ಎಂದರೆ ಮಾಜಿ ಪಂಚಾಯತ್ ಅಧ್ಯಕ್ಷ ಸಿದ್ದನಾಯಕ. ಈತ ಕೂಡ ಸಹಕಾರ ಸಂಘದ ಸೆಕ್ರೆಟರಿಯಾಗಿದ್ದು ಜನರಿಗೆ ಸಲ್ಲಬೇಕಿದ್ದ ಆಹಾರ ಧಾನ್ಯಗಳನ್ನು ತಿಂದು ಮೈಕೈ ಹೊಲಸು ಮಾಡಿಕೊಂಡವನೇ.

ನಾಯಕ ಜನಾಂಗದ ಚಿಕ್ಕಮಾದುವನ್ನು ದೇವೇಗೌಡರು ಎಮ್ಮೆಲ್ಸಿ ಮಾಡಿದಾಗ ಮೈಸೂರು ಮತ್ತು ಚಾಮರಾಜನಗರದ ನಾಯಕ ಜನಾಂಗದವರು ಒಂದಿಷ್ಟು ಖುಷಿಯಾಗಿದ್ದರು; ತಮ್ಮ ಜನಾಂಗದ ಉದ್ಧಾರ ಮಾಡುತ್ತಾನೆಂದು ನಂಬಿದ್ದರು. ಆದರೆ, ಈಗ ಅದೇ ಜನಾಂಗದ ವಿರುದ್ಧ ಆತ ಮಾಡುತ್ತಿರುವ ಕಿರಿಕಿರಿ, ಕಿತಾಪತಿಯನ್ನು ನೋಡಿ ಅವರೇ ತಿರುಗಿಬಿದ್ದಿದ್ದಾರೆ.

ಅಸಲಿಗೆ ಚಿಕ್ಕಮಾದು ಏಕೆ ಇಂತಹ ತಿಕ್ಕಲ ಕಿತಾಪತಿ ಮಾಡುತ್ತಿದ್ದಾನೆಂಬುದೂ ಸ್ವಾರಸ್ಯಕರವಾಗಿದೆ. ಮೊದಲನೆಯದು, ಈ ದೇವಸ್ಥಾನದ ಪ್ರಮುಖ ಸಭೆ, ಸಮಾರಂಭಗಳಿಗೆ ಚಿಕ್ಕಮಾದುನನ್ನು ಮುಖ್ಯ ಅತಿಥಿಯಾಗಿ ಕರೆಯುತ್ತಿರಲಿಲ್ಲ. ದೇವಸ್ಥಾನದ ಆವರಣದಲ್ಲಿ ಈತನ ಹೆಸರನ್ನು ಬರೆಸಬೇಕಿತ್ತಂತೆ, ಅದನ್ನೂ ಮಾಡಿಲ್ಲ. ಅದೂಅಲ್ಲದೇ, ಹಿಂದೊಮ್ಮೆ ಬೆಂಗಳೂರಿಗೆ ಹೋಗಿಬರುವುದಕ್ಕೆ ಚಿಕ್ಕಮಾದು ಹತ್ತಿರ ಕಾಸಿಲ್ಲದಿದ್ದಾಗ ಭಕ್ತಾದಿಗಳು ದೇವಸ್ಥಾನಕ್ಕೆ ಕೊಟ್ಟ ದೇಣಿಗೇ ಹಣದಲ್ಲಿಯೇ ಐದು ಸಾವಿರ ರೂ.ಗಳನ್ನು ಜಯಣ್ಣ ನಾಯಕ ಚಿಕ್ಕಮಾದುವಿಗೆ ಕೊಟ್ಟಿದ್ದ. ಈಗ ಸಾರ್ವಜನಿಕರ ದೇಣಿಗೆ ಹಣವನ್ನು ವಾಪಸ್ಸು ಕೊಡು ಎಂದು ಆತ ಕೇಳಿದ್ದೇ ಚಿಕ್ಕಮಾದುವಿನ ಪಿತ್ತವನ್ನು ನೆತ್ತಿಗೇರಿಸಿತು. ಹೀಗೆ, ತನಗೆ ಸಲ್ಲಬೇಕಾದ ಮಾನ್ಯತೆಯನ್ನೂ ನೀಡಲಿಲ್ಲ, ಕೊನೆಗೆ ತನ್ನಿಂದಲೇ ಹಣ ವಾಪಸ್ಸು ಕೇಳುವಷ್ಟು ಜಂಬ ಜಯಣ್ಣ ನಾಯಕನಿಗೆ ಬಂದುಬಿಟ್ಟಿತೇ ಎಂದು ಸಿಟ್ಟಿಗೆದ್ದು ಈ ರೀತಿ ಸೇಡು ತೀರಿಸಿಕೊಳ್ಳುತ್ತಿದ್ದಾನೆ.

ಚಿಕ್ಕಮಾದುವಿಗೆ ಈಗಲೂ ಕಾಲ ಮಿಂಚಿಲ್ಲ, ತನ್ನಿಂದಾಗಿರುವ ತಪ್ಪನ್ನು ಒಪ್ಪಿಕೊಂಡು ತನ್ನ ಜನಾಂಗದ ಕ್ಷಮೆಯಾಚಿಸಿ ನಡೆಯುತ್ತಿರುವ ಧಾರ್ಮಿಕ ಕಾರ್ಯಕ್ಕೆ ಅಡ್ಡಿಪಡಿಸದೇ ಇದ್ದರೆ ಆತನಿಗೇ ಒಳ್ಳೆಯದು. ಇಲ್ಲದಿದ್ದರೆ ತನ್ನ ಜನಾಂಗದವರಿಂದಲೇ ಛೀ... ಥೂ... ಎಂದು ಉಗಿಸಿಕೊಳ್ಳಬೇಕಾದೀತು. ■

ನರ್ಸ್ ರೇಣುಕಾಚಾರ್ಯನಿಗೆ 'ಮುಚ್ಚಲೇ ಬಾಯಿ' ಎಂದ ರೈತರು



ರಾಜ್ಯಾದ್ಯಂತ ರೈತರು ರಸಗೊಬ್ಬರಕ್ಕಾಗಿ ಬೀದಿಗಿಳಿಯುತ್ತಿದ್ದಾರೆ. ರೈತರು ರಸಗೊಬ್ಬರವನ್ನು ಸಬ್ಸಿಡಿ ಮೂಲಕವನ್ನೋ, ಇಲ್ಲವೇ ಪುಕ್ಕಟೆಯಾಗಿ ಕೊಡಲು ಸರ್ಕಾರವನ್ನು ಕೇಳುತ್ತಿಲ್ಲ. ಕೈಯಲ್ಲಿ ಹಣವನ್ನು ಇಟ್ಟುಕೊಂಡು ಎಲ್ಲ ಅಂಗಡಿಗಳ ಕದ ತಟ್ಟುತ್ತಿದ್ದರೂ ರೈತರಿಗೆ ಗೊಬ್ಬರ ಮಾತ್ರ ಸಿಗುತ್ತಿಲ್ಲ. ಗೊಬ್ಬರವನ್ನು ಅಕ್ರಮವಾಗಿ ದಾಸ್ತಾನು ಮಾಡಿಕೊಂಡಿರುವ ಅಂಗಡಿಗಳ ಮಾಲೀಕರು ಮಾತ್ರ ನಿಗದಿತ ಬೆಲೆಗಿಂತ ಹೆಚ್ಚಿನ ಲಾಭಕ್ಕೆ ಕಾಳಸಂತೆಯಲ್ಲಿ ಮಾರಿಕೊಳ್ಳುತ್ತಿದ್ದಾರೆ. ದಾವಣಗೆರೆಯಲ್ಲಿ ಕಳೆದ ಒಂಬತ್ತು ದಿನಗಳಿಂದ ರಸಗೊಬ್ಬರಕ್ಕಾಗಿ ರೈತ ಸಂಘಟನೆಯ ಬುಳ್ಳಾಪುರ ಹನುಮಂತಪ್ಪ, ಆವರಗೆರೆ ರುದ್ರಮುನಿ, ಹುಚ್ಚ



ವ್ವನಹಳ್ಳಿ ಮಂಜುನಾಥ್ ಮುಂತಾದ ನಾಯಕರ ನೇತೃತ್ವದಲ್ಲಿ ತೀವ್ರವಾಗಿ ಪ್ರತಿಭಟನೆ ನಡೆಯುತ್ತಿದೆ. ಅಕ್ರಮ ಗೊಬ್ಬರ ದಾಸ್ತಾನುಗಳ ಮೇಲೆ ರೈತ ಸಂಘದವರು ದಾಳಿ ಮಾಡಿ ಅಲ್ಪಸ್ವಲ್ಪ ರಸಗೊಬ್ಬರವನ್ನು ರೈತರಿಗೆ ಹಂಚುತ್ತಿದ್ದರಾದರೂ ಇನ್ನೂ ದೊಡ್ಡ ಪ್ರಮಾಣದಲ್ಲಿ ಗೊಬ್ಬರ ಬೇಕಾಗಿರುವ ತಕ್ಷಣ ಒತ್ತಡದಿಂದಾಗಿ ರೈತರು ಕಂಗಾಲಾಗಿದ್ದಾರೆ. ಒಂದು ಕಡೆ ಇಲ್ಲಿನ ಜಿಲ್ಲಾಧಿಕಾರಿ ಎಂ.ಬಿ. ದ್ಯಾಬೇರಿ ರಾಜಕಾರಣಿಗಳ ರೀತಿ ಪುಕ್ಕಟೆ ಆಶ್ವಾಸನೆಗಳನ್ನು ಕೊಡುತ್ತಿದ್ದಾನೆ. ಇನ್ನೊಂದು ಕಡೆ ರೈತರ ಪಕ್ಷವೆಂದು ಹೇಳಿಕೊಳ್ಳುತ್ತಿರುವ ಮಂತ್ರಿ, ಶಾಸಕರು ಪ್ರತಿಭಟನೆಯ ದಿನದಂದು ಉದ್ದುದ್ದ ಆಶ್ವಾಸನೆ ನೀಡಿದರೆ ಹೊರತು ಇದುವರೆಗೂ ಈ ಕಡೆ ತಲೆ ಹಾಕಿಲ್ಲ.

ಮೇ 25 ರಂದು ಸಾಂಕೇತಿಕವಾಗಿ ಪ್ರಾರಂಭಗೊಂಡ ರೈತ ಚಳವಳಿಯು 29 ರಂದು ಕೊಗ್ಗನೂರು ಬಳಿ ಹೆದ್ದಾರಿ ಬಂದ್ ಮಾಡುವ ಮೂಲಕ ಕಾವನ್ನು ಪಡೆದುಕೊಂಡಿತು. ಆ ನಂತರ ಲೋಕಿಕೆರೆ, ತುರ್ಚಘಟ್ಟ, ಲಕ್ಕಮುತ್ತೇನಹಳ್ಳಿ ಹಾಗೂ ನಲ್ಲೂರುಗಳಲ್ಲಿ ಅಕ್ರಮ ದಾಸ್ತಾನಿನಲ್ಲಿದ್ದ ರಸಗೊಬ್ಬರವನ್ನು ಹೊರ ತೆಗೆದು ರೈತರಿಗೆ ಹಂಚುವ ಮೂಲಕ ಜಿಲ್ಲಾಡಳಿತಕ್ಕೆ ನುಂಗಲಾರದ ತುತ್ತಾಗಿ ಪರಿಣಮಿಸಿತು. ಜೊತೆಗೆ ಇಡೀ ಜಿಲ್ಲೆಯ ರೈತ ಸಮುದಾಯ ಈ ಚಳವಳಿಯನ್ನು ಬೆಂಬಲಿಸುವ ಮಟ್ಟಕ್ಕೆ ಮುಂದುವರೆಯಿತು.

ಮೇ 30 ರಂದು ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ಮತ್ತು ರಸ್ತೆತಡೆ, ಜೂನ್ ಒಂದರಂದು ಮತ್ತೆ ಪ್ರತಿಭಟನೆ ಹೀಗೆ ಮಾರನೇ ದಿನದ ಹೊತ್ತಿಗೆ ಇಡೀ ಜಿಲ್ಲೆಗೆ ರೈತ ಚಳವಳಿ ವ್ಯಾಪಕವಾಗಿ ಹಬ್ಬಿದ್ದರಿಂದ ಅಂದು ಸಾಹಸ್ರಾರು ಸಂಖ್ಯೆಯಲ್ಲಿ ರೈತರು ಪ್ರತಿಭಟನೆಗಿಳಿದರು. ಸರ್ಕಾರಿ ಬಸ್ ನಿಲ್ದಾಣ, ಮೋತಿ ಸರ್ಕಲ್, ಲಾಯರ್ ಬೀದಿ ಹೀಗೆ ಐದು ಆಯಕಟ್ಟಿನ ರಸ್ತೆಗಳನ್ನು ರೈತರು ತಮ್ಮ ಹಿಡಿತಕ್ಕೆ ತೆಗೆದುಕೊಂಡು ಇಡೀ ದಾವಣಗೆರೆಯ ರಸ್ತೆಯ ಸಂಚಾರವನ್ನು ಸ್ಥಗಿತಗೊಳಿಸಿದ್ದರು.

ಅಂದೇ ಮಂತ್ರಿ ಎಸ್.ಎ. ರವೀಂದ್ರನಾಥ್ ಹಾಗೂ ಸಂಸದ ಸಿದ್ದೇಶ್ ನೇತೃತ್ವದಲ್ಲಿ ಬಿಜೆಪಿ ವಿಜಯೋತ್ಸವ ಹಾಗೂ ನೂತನ ಮಂತ್ರಿ ಶಾಸಕರ ಸನ್ಮಾನ ಕಾರ್ಯವನ್ನು ಹಮ್ಮಿಕೊಂಡಿದ್ದರಿಂದ ರೈತರ ತೀವ್ರ ಪ್ರತಿಭಟನೆಯಿಂದಾಗಿ ತಮ್ಮ ವಿಜಯೋತ್ಸವಕ್ಕೆ ಅಡ್ಡಿ ಉಂಟಾಗಬಹುದೆಂದು ಡಿ.ಸಿ. ಕಚೇರಿಯಲ್ಲಿ ಕುಳಿತು ರೈತ ನಾಯಕರನ್ನು ಎಸ್.ಎ. ರವೀಂದ್ರನಾಥ್ ಮಾತುಕತೆಗೆ ಕರೆದರು. ಆದರೆ ರೈತ ನಾಯಕರು ಪ್ರತಿಭಟನೆಯ ಸ್ಥಳ ಬಿಟ್ಟು ಕದಲದೇ ರವೀಂದ್ರನಾಥ್‌ರನ್ನೇ ತಮ್ಮ ಹತ್ತಿರ ಬಂದು ಮಾತುಕತೆ ನಡೆಸುವಂತೆ ಪಟ್ಟು ಹಿಡಿದರು. ರೈತರು ಪ್ರತಿಭಟಿಸುತ್ತಿದ್ದ ಸ್ಥಳಕ್ಕೆ ಬರಲು ಕಾರು ಹತ್ತುತ್ತಿದ್ದ ರವೀಂದ್ರನಾಥರನ್ನು ತಡೆದ ರೈತರು ಪ್ರತಿಭಟನೆ ನಡೆಯುತ್ತಿದ್ದ ಮೋತಿ ಸರ್ಕಲ್‌ವರೆಗೆ ನಡೆಸಿಕೊಂಡೇ ಬಂದರು.



ಬೋಲೋ ಭಾರತ್ ಮಾತಾಕೀ ಮತ್ತು ಮುಚ್ಚಲೇ ಬಾಯಿ....

ಗೊಬ್ಬರಕ್ಕಾಗಿ ವಾರಗಟ್ಟಲೇ ಪ್ರತಿಭಟನೆಯಲ್ಲಿ ತೊಡಗಿದ್ದ ರೈತರು ಎಸ್.ಎ. ರವೀಂದ್ರನಾಥ್ ತಮ್ಮ ಬವಣೆಯ ಕುರಿತು ಮಾತನಾಡಬಹುದೆಂದುಕೊಂಡಿದ್ದರು. ಆದರೆ ರವೀಂದ್ರನಾಥ್ ಕೇಂದ್ರ ಸರ್ಕಾರದ ವಿರುದ್ಧ ಬರೀ ಟೀಕಾ ಪ್ರಹಾರ ಮಾಡಲು ಮುಂದಾದಾಗ 'ಇಲ್ಲಿ ರಾಜಕೀಯ ಮಾಡುವುದು ಬೇಡ, ನಮ್ಮ ಸಮಸ್ಯೆಯ ಬಗ್ಗೆ ಮಾತನಾಡಿ' ಎಂದು ರೈತರು ಗಲಾಟೆ ಎಬ್ಬಿಸಿದರು. ಗಲಿಬಿಲಿಗೊಂಡ ರವೀಂದ್ರನಾಥ್ ಏನೇನೋ ಮಾತನಾಡುತ್ತಿದ್ದ ಸಂದರ್ಭದಲ್ಲಿಯೇ ನರ್ಸ್ ರೇಣುಕಾಚಾರ್ಯ 'ಬೋಲೋ ಭಾರತ್ ಮಾತಾಕೀ' ಎಂದು ಅರಚಲಾರಂಭಿಸಿದಾಗ, ರೈತರು ಸಾಮೂಹಿಕವಾಗಿ 'ಮುಚ್ಚಲೇ ಬಾಯಿ' ಎಂಬ ಅಬ್ಬರಿಸಿದರು. ಇದಾದ ಮರುಕ್ಷಣವೇ ಮಂತ್ರಿ ಶಾಸಕರ ವಿರುದ್ಧ ಕೂಗಾಟ, ಅರಚಾಟಗಳು ಪ್ರಾರಂಭಗೊಂಡು ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಬಿಜೆಪಿ ಮಂತ್ರಿ, ಶಾಸಕರು ಹಿಂತಿರುಗಬೇಕಾಯಿತು.

ನರ್ಸ್ ರೇಣುಕಾಚಾರ್ಯನ ಕುತಂತ್ರ


ಪ್ರತಿಭಟಿಸುತ್ತಿದ್ದ ರೈತ ಸಮೂಹವನ್ನು ತಮ್ಮ ವಿಜಯೋತ್ಸವ ಕಾರ್ಯಕ್ರಮಕ್ಕೆ ಬಳಸಿಕೊಳ್ಳಬಹುದೆಂದುಕೊಂಡಿದ್ದ ಬಿಜೆಪಿಯವರಿಗೆ ಈ ಬೆಳವಣಿಗೆಯಿಂದ ಒಂದು ಕಡೆ ನಿರಾಸೆಯಾದರೆ, ಇನ್ನೊಂದು ಕಡೆ ಮಾತುಕತೆಗೆ ಹೋದರೂ ಮರ್ಯಾದೆ ಸಿಗದೇ ಹೋದದ್ದರಿಂದ ರೇಣುಕಾಚಾರ್ಯನಂಥವರಿಗೆ ಮುಕುಳಿ ಉರಿಹತ್ತಿಕೊಂಡಿತ್ತು. ಡಿ.ಸಿ. ಕಚೇರಿಗೆ ವಾಪಸ್ಸು ಬರುವಷ್ಟರಲ್ಲಿ ರೇಣುಕಾಚಾರ್ಯ ತನ್ನ ಅಸಲಿ ಬುದ್ಧಿಯನ್ನು ತೋರಿಸಿಯೇ ಬಿಟ್ಟ! ಬಸ್ ನಿಲ್ದಾಣದ ಎದುರುಗಡೆ ಇದ್ದ ಗೊಬ್ಬರ ಅಂಗಡಿಯೊಂದಕ್ಕೆ ರೇಣುಕಾಚಾರ್ಯ ತನ್ನ ಬೆಂಬಲಿಗರನ್ನು ನುಗ್ಗಿಸಿ ಗಲಾಟೆ ಎಬ್ಬಿಸಿದ. ತಕ್ಷಣ ಪೊಲೀಸರು ರೈತರ ಮೇಲೆ ಲಾಠಿಚಾರ್ಜ್ ಮಾಡಲು ಪ್ರಾರಂಭಿಸಿದರು. ಇದರಿಂದಾಗಿ ರೈತ ಸಂಘಟನೆಯ ಕಾರ್ಯಕರ್ತರಾದ ಬಾತಿರುದ್ರೇಶ ಹಾಗೂ ತುಂಬಿಗೇರಿ ನಾಗರಾಜ ಗಾಯಗೊಂಡರು. ಪೊಲೀಸರ ಈ ವರ್ತನೆಯಿಂದ ಆಕ್ರೋಶಗೊಂಡ ರೈತರು 5-6 ಬಸ್ಸುಗಳಿಗೆ ಕಲ್ಲುಗಳನ್ನು ಬೀರಿ ಜಖಂಗೊಳಿಸಿದರು.

ಪರಿಸ್ಥಿತಿ ವಿಕೋಪಕ್ಕೆ ಹೋದರೆ.....

ಸತತವಾಗಿ ಒಂಬತ್ತು ದಿನಗಳಿಂದ ಗೊಬ್ಬರ ವಿತರಣೆಗಾಗಿ ಬೀದಿಗಿಳಿದಿರುವ ರೈತ ಸಮುದಾಯಕ್ಕೆ ಇದುವರೆಗೂ ನ್ಯಾಯ ಸಿಕ್ಕಿಲ್ಲ. ಆದರೆ ಗೊಬ್ಬರ ಅಂಗಡಿ ಮಾಲೀಕರು ಕಾಳಸಂತೆಯಲ್ಲಿ ತಮ್ಮ ದಂಧೆಯನ್ನು ನಿರ್ಭಯವಾಗಿ ಮುಂದುವರೆಸಿದ್ದಾರೆ. ದಾವಣಗೆರೆ ಜಿಲ್ಲಾಧಿಕಾರಿ ಎಂ.ಬಿ. ದ್ಯಾಬೇರಿ ಜಿಲ್ಲೆಯ 22 ಗೊಬ್ಬರದ ಅಂಗಡಿಗಳಲ್ಲಿ ಒಟ್ಟು 1175 ಮೆಟ್ರಿಕ್‌ಟನ್ ದಾಸ್ತಾನು ಇದೆ, ಇದನ್ನು ರೈತರಿಗೆ ಸಮರ್ಪಕವಾಗಿ ಹಂಚಲು ಎಲ್ಲ ವ್ಯವಸ್ಥೆ ಮಾಡಲಾಗಿದೆ, ಪತ್ರಿಕೆ ಮತ್ತು ಟಿವಿ ಮಾಧ್ಯಮಗಳಿಗೆ ಪೋಜು ನೀಡುತ್ತಿದ್ದಾನೆಯೇ ಹೊರತು, ಹೇಳಿದ ಯಾವ ಮಾತನ್ನು ಕಾರ್ಯರೂಪಕ್ಕೆ ತಂದಿಲ್ಲ.

ಸಂಕಷ್ಟಕ್ಕೊಳಗಾಗಿರುವ ರೈತರು ಹಾಗೂ ರೈತ ಮುಖಂಡರುಗಳು ಸರ್ಕಾರದ ಈ ಬೇಜವಾಬ್ದಾರಿ ಧೋರಣೆಯಿಂದಾಗಿ ಸಹನೆ ಕಳೆದುಕೊಳ್ಳುತ್ತಿದ್ದಾರೆ. ಇನ್ನಾದರೂ ಸರ್ಕಾರ ಎಚ್ಚೆತ್ತುಕೊಳ್ಳದಿದ್ದರೆ ಮುಂದೆ ಸಂಭವಿಸಬಹುದಾದ ಅನಾಹುತಗಳಿಗೆ ರೈತರ ಸರ್ಕಾರವೆಂದು ಬೀಗುತ್ತಿರುವ ಭಾರತೀಯ ಜನತಾ ಪಕ್ಷ ದೊಡ್ಡ ಬೆಲೆಯನ್ನು ತೆರಬೇಕಾಗಿದೆ.

– ಚಂದ್ರಶೇಖರ ತೋರಣಘಟ್ಟ



ಆಹಾರ ಇಲಾಖೆಯ ಹೆಗ್ಗಣಗಳಿಗೆ ಸದಾಶಿವನೇ ಬಾಸ್!

ಕೊಪ್ಪಳ ಜಿಲ್ಲೆಯ ಆಹಾರ ಇಲಾಖೆಯಲ್ಲಿ ಬಡವರಿಗೆ ಸಿಗಬೇಕಾದ ಅಕ್ಕಿ, ಗೋಧಿಯನ್ನು ಮೇಯುವ ಹೆಗ್ಗಣಗಳು ಜಾಸ್ತಿಯಾಗಿವೆ. ನಿಗಮದ ವ್ಯವಸ್ಥಾಪಕ ಗಬ್ಬೂರ, ಫುಡ್ ಇನ್ಸ್‌ಪೆಕ್ಟರ್‌ಗಳಾದ ಹುಮಂತಪ್ಪ ಭಜಂತ್ರಿ, ಎಸ್.ಎ. ಬಾಗಲಿ, ಮರಿಯಪ್ಪ ಸಿಂಗ್ ಮತ್ತು ಹಲವು ಮ್ಯಾನೇಜರ್‌ಗಳನ್ನೊಳಗೊಂಡ ಈ ದುಷ್ಕರ ಕೂಟಕ್ಕೆ ಆಹಾರ ಇಲಾಖೆಯ ಉಪನಿರ್ದೇಶಕ ಸದಾಶಿವ ಮರ್ಜಿಯೇ ಸಾರಥಿ. ನ್ಯಾಯಬೆಲೆ ಅಂಗಡಿಗಳ ಆಹಾರ ಧಾನ್ಯಗಳನ್ನು ಅಕ್ರಮವಾಗಿ ರೈಸ್‌ಮಿಲ್ ಮತ್ತು ರವಾ ಮಿಲ್‌ಗಳಿಗೆ ಕಳೆದೊಂದು ವರ್ಷದಿಂದ ಅವ್ಯಾಹತವಾಗಿ ಈ ಕೂಟ ಮಾರುತ್ತಿದ್ದರೂ ಅವರನ್ನು ಯಾರಿಂದಲೂ ತಡೆಯಲಾಗಿಲ್ಲ.

ಕಳೆದ 2007ರ ಜುಲೈನಿಂದಲೇ ಈ ಅವ್ಯವಹಾರ ಪ್ರಾರಂಭವಾಗಿದೆ. 2007ರ ಸೆಪ್ಟೆಂಬರ್ 13ರಂದು 12,227 ಪಡಿತರ ಚೀಟಿಗಳನ್ನು ಬಿಡುಗಡೆ ಮಾಡಲಾಗಿತ್ತು, ಇದಾದ ಕೇವಲ ಮೂರೇ ದಿನದಲ್ಲಿ ಮತ್ತೆ 17,540 ಪಡಿತರ ಚೀಟಿಗಳನ್ನು ಬಿಡುಗಡೆ ಮಾಡಲಾಗಿದೆ. ಅಲ್ಲದೇ, ಒಂದೇ ತಿಂಗಳಲ್ಲಿ ಹಲವು ಬಾರಿ ಆಹಾರ ಧಾನ್ಯಗಳನ್ನು ಬಿಡುಗಡೆ ಮಾಡಲಾಗಿದೆ. ಅಂದಿನಿಂದ ಇಂದಿನತನಕ ಕನಿಷ್ಠವೆಂದರೂ ಐದು ಸಾವಿರ ಪಡಿತರ ಚೀಟಿಗಳ ಅಕ್ಕಿ, ಗೋಧಿ ಗಂಗಾವತಿ ಮತ್ತು ಕೊಪ್ಪಳಗಳ ರೈಸ್ ಮಿಲ್ಲುಗಳಿಗೆ, ರವಾ ಮಿಲ್ಲುಗಳಿಗೆ ಅಕ್ರಮವಾಗಿ ಸರಬರಾಜಾಗುತ್ತಲೇ ಬಂದಿದೆ.

ಬಿಡುಗಡೆಯಾದ ಅಕ್ಕಿ, ಗೋಧಿ ನೈಜ ಫಲಾನುಭವಿಗಳಿಗೆ ಹಂಚಿಕೆ ಮಾಡಿದ ಮೇಲೂ ಸಾಕಷ್ಟು ಉಳಿದುಕೊಂಡಿದೆ. ಆದರೆ ಈ ಹೆಗ್ಗಣಗಳು ದಾಖಲೆಯಲ್ಲಿ 'ಸ್ಟಾಕ್ ನಿಲ್' ಎಂದು ತೋರಿಸಿವೆ. 2007ರ ಮಾರ್ಚ್‌ನಿಂದ ಜುಲೈವರೆಗೆ 780 ಪಡಿತರ ಚೀಟಿಗಳ ಅಕ್ಕಿ, ಗೋಧಿ ಸೇರಿದಂತೆ 2119 ಪಡಿತರ ಚೀಟಿಗಳ ಆಹಾರ ಧಾನ್ಯಗಳು ಸೀದಾ ರೈಸ್, ರವಾ ಮಿಲ್ಲುಗಳ ಪಾಲಾಗಿವೆ. ಆದರೆ, ಇದರ ಜೊತೆಗೆ 5,311 ಅನಧಿಕೃತ ಪಡಿತರ ಕಾರ್ಡುಗಳು ಎಲ್ಲಿವೆ ಎಂಬುದು ನಿಷ್ಪಕ್ಷಪಾತ ತನಿಖೆಯಿಂದ ಮಾತ್ರವೇ ಬಯಲಿಗೆ ಬರಬಲ್ಲದು. ಹಾಗೆಯೇ, 2006ರ ಅಕ್ಟೋಬರ್‌ನಲ್ಲಿ 151 ಕ್ವಿಂಟಾಲ್ ಅಕ್ಕಿ, 35 ಕ್ವಿಂಟಾಲ್ ಗೋಧಿ ಸ್ಟಾಕ್ ಉಳಿದಿದ್ದು ಅದನ್ನೂ ಕೂಡ ಸದಾಶಿವ ಮರ್ಜಿಯ ಗ್ಯಾಂಗ್ ಮೇಯ್ದು ಹಾಕಿದೆ.

ಅನಧಿಕೃತ ಪಡಿತರ ಚೀಟಿಗಳ ಮೂಲಕ ಅವ್ಯವಹಾರ ನಡೆಸಿರುವುದು ಈ ಗ್ಯಾಂಗಿನ ಕರ್ಮಕಾಂಡದ ಒಂದು ಮುಖವಾದರೆ, ಇನ್ನೊಂದೆಡೆಗೆ ಫಲಾನುಭವಿಗಳ ಪ್ರತೀ ಕಾರ್ಡಿಗೆ ಕೊಡಬೇಕಾದ ಆಹಾರ ಧಾನ್ಯಗಳ ಪ್ರಮಾಣವನ್ನೂ ಕಡಿತಗೊಳಿಸಿ ಉಳಿದದ್ದನ್ನೂ ಮೇಯ್ದು ಹಾಕಿದ್ದು ಅದರ ಇನ್ನೊಂದು ಮುಖ. ಪ್ರತೀ ಕಾರ್ಡಿಗೆ 28 ಕೆ.ಜಿ. ಅಕ್ಕಿ, 6 ಕೆ.ಜಿ. ಗೋಧಿ ವಿತರಿಸಬೇಕೆಂಬ ನಿಯಮವಿದ್ದರೂ ನ್ಯಾಯಬೆಲೆ ಅಂಗಡಿಯ ಮಾಲಿಕರು ಕೇವಲ 10 ಕೆ.ಜಿ. ಅಕ್ಕಿ ಹಾಗೂ ಎರಡು ಕೆ.ಜಿ. ಗೋಧಿ ನೀಡಿ ಇಲ್ಲಿಯೂ ಭ್ರಷ್ಟಾಚಾರ ಎಸಗಿದ್ದಾರೆ. ಈ ಕರ್ಮಕಾಂಡದಲ್ಲಿ ಸಿಲುಕಿಬಿದ್ದ ಹೆಗ್ಗಣಗಳೆಂದರೆ ಕಾಂಗ್ರೆಸ್‌ನ ಕೌನ್ಸಿಲರ್ ಶಕುಂತಲಾ ಹುಡೇಜಾಲಿಯ ಗಂಡ ಹಾಲಯ್ಯ ಹುಡೇಜಾಲಿ. ಈಗ ಅವರಿಗೆ 36 ಸಾವಿರ ದಂಡ ಕಟ್ಟಿಸಿ ಅವರ ಲೈಸನ್ಸ್‌ನ್ನು ಬೇರೆಯವರಿಗೆ ವರ್ಗಾಯಿಸಲಾಗಿದೆ. ಇಷ್ಟಾದರೆ ಸಾಲದು. ಹಾಲಯ್ಯನ ಕೈಗೆ ಅಂಗಡಿ ಲೈಸನ್ಸ್ ಶಾಶ್ವತವಾಗಿ ಸಿಗದಂತೆ ನೋಡಿಕೊಳ್ಳಬೇಕಿದೆ.

ಒಂದೆಡೆ ಪಡಿತರ ಕಾರ್ಡುಗಳ ನೈಜ ಅಗತ್ಯವಿರುವವರಿಗೆ ಕಾರ್ಡುಗಳನ್ನು ನಿರಾಕರಿಸಿ, ಇನ್ನೊಂದೆಡೆ ಅಗತ್ಯವಿಲ್ಲದವರಿಗೆ ಬೇಕಾಬಿಟ್ಟ ಕಾರ್ಡುಗಳನ್ನು ನೀಡಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಕೆಲವೆಡೆ ಒಂದೇ ಕುಟುಂಬಕ್ಕೆ ಮೂರ್ನಾಲ್ಕು ಕಾರ್ಡುಗಳನ್ನು ಕೊಟ್ಟಿರುವುದು, ಆ ಕಾರ್ಡುಗಳ ಹೆಸರಿನಲ್ಲಿ ದವಸ ಧಾನ್ಯಗಳನ್ನು ಪಡೆದಿರುವುದು – ಇಂತಹ ಹತ್ತು ಹಲವು ಉದಾಹರಣೆಗಳು ಸಿಗುತ್ತವೆ. ಈ ಎಲ್ಲ ಅನಧಿಕೃತ ಕಾರ್ಡುಗಳ ಧಾನ್ಯ ಯಾರು ಕೊಂಡರು, ಯಾರು ತಿಂದರು ಎಂಬುದನ್ನು ಸಮಗ್ರ ತನಿಖೆ ಬಯಲುಗೊಳಿಸಬೇಕಿದೆ.

ಆಹಾರ ಇಲಾಖೆಯಲ್ಲಿ ಹೀಗೆ ಮೇಯುವ ದಂಧೆ ಎಷ್ಟೊಂದು ಬಿಂದಾಸ್ ಆಗಿ ನಡೆಯುತ್ತಿದೆ ಎಂದರೆ 30-40 ನ್ಯಾಯಬೆಲೆ ಅಂಗಡಿಗಳ ಆಹಾರ ಧಾನ್ಯದ ಹಣವನ್ನು ರೈಸ್ ಮಿಲ್ ಮಾಲಿಕರೇ ತುಂಬುತ್ತಾರೆ. ಅಂದರೆ, ಈ ಎಲ್ಲಾ ಅಂಗಡಿಗಳ ಧಾನ್ಯ ನೇರವಾಗಿ ಈ ಮಿಲ್ಲುಗಳಿಗೆ ಸರಬರಾಜು ಆಗುತ್ತದೆ.

ಪಕ್ಕದ ಕುಷ್ಟಗಿ ತಾಲ್ಲೂಕಿನಲ್ಲಿ 115 ಅನಧಿಕೃತ ಕಾರ್ಡುಗಳು ಪತ್ತೆಯಾಗಿವೆ. ಇನ್ನೂ ತೆರೆಮರೆಯಲ್ಲಿ ಎಷ್ಟಿವೆಯೋ ಆ ಸದಾಶಿವನೇ ಬಲ್ಲ. ಈ ನ್ಯಾಯಬೆಲೆ ಅಂಗಡಿಗಳ ಮಾಲಿಕರೂ ಕೂಡ ಮೇಲಿನ ಅಧಿಕಾರಿಗಳೊಂದಿಗೆ ಶಾಮೀಲಾಗಿ ಪ್ರತೀ ಕೆ.ಜಿ. ಧಾನ್ಯಕ್ಕೆ ನಿಗದಿತ ದರಕ್ಕಿಂತ ಒಂದೊಂದು ರೂ. ಜಾಸ್ತಿ ಹಣವನ್ನು ಗ್ರಾಹಕರಿಂದ ಸುಲಿಯುತ್ತಿದ್ದಾರೆ.

ಹೀಗೆ ಬಡವರ ಪಾಲಿನ ಅಕ್ಕಿ, ಗೋಧಿಗಳನ್ನು ಅನಾಮತ್ತಾಗಿ ನುಂಗಿ ನೀರು ಕುಡಿಯುತ್ತಿರುವ ಉಪನಿರ್ದೇಶಕ ಸದಾಶಿವ ಮಿರ್ಜಿ ಅದೆಷ್ಟು ಕೊಬ್ಬಿದ್ದಾನೆ ಎಂಬುದಕ್ಕೆ ಆತ ಮಾಡಿರುವ ಆಸ್ತಿಪಾಸ್ತಿಗಳೇ ಸಾಕ್ಷಿಯಾಗಿವೆ. ಈತ ಬಡವರ ಆಹಾರ ಧಾನ್ಯವನ್ನು ನುಂಗಿಯೇ ಗಜೇಂದ್ರಘಡ ಬಳಿ 40 ಎಕರೆ ಜಮೀನು ಖರೀದಿಸಿದ್ದಾನೆ. ಇನ್ನು ಫುಡ್ ಇನ್ಸ್‌ಪೆಕ್ಟರ್ ಹನುಮಂತಪ್ಪ ಭಜಂತ್ರಿ ಕೊಪ್ಪಳದ ಬಿಟಿ ಪಾಟೀಲ್ ನಗರದಲ್ಲಿ ಭವ್ಯವಾದ 40 ಲಕ್ಷ ಬಾಳುವ ಮನೆಯನ್ನು, ಮುರುಡಿ ಗ್ರಾಮದಲ್ಲಿ ಸಿಕ್ಕಾಪಟ್ಟೆ ಬೇನಾಮಿ ಆಸ್ತಿಯನ್ನು ಮಾಡಿಕೊಂಡಿದ್ದಾನೆ. ಇನ್ನೊಬ್ಬ ಹೆಗ್ಗಣ ಎಸ್.ಎ. ಬಾಗಲಿ ವಿಜಾಪುರದಲ್ಲಿ ಬೇಕಾದಷ್ಟು ಆಸ್ತಿಪಾಸ್ತಿ ಮಾಡಿಕೊಂಡಿದ್ದಾನೆ. ಈ ಹೆಗ್ಗಣ ಕೂಟದ ಮತ್ತೊಬ್ಬ ಪ್ರಮುಖ ಮೆಂಬರ್ ಮರಿಯಪ್ಪ ಯಲಬುರ್ಗಾ, ಕುಕನೂರುಗಳಲ್ಲಿ ಅಕ್ರಮ ಆಸ್ತಿ ಮಾಡಿಕೊಂಡಿದ್ದಾನೆ. ಎ.ಆರ್. ಸಿಂಗನ ಕಥೆ ಇದಕ್ಕಿಂತ ಭಿನ್ನವಾಗಿಯೇನೂ ಇಲ್ಲ. ಇನ್ನು ನಾಲ್ಕು ಗೋಡನ್‌ಗಳ ಮ್ಯಾನೇಜರ್‌ಗಳಿಗೆ ಎಲ್ಲ ರಾಜಕೀಯ ಪುಢಾರಿಗಳ ಅಭಯಹಸ್ತವಿರುವುದರಿಂದ ಅವರೂ ತಮ್ಮ ಪಾಲಿನ ಭ್ರಷ್ಟಾಚಾರವನ್ನು ತಮ್ಮ ಆದ್ಯ ಕರ್ತವ್ಯದಂತೆ ಚಾಚೂ ತಪ್ಪದೇ ಮಾಡಿಕೊಂಡು ಬರುತ್ತಿದ್ದಾರೆ.

ಕೊಪ್ಪಳದ ನೂರಾರು ಬಡವರು ತಮ್ಮ ಪಡಿತರ ಚೀಟಿಗಳನ್ನು ಇಬ್ಬರು ಜೆಡಿಎಸ್ ಕೌನ್ಸಿಲರುಗಳ ಬಳಿ ಅಡವಿಟ್ಟಿದ್ದಾರೆ. ಈಗ ಆ ಚೀಟಿಗಳ ಪಾಲಿಗೆ ಬರುವ ದವಸ ಧಾನ್ಯಗಳನ್ನು ಈ ಕೌನ್ಸಿಲರುಗಳೇ ಮಾರಿಕೊಳ್ಳುತ್ತಿದ್ದಾರೆಂದರೆ ಇವರು ಎಂಥ ಹೀನ ಕೃತ್ಯಕ್ಕಿಳಿದಿರಬಹುದು ಯೋಚಿಸಿ.

ಆಹಾರ ಇಲಾಖೆಯಲ್ಲಿನ ಈ ಹಗರಣದ ವಾಸನೆಯ ಜಾಡು ಹಿಡಿದ ಸಿರಿಗನ್ನಡ ವೇದಿಕೆ ಈ ಕುರಿತು ವಿಧಾನಸೌಧಕ್ಕೆ ದೂರು ಒಯ್ದರೆ ಅಲ್ಲಿನ ಮಹಾಶಯರು 'ಸಿಸ್ಟಮ್ ಇರೋದೇ ಹೀಗೆ, ಏನೂ ಮಾಡೋಕ್ಕಾಗಲ್ಲ' ಎನ್ನುತ್ತಾರೆಂದರೆ ಅವರೂ ತಮ್ಮ ಪಾಲಿನ ಪ್ರಸಾದವನ್ನು ನುಂಗಿರಲೇಬೇಕು. ಹೊಸ ಸರ್ಕಾರವೇನಾದರೂ ಇತ್ತ ಕಣ್ಣು ಹಾಯಿಸುತ್ತದೆಯೋ ಎಂಬುದನ್ನು ಕಾದು ನೋಡಬೇಕಷ್ಟೆ.

– ವರದಿಗಾರ



ಚಂದನರಾಣಿ

ಡಾ. ದೊಡಮನಿ ಶೂಟ್‌ಔಟ್ ಕೇಸ್

ಚಂದನರಾಣಿ ಔಟ್ ಡಾ. ಹಿರೇಮಠ ಇನ್!




ಡಾ. ಹಿರೇಮಠ್

ಕೆಲ ವರ್ಷಗಳ ಹಿಂದೆ ಹಿರೇಮಠ್ ಮತ್ತು ದೊಡಮನಿ ಇಬ್ಬರೂ ಭಾಯಿ, ಭಾಯಿ ಎಂದುಕೊಂಡಿದ್ದವರು. ಐದಾರು ವರ್ಷಗಳ ಹಿಂದೆ ಕಿಮ್ಸ್‌ನಲ್ಲಿ ಡಾ. ಹಿರೇಮಠ್, ಡಾ. ಕಲಾದಗಿ ಮತ್ತು ಡಾ. ಹಂಗರಗಾ ನಡುವೆ ಅಧಿಕಾರಕ್ಕಾಗಿ ದೊಡ್ಡ ಮಟ್ಟದ ಕಿತ್ತಾಟ ನಡೆದಾಗ ಹಿರೇಮಠ್‌ನ ಬೆಂಬಲಕ್ಕೆ ಇದೇ ದೊಡಮನಿ ನಿಂತಿದ್ದರು. ಈಗ ಇದೇ ಹಿರೇಮಠ್ ದೊಡಮನಿ ಶೂಟ್‌ಔಟ್ ಕೇಸ್‌ನಲ್ಲಿ ಜೈಲು ಸೇರಿದ್ದಾರೆ!

ಘಟನೆ ನಡೆದು ಐದೂವರೆ ತಿಂಗಳಾದರೂ ಸರಿ, ಕೊನೆಗೂ ಹುಬ್ಬಳ್ಳಿ ಪೊಲೀಸರು ಒಂದಿಷ್ಟು ಕೆಲಸ ಮಾಡಿದ್ದಾರೆ.

ಕಳೆದ ವರ್ಷ ಡಿಸೆಂಬರ್ 11ರ ಮಂಗಳವಾರ ರಾತ್ರಿ 10.40ರ ಸುಮಾರಿಗೆ ಹುಬ್ಬಳ್ಳಿಯ ಕಿಮ್ಸ್ ಆವರಣದಲ್ಲಿ ಡಾ. ದೊಡಮನಿಯ ಮೇಲೆ ಗುಂಡುಹಾರಿಸಿ ಕೊಲೆಯತ್ನ ನಡೆದಿತ್ತು. ಈ ಘಟನೆಯ ಕುರಿತು ತನಿಖೆ ನಡೆಸಿದ 'ಲಂಕೇಶ್' ಕೇವಲ ಒಂದೇ ಒಂದು ವಾರದೊಳಗೆ ತಪ್ಪಿತಸ್ಥರ ಬಗ್ಗೆ ವಿವರವಾದ ವರದಿಯನ್ನು ಪ್ರಕಟಿಸಿತ್ತು. ಕಿಮ್ಸ್‌ನ ಮಾಜಿ ನಿರ್ದೇಶಕ ಡಾ.ಎಂ.ಜಿ. ಹಿರೇಮಠ್, ಕಾಂಗ್ರೆಸ್‌ನ ಯುವ ಮುಖಂಡರಾದ ಬಂಗಾರೇಶ್ ಹಿರೇಮಠ್, ವಿಶ್ವಪ್ರಕಾಶ ಉಳ್ಳಾಗಡ್ಡಿಮಠ ಹಾಗೂ ಮಾಜಿ ಶಾಸಕ ವಿನಯ ಕುಲಕರ್ಣಿಯ ತಮ್ಮ ವಿಜಯ ಕುಲಕರ್ಣಿ ಮುಂತಾದವರೇ ಇದಕ್ಕೆ ಕಾರಣ ಎಂದು ವರದಿಯಲ್ಲಿ ಸ್ಪಷ್ಟವಾಗಿ ತಿಳಿಸಲಾಗಿತ್ತು. ಇದಾದ ಐದೂವರೆ ತಿಂಗಳ ನಂತರ ಈಗ ಹುಬ್ಬಳ್ಳಿಯ ಪೊಲೀಸರು 'ಲಂಕೇಶ್' ವರದಿಯಲ್ಲಿ ತಿಳಿಸಲಾಗಿದ್ದ ಆರೋಪಿಗಳನ್ನು ಮೊನ್ನೆ ಜೂನ್ 1ರಂದು ಬಂಧಿಸಿ ಹುಬ್ಬಳ್ಳಿಯ ಜೆಎಂಎಫ್‌ಸಿ ಎರಡನೇ ನ್ಯಾಯಾಲಯದ ನ್ಯಾಯಾಧೀಶರ ಮನೆಯಲ್ಲಿ ಹಾಜರುಪಡಿಸಿ ಹುಬ್ಬಳ್ಳಿಯ ಸಬ್‌ಜೈಲಿಗೆ ತಳ್ಳಿದ್ದಾರೆ.


'ಲಂಕೇಶ್' ವರದಿ ಪ್ರಕಟವಾದಾಗ ಅದರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುವುದಾಗಿ ವಿಜಯ ಕುಲಕರ್ಣಿ ಹೂಂಕರಿಸಿದ್ದ. ಆದರೆ ಈಗ ಆತನೇ ಆರೋಪಿ ಸ್ಥಾನದಲ್ಲಿದ್ದು ಜೈಲೊಳಗೆ ಕಂಬಿ ಎಣಿಸುತ್ತಿದ್ದಾನೆ.



ಬಂಗಾರೇಶ್


ಈ ಆರೋಪಿಗಳನ್ನು ಬಂಧಿಸಲು ಪೊಲೀಸರು ಬರೋಬ್ಬರಿ ಐದೂವರೆ ತಿಂಗಳಷ್ಟು ದೀರ್ಘ ಸಮಯವನ್ನು ಯಾಕೆ ತೆಗೆದುಕೊಂಡರು ಎಂಬುದು ಅರ್ಥವಾಗದ ವಿಚಾರವೇನಲ್ಲ. ಅಸಲಿಗೆ ಈಗಾಗಲೇ ಆರೋಪಿಗಳನ್ನು ಎರಡೆರಡು ಬಾರಿ ಬ್ರೇನ್ ಮ್ಯಾಪಿಂಗ್ ಮತ್ತು ನ್ಯಾರ್ಕೊ ಅನಾಲಿಸಿಸ್‌ಗೆ ಒಳಪಡಿಸಲಾಗಿತ್ತಾದರೂ ಅವರನ್ನು ಬಂಧಿಸುವ ತಾಪತ್ರಯವನ್ನು ಪೊಲೀಸರು ತೆಗೆದುಕೊಂಡಿರಲಿಲ್ಲ. ಏಕೆಂದರೆ, ಈ ದುಷ್ಕೃತ್ಯದಲ್ಲಿ ಭಾಗಿಯಾಗಿದ್ದವರು ಕಾಂಗ್ರೆಸ್‌ನ ರಾಜಕಾರಣಿಗಳಾಗಿದ್ದರಿಂದ ಅವರನ್ನು ಬಂಧಿಸದಂತೆ ಕಾಂಗ್ರೆಸ್‌ನ ರಾಜ್ಯ ನಾಯಕರು ಪೊಲೀಸ್ ಕಮೀಷನರ್ ನಾರಾಯಣ ನಡುಮನಿ ಸಾಹೇಬ್ರ ಕೈಕಟ್ಟಿ ಹಾಕಿದ್ದರು.

ಚುನಾವಣೆಗಿಂತ ಮುಂಚೆಯೇ ಆರೋಪಿಗಳನ್ನು ಬಂಧಿಸುವ ಇರಾದೆ ನಡುಮನಿ ಸಾಹೇಬ್ರಿಗೆ ಇರಲಿಲ್ಲ. ಏಕೆಂದರೆ, ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಗಳಿಸುವ ಅಥವಾ ಕನಿಷ್ಠ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮುವ ಲೆಕ್ಕಾಚಾರಗಳು ಮಾಧ್ಯಮಗಳಲ್ಲಿ ಪ್ರಚಾರವಾಗುತ್ತಿದ್ದವು. ಹಾಗೇನಾದರೂ ಆಗಿ ಕಾಂಗ್ರೆಸ್ ಒಂದು ವೇಳೆ ಅಧಿಕಾರಕ್ಕೆ ಬಂದುಬಿಟ್ಟರೆ ನಡುಮನಿ ಸಾಹೇಬ್ರು ಪೇಚಿಗೆ ಸಿಕ್ಕಿಹಾಕಿಕೊಳ್ಳುವ ಸಂಭವವಿತ್ತು.



ದೊಡಮನಿ

ಈ ಕಾರಣಕ್ಕಾಗಿಯೇ ಚುನಾವಣೆ ಮುಗಿಯುವ ತನಕ ಸುಮ್ಮನಿದ್ದರು. ಚುನಾವಣೆ ಮುಗಿದರೂ ಯಾವೊಂದು ಪಕ್ಷವೂ ಸ್ಪಷ್ಟ ಬಹುಮತ ಗಳಿಸದೇ ಇದ್ದಾಗ ಸರ್ಕಾರ ರಚನೆಯಾಗುವವತನಕ ಕಾಯ್ದರು. ಈಗ ಸರ್ಕಾರವೂ ರಚನೆಯಾಗಿ ಕಾಂಗ್ರೆಸ್ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತುಕೊಳ್ಳುತ್ತಿದ್ದಂತೆ ಕಾಂಗ್ರೆಸ್‌ನ ಈ ಆರೋಪಿಗಳನ್ನು ನಡುಮನಿ ಸಾಹೇಬ್ರು ಜೈಲಿಗಟ್ಟಿದ್ದಾರೆ.




ಪ್ರಕಾಶ್

ಬಂಗಾರೇಶ, ಉಳ್ಳಾಗಡ್ಡಿಮಠ, ವಿಜಯ ಕುಲಕರ್ಣಿಯವರೆಲ್ಲಾ ಕಾಂಗ್ರೆಸ್‌ನ ರಾಜಕಾರಣಿಗಳಾಗಿದ್ದರಿಂದ ಅವರ ಪಾಲಿಗೆ ಈ ಮಾತು ಸರಿಯೆನ್ನಿಸಬಹುದು. ಆದರೆ ಬಿಜೆಪಿಯ ಜಗದೀಶ್ ಶೆಟ್ಟರ್‌ನ ಕಟ್ಟಾ ಬೆಂಬಲಿಗನಾಗಿದ್ದ, ಶೆಟ್ಟರ್ ಕೃಪಾಕಟಾಕ್ಷದಿಂದಲೇ ಕಿಮ್ಸ್‌ನ ನಿರ್ದೇಶಕನಾಗಿದ್ದ ಡಾ. ಹಿರೇಮಠ್‌ನನ್ನು ಬಂಧಿಸಿದ್ದೇಕೆ? ಅದಕ್ಕೂ ಒಂದು ಕಾರಣವಿದೆ. ಅದೇನೆಂದರೆ ಹಿರೇಮಠ್ ಶೆಟ್ಟರ್ ಬೆಂಬಲಿಗನಾಗಿದ್ದ ನಿಜ. ಆದರೆ ಚುನಾವಣಾ ಪೂರ್ವ ಸಮೀಕ್ಷೆಗಳು ಕಾಂಗ್ರೆಸ್ ಗೆಲ್ಲುತ್ತದೆಯೆಂದು ಹೇಳಿದ್ದರಿಂದ ಈ ಹಿರೇಮಠ್ ಬಿಜೆಪಿಯನ್ನು ಬಿಟ್ಟು ಕಾಂಗ್ರೆಸ್ ಕಡೆಗೆ ವಾಲಿಬಿಟ್ಟಿದ್ದ. ಅದೂಅಲ್ಲದೇ ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ಕ್ಷೇತ್ರದಿಂದ ಸ್ಪರ್ಧಿಸಿದ್ದ ಜಗದೀಶ್ ಶೆಟ್ಟರ್ ವಿರುದ್ಧವೇ ಪ್ರಚಾರ ನಡೆಸಿದ್ದ. ಹಾಗಾಗಿ ಇವರೆಲ್ಲರ ಜೊತೆಗೆ ಅವನನ್ನು ಜೈಲಿಗಟ್ಟಲಾಗಿದೆ.

ಈ ಬಂಧನಗಳು ನಡೆಯುವುದಕ್ಕೆ ಇನ್ನೂ ಒಂದು ಕಾರಣವಿದೆ. ಒಂದು ರೀತಿಯಲ್ಲಿ ಕಾಂಗ್ರೆಸ್‌ನ ಪರವಾಗಿ ಕೆಲಸ ಮಾಡುತ್ತಿದ್ದ ನಾರಾಯಣ ನಡುಮನಿಯನ್ನು ನೀರು-ನೆರಳಿಲ್ಲದ ಜಾಗಕ್ಕೆ ವರ್ಗಾವಣೆ ಮಾಡುವುದಾಗಿ ಖುದ್ದು ಜಗದೀಶ್ ಶೆಟ್ಟರ್ ಮತ್ತು ಸಂಸದ ಪ್ರಹ್ಲಾದ್ ಜೋಶಿ ಈ ಹಿಂದೆಯೇ ಧಮಕಿ ಹಾಕಿದ್ದರು. ಈಗ ಅವರದ್ದೇ ಪಕ್ಷ ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿರುವಾಗ ಅದನ್ನು ಈಡು ಮಾಡುವುದು ಅವರಿಗೆ ಕಷ್ಟವೇನಲ್ಲ. ಹೀಗಾಗಿ ನಡುಮನಿ ಸಾಹೇಬ್ರು ಕೂಡ ಪಕ್ಕಾ ಯೂ ಟರ್ನ್ ತೆಗೆದುಕೊಂಡು ಬಿಜೆಪಿಯನ್ನು ಸಂತೃಪ್ತಗೊಳಿಸುವುದಕ್ಕಾಗಿ ಈ ಆರೋಪಿಗಳನ್ನು ಬಂಧಿಸುವುದಕ್ಕೆ ಆರ್ಡರ್ ಮಾಡಿಯೇ ಬಿಟ್ಟರು.

ಅದೂಅಲ್ಲದೇ ಅವಳಿ ನಗರಗಳ ಕಮೀಷನರ್ ಹುದ್ದೆಯಿಂದ ಎದ್ದುಹೋಗುವ ಮೊದಲು ತಾನೇನೋ ಒಂದು ದೊಡ್ಡ ಸಾಧನೆ ಮಾಡಿದೆ ಎಂಬ ಹೆಗ್ಗಳಿಕೆ ಕೂಡ ಸಿಗುತ್ತದಲ್ಲ, ಅದೂ ಕೂಡ ನಡುಮನಿ ಸಾಹೇಬ್ರನ್ನು ಹುರುಪುಗೊಳಿಸಿದೆ.



ವಿನಯ್‌ಕುಲಕರ್ಣಿ

ಆ ದಿನ ನಡೆದದ್ದೇನು?

ಅದು ಡಿಸೆಂಬರ್ 11ರ ಮಂಗಳವಾರ ರಾತ್ರಿ 10.40ರ ಸಮಯ. ಡಾ. ದೊಡಮನಿಯವರು 'ತಿರುಮಲ ಕ್ಲಾಸಿಕ್ ಬಾರ್'ನಲ್ಲಿ ಎಂದಿನಂತೆ ಪಾನಮತ್ತರಾಗಿ ಮನೆ ಸೇರುತ್ತಿದ್ದಂತೆ ಅವರ ಮೇಲೆ ಎರಗಿದ ಇಬ್ಬರು ಯುವಕರು ಗುಂಡಿನ ಮಳೆಗರೆದು ಪರಾರಿಯಾದರು. ಆಗ ಬಂದ ದೊಡಮನಿಯವರ ಹೆಂಡತಿ ಚಂದನರಾಣಿ ತಕ್ಷಣ ಹೊರಗೆ ಬಂದು ಜನರನ್ನು ಸೇರಿಸಿ ರಕ್ತದ ಮಡುವಿನಲ್ಲಿ ಬಿದ್ದಿದ್ದ ಗಂಡನನ್ನು ಆಸ್ಪತ್ರೆಗೆ ಸೇರಿಸಿದಳು. ಅಷ್ಟೇ ಅಲ್ಲ, ಕೂಡಲೇ ಮಾಧ್ಯಮದವರನ್ನೂ ಕರೆಸಿ ಕಿಮ್ಸ್‌ನಲ್ಲಿ ತನ್ನ ಗಂಡನಿಗೂ ಹಾಗೂ ನಿರ್ದೇಶಕ ಡಾ. ಹಿರೇಮಠ್‌ಗೂ ತೀವ್ರ ತಿಕ್ಕಾಟ ನಡೆಯುತ್ತಿದ್ದು ಹಿರೇಮಠ್ ಅವರೇ ತನ್ನ ಗಂಡನನ್ನು ಕೊಲ್ಲುವ ಪ್ರಯತ್ನ ನಡೆಸಿದ್ದಾರೆಂದು ಆರೋಪಿಸಿದಳು. ಅಂದೇ ರಾತ್ರಿ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಅವರ ವಿರುದ್ಧ ದೂರನ್ನೂ ದಾಖಲಿಸಿದಳು.

ದೊಡಮನಿಯವರನ್ನು ಮೊದಲು ಕಿಮ್ಸ್‌ಗೆ ನಂತರ ಅಲ್ಲಿಂದ ಬೆಳಗಾಂನ ಕೆಎಲ್‌ಇ ಆಸ್ಪತ್ರೆಗೆ ರವಾನಿಸಿ ಅವರ ದೇಹವನ್ನು ಹೊಕ್ಕಿದ್ದ ನಾಲ್ಕು ಗುಂಡುಗಳಲ್ಲಿ ಮೂರನ್ನು ಹೊರ ತೆಗೆಯಲಾಗಿದ್ದು ಒಂದು ಇನ್ನೂ ಒಳಗೇ ಇದೆ.

ಹಿರೇಮಠ್-ದೊಡಮನಿ ಜಿದ್ದಾಜಿದ್ದಿ

ವಾಸ್ತವದಲ್ಲಿ ಕೆಲ ವರ್ಷಗಳ ಹಿಂದೆ ಹಿರೇಮಠ್ ಮತ್ತು ದೊಡಮನಿ ಇಬ್ಬರೂ ಭಾಯಿ, ಭಾಯಿ ಎಂದುಕೊಂಡಿದ್ದವರು. ಐದಾರು ವರ್ಷಗಳ ಹಿಂದೆ ಕಿಮ್ಸ್‌ನಲ್ಲಿ ಡಾ. ಹಿರೇಮಠ್, ಡಾ. ಕಲಾದಗಿ ಮತ್ತು ಡಾ. ಹಂಗರಗಾ ನಡುವೆ ಅಧಿಕಾರಕ್ಕಾಗಿ ದೊಡ್ಡ ಮಟ್ಟದ ಕಿತ್ತಾಟ ನಡೆದಾಗ ಹಿರೇಮಠ್‌ನ ಬೆಂಬಲಕ್ಕೆ ಇದೇ ದೊಡಮನಿ ನಿಂತಿದ್ದರು. ಆ ಹೊತ್ತಿನಲ್ಲಿ ದಲಿತ ಹಿನ್ನೆಲೆಯಿರುವ ದೊಡಮನಿಗೆ ಬೇಗ ಪ್ರಮೋಶನ್ ಸಿಕ್ಕು ಅಧೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಜಗದೀಶ್ ಶೆಟ್ಟರ್‌ನ ಕೃಪಾಕಟಾಕ್ಷದಿಂದ ಹಿರೇಮಠ್ ಕಿಮ್ಸ್‌ನ ನಿರ್ದೇಶಕನಾದ ಮೇಲೆ ಬರುಬರುತ್ತ ಅದೇಕೋ ಹಿರೇಮಠ್ ಮತ್ತು ದೊಡಮನಿ ನಡುವೆ ಮೊದಲಿದ್ದ ಸ್ನೇಹ ಹಳಸುತ್ತಾ ಹೋಯಿತು. ಕೊನೆಗೆ ಅದು ಜಿದ್ದಾಜಿದ್ದಿನ ಹೋರಾಟವಾಗುವ ಹಂತಕ್ಕೆ ತಲುಪಿಬಿಟ್ಟಿತು. ಹಿರೇಮಠ್ ಕಿಮ್ಸ್‌ಗೆ ಅಗತ್ಯವಿರುವ ವಸ್ತುಗಳ ಖರೀದಿಯ ಕಾಂಟ್ರಾಕ್ಟ್ ವಿಚಾರದಲ್ಲಿ ಲೂಟಿ ಹೊಡೆಯುತ್ತಿದ್ದುದು ದೊಡಮನಿಗೆ ಹೊಟ್ಟೆಕಿಚ್ಚು ಹಚ್ಚಿತ್ತು. ಲೂಟಿಯಲ್ಲಿ ತನ್ನ ಪಾಲಿನ ಪರ್ಸೆಂಟೇಜ್ ಸಿಗುತ್ತಿಲ್ಲ ಎಂಬ ನೋವು ಇದ್ದರೂ ಇರಬಹುದು.

ಏಕೆಂದರೆ ಇದು ಕೋಟ್ಯಂತರ ರೂಪಾಯಿಗಳ ವ್ಯವಹಾರ. ಕಿಮ್ಸ್ ವಾರ್ಷಿಕ 3 ರಿಂದ 4 ಕೋಟಿ ಮೊತ್ತದ ಔಷಧಿಗಳನ್ನು ಸರಬರಾಜು ಮಾಡಲು ವಿವಿಧ ಕಂಪೆನಿಗಳಿಗೆ ಗುತ್ತಿಗೆ ನೀಡುತ್ತದೆ. ಈ ವ್ಯವಹಾರವನ್ನು ಡಾ. ದೊಡಮನಿಯವರೇ ನೋಡಿಕೊಳ್ಳುತ್ತಿದ್ದರು.

ಅಲ್ಲದೆ, ಸಿಬ್ಬಂದಿಯ ನೇಮಕಾತಿಯಲ್ಲೂ ಹಿರೇಮಠ್ ಭಾರಿ ಅವ್ಯವಹಾರ ಎಸಗಿದ್ದರು. ಅನಗತ್ಯವಾಗಿ ಸಾವಿರಾರು ಗುತ್ತಿಗೆ ಕಾರ್ಮಿಕರನ್ನು ಕೇವಲ ಕಾಗದದ ಮೇಲೆ ನೇಮಿಸಿಕೊಂಡು ಅವರು ಕೆಲಸಕ್ಕೆ ಬರದಿದ್ದರೂ ಗುತ್ತಿಗೆದಾರರಿಗೆ ಕಾರ್ಮಿಕರ ಸಂಬಳವನ್ನು ನೀಡಲಾಗುತ್ತಿತ್ತು. ಇದಕ್ಕಾಗಿ ನಿರ್ದೇಶಕ ಹಿರೇಮಠ್‌ಗೆ ಪ್ರತಿತಿಂಗಳಿಗೆ ಏನಿಲ್ಲವೆಂದರೂ ನಲವತ್ತೈದು ಲಕ್ಷ ಕಮೀಷನ್ ಸಿಗುತ್ತಿತ್ತು. ಕಮೀಷನ್ ಹಂಚಿಕೆಯಲ್ಲಿ ಏನೇನು ಜಗಳ ಬಂದಿತೋ ಗೊತ್ತಿಲ್ಲ. ಅಂತೂ ಅದು ದೊಡ್ಡ ರಾದ್ಧಾಂತವಾಗಿ ಕಿಮ್ಸ್‌ನಲ್ಲಿ ಎಲ್ಲರ ಬಾಯಲ್ಲೂ ಅದೇ ಮಾತು ಎಂಬಂತಾಗಿ ಹೋಗಿತ್ತು.

▶▶▶ ಮುಂದಿನ ಪುಟಕ್ಕೆ

ಡಾ. ಹಂಗರಗಾನನ್ನು ಏಕೆ ಬಂಧಿಸಿಲ್ಲ?

ಮಾರ್ಚ್ 15, 2008ರಂದು ಬೆಂಗಳೂರಿನ ವಿಧಿ ವಿಜ್ಞಾನ ಕೇಂದ್ರದಲ್ಲಿ ಡಾ. ಎಸ್.ಮಾಲಿನಿಯವರು ಡಾ.ಹಿರೇಮಠ್ ಅವರನ್ನು ನ್ಯಾರ್ಕೋ ಅನಾಲಿಸಿಸ್ ಪರೀಕ್ಷೆಗೆ ಒಳಪಡಿಸಿದ ಸಮಯದಲ್ಲಿ ಡಾ.ದೊಡಮನಿ ಮತ್ತು ತಮ್ಮ ನಡುವೆ ಬಿಲ್ ಪಾಸ್ ಮಾಡುವ ವಿಚಾರದಲ್ಲಿ ಜಗಳವೇರ್ಪಟ್ಟಿದ್ದನ್ನು, ಅದರಿಂದ ತಾವು ಕೊಲೆಗೆ ಸಂಚು ರೂಪಿಸಿದ್ದನ್ನು, ಅದಕ್ಕಾಗಿ ವಿಶ್ವಪ್ರಕಾಶ್ ಉಳ್ಳಾಗಡ್ಡಿಮಠನನ್ನು ಬಳಸಿಕೊಂಡಿದ್ದನ್ನು, ಉಳ್ಳಾಗಡ್ಡಿಮಠನಿಗೆ ಈ ಕೆಲಸಕ್ಕಾಗಿ ದುಡ್ಡು ಕೊಟ್ಟಿದ್ದನ್ನು, ಇದರಲ್ಲಿ ಡಾ.ಹಂಗರಗಾ ಕೂಡ ಭಾಗಿಯಾಗಿದ್ದನ್ನು ಡಾ.ಹಿರೇಮಠ್ ಒಪ್ಪಿಕೊಂಡಿದ್ದಾರೆ.

ಕೊಲೆಯತ್ನ ನಡೆದ ತಕ್ಷಣ ದೊಡಮನಿಯ ಹೆಂಡತಿ ಚಂದನರಾಣಿ ನೀಡಿದ ದೂರಿನಲ್ಲೂ ತನ್ನ ಪತಿಯ ಕೊಲೆಯತ್ನದಲ್ಲಿ ಡಾ.ಹಿರೇಮಠ್ ಮತ್ತು ಡಾ.ಹಂಗರಗಾ ಅವರಿಬ್ಬರೂ ಭಾಗಿಯಾಗಿದ್ದಾರೆಂದು ಆರೋಪಿಸಿದ್ದರು. ಹೀಗಿದ್ದರೂ ಹಂಗರಗಾನನ್ನು ಬಂಧಿಸಿಲ್ಲ, ಕನಿಷ್ಠ ನ್ಯಾರ್ಕೋ ಅನಾಲಿಸಿಸ್‌ಗೂ ಒಳಪಡಿಸಿಲ್ಲ, ಇದು ಇನ್ನಷ್ಟು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ಕೈಕೊಟ್ಟ ಕಾಂಗ್ರೆಸ್?

ಕಾಂಗ್ರೆಸ್‌ನ ಯುವ ರಾಜಕಾರಣಿಗಳಾದ ಬಂಗಾರೇಶ್ ಹಿರೇಮಠ್, ವಿಶ್ವಪ್ರಕಾಶ್ ಉಳ್ಳಾಗಡ್ಡಿಮಠ ಮತ್ತು ವಿಜಯ ಕುಲಕರ್ಣಿಯವರು ದೊಡಮನಿ ಶೂಟೌಟ್‌ನಲ್ಲಿ ಪಾಲ್ಗೊಂಡಿದ್ದರೆಂಬುದು ಜಿಲ್ಲಾ ಕಾಂಗ್ರೆಸ್‌ಗೆ ಗೊತ್ತಿತ್ತು, ಆದರೂ ಅವರನ್ನು ಬಂಧಿಸದಂತೆ ರಾಜ್ಯ ನಾಯಕರ ಮೂಲಕ ಪೊಲೀಸರ ಮೇಲೆ ಒತ್ತಡ ಹೇರುತ್ತಾ ಕೊಲೆಗಡುಕರನ್ನು ರಕ್ಷಿಸುವ ಕೆಲಸವನ್ನದು ಮಾಡುತ್ತಾ ಬಂದಿತ್ತು. ಈಗ ಅದೆಲ್ಲಾ ಬಯಲಾಗಿ ಅವರನ್ನು ಬಂಧಿಸಿದ ಮೇಲೆ ಜಿಲ್ಲಾ ಕಾಂಗ್ರೆಸ್ ನಾಯಕರೆಲ್ಲರೂ ದೂರ ಸರಿದು "ಬಂಧಿತರಾದವರನ್ನೆಲ್ಲಾ ಪಕ್ಷದಿಂದ ಉಚ್ಚಾಟಿಸಿದ್ದೇವೆ" ಎಂದು ಹಾರಿಕೆ ಉತ್ತರ ಕೊಡುತ್ತಿದ್ದಾರೆ. ರಾಜ್ಯದಲ್ಲಿ ಅಧಿಕಾರವೂ ಇಲ್ಲ, ಈ ಕ್ರಿಮಿನಲ್ ಕೇಸಿನ ಗೊಡವೆಗೆ ಹೋಗದೇ ದೂರ ಇದ್ದರೇನೇ ಒಳ್ಳೆಯದು ಎಂಬುದು ಅವರ ಲೆಕ್ಕಾಚಾರ. ಒಟ್ಟಿನಲ್ಲಿ ತಾವು ಏನು ಮಾಡಿದರೂ ದಕ್ಕಿಸಿಕೊಳ್ಳುತ್ತೇವೆ ಎಂಬ ದುರಹಂಕಾರದಿಂದ ಮೆರೆಯುತ್ತಿದ್ದ ಈ ಯುವ ರಾಜಕಾರಣಿಗಳಿಗೆ ತಮ್ಮದೇ ಪಕ್ಷವೂ ಕೈಕೊಟ್ಟಿರುವುದು ಈಗ ಅರಿವಿಗೆ ಬರುತ್ತಿದೆ. ■

ಮೈಸೂರು ರೇಷ್ಮೆ ಕೇಂದ್ರದ ಕಚ್ಚೆಹರುಕ ಕಾಂಬ್ಳೆ

ಇದೊಂದು ಬಹುಪತ್ನಿತ್ವ ಹಗರಣ

ಮೈಸೂರಿನ ರೇಷ್ಮೆ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ. ಚಂದ್ರಕಾಂತ ಕಾಂಬ್ಳೆ ತನ್ನ ಯೌವ್ವನದಲ್ಲಿ ಮಾಡಿಕೊಂಡ ಯಡವಟ್ಟುಗಳು ಈಗ ಬೇತಾಳನಂತೆ ಬೆನ್ನುಹತ್ತಿ ಹೈರಾಣ ಮಾಡುತ್ತಿವೆ. ಡಾ. ಕಾಂಬ್ಳೆ ಈಗ ಏನನ್ನು ಅನ್ನಲಾಗದೆ, ಅನುಭವಿಸಲೂ ಆಗದೆ ಒದ್ದಾಡಿಕೊಳ್ಳುತ್ತಾ ತಲೆ ತಪ್ಪಿಸಿಕೊಂಡು ಓಡಾಡುತ್ತಿದ್ದಾನೆ.

ಕಳೆದ ಶುಕ್ರವಾರ ಮೈಸೂರಿನ ಈ ಕಾಂಬ್ಳೆ ಕಚೇರಿಗೆ ದಿಢೀರನೆ ನುಗ್ಗಿಬಂದ ಮಹಿಳೆಯರ ಗುಂಪೊಂದು 'ವಂಚಕ ಕಾಂಬ್ಳೆಗೆ ಧಿಕ್ಕಾರ' 'ಸುಮಿತ್ರಾಗೆ ನ್ಯಾಯ ಸಿಗಲಿ' ಎಂದೆಲ್ಲಾ ಅಬ್ಬರಿಸಿ ರಾದ್ಧಾಂತ ಮಾಡುತ್ತಿದ್ದಂತೆ ಈ ಕಾಂಬ್ಳೆ ಹೆಸರು ಕರ್ನಾಟಕದಾದ್ಯಂತ ಪತ್ರಿಕೆ-ಟಿವಿಗಳಲ್ಲಿ ಪ್ರಸಿದ್ಧಿಗೆ ಬಂದುಬಿಟ್ಟಿತು.


ಪತ್ನಿ ಸುಮಿತ್ರಳೊಂದಿಗೆ....

ಈತ ಮಾಜಿ ಸಚಿವ ಕಾಂಗ್ರೆಸ್ ನಾಯಕ ದಿವಂಗತ ಬಿ. ಬಸವಲಿಂಗಪ್ಪನ ಅಳಿಯ. ಅವರ ಮಗಳು ಜಯಪದ್ಮ ಎಂಬುವರ ಪತಿ ಮಹಾಶಯನಾಗಿದ್ದಾಗಲೇ ಸಿಗದಿದ್ದ ಪ್ರಚಾರ ಕಾಂಬ್ಳೆಗೆ ಈಗ ಸಿಗುತ್ತಿದೆ.

ಸುಮಿತ್ರ ಎಂಬ ಚನ್ನಪಟ್ಟಣದ ಮಹಿಳಾಮಣಿ ಸದ್ಯಕ್ಕೆ ಈ ಹಗರಣದ ಕೇಂದ್ರಬಿಂದು.

ಈ ಸುಮಿತ್ರಾ 'ನಾನು ಕಾಂಬ್ಳೆಯ ಎರಡನೇ ಹೆಂಡತಿ, ನಮಗೊಂದು ಹೆಣ್ಣುಮಗೂ ಸೈತ ಇದೆ' ಎನ್ನುತ್ತಿದ್ದಾಳೆ. ಮತ್ತೊಂದೆಡೆ ಈ ಕಾಂಬ್ಳೆ 'ಸುಮಿತ್ರಾ ನನ್ನ ಮನೆ ಕೆಲಸ ಮಾಡಿಕೊಂಡಿದ್ದವಳು. ಈಗ ಬ್ಲಾಕ್‌ಮೇಲ್ ಮಾಡಿ ಹಣ ಕೀಳಲು ಈ ಸಂಚು ನಡೆಸಿದ್ದಾಳೆ. ನನ್ನ ಮರ್ಯಾದೆ ತೆಗೀತಿದ್ದಾಳೆ' ಎಂದು ಗೋಳಾಡುತ್ತಿದ್ದಾನೆ. ಅಸಲಿ ಮಜಾ ಏನೆಂದರೆ ಈ ಕಾಂಬ್ಳೆಗೆ ಮೊದಲನೆ ಹೆಂಡತಿ ಜಯಪದ್ಮ, ಎರಡನೇ ಹೆಂಡತಿ ಸುಮಿತ್ರಾ ಅಲ್ಲದೇ ಮೂರನೇ ಹೆಂಡತಿಯಾಗಿ ಶಿವರತ್ನಮ್ಮವೆಂಬ ಸ್ತ್ರೀರತ್ನವೂ ಇದೆ ಎಂಬ ಪುಕಾರಿದೆ.

ಈ ಮೂವರೂ ಸ್ತ್ರೀಮಣಿಗಳ ಹಾದಿರಂಪ-ಬೀದಿರಂಪವೇ ಈಗಿನ ಗಲಾಟೆಗೆ ಕಾರಣ.

ಜಯಪದ್ಮ ಜಮಾನ

ಗುಲ್ಬರ್ಗಾದ ಪಡೋಳ್‌ನವನಾದ ಚಂದ್ರಕಾಂತ ಕಾಂಬ್ಳೆ ರೇಷ್ಮೆ ಇಲಾಖೆಯಲ್ಲಿ ಹಂತಹಂತವಾಗಿ ಮೇಲೇರಿ ಈಗ ಮೈಸೂರಿನ ರೇಷ್ಮೆ ಸಂಶೋಧನಾ ಕೇಂದ್ರದ ನಿರ್ದೇಶಕನಾಗಿದ್ದಾನೆ. ದಲಿತ ವರ್ಗದ ಕಾಂಬ್ಳೆ ಶುರುವಿನಿಂದಲೇ ಉತ್ತಮ ಹುದ್ದೆಯಲ್ಲಿದ್ದುದರಿಂದ ಆಗ ಕಾಂಗ್ರೆಸ್ ನಾಯಕರಾಗಿದ್ದ ಬಿ. ಬಸವಲಿಂಗಪ್ಪ ತಮ್ಮ ಮಗಳು ಜಯಪದ್ಮರನ್ನು ಈತನಿಗೆ ಕೊಟ್ಟು ಮದುವೆ ಮಾಡಿದ್ದರು. ಈ ದಂಪತಿಗಳಿಗೆ ಹರಿಣಿ, ಭವಾನಿ ಹಾಗೂ ವಿನಯ್ ಎಂಬ ಮೂವರು ಮಕ್ಕಳಿದ್ದಾರೆ. ಆದರೆ ದಾಂಪತ್ಯ ಜೀವನ ಮಾತ್ರ ಸುಸೂತ್ರವಾಗಿ ನಡೆಯಲಿಲ್ಲ, ರಾಜಕಾರಣಿಯ ಮಗಳಾಗಿದ್ದ ಜಯಪದ್ಮ ಬೆಂಗಳೂರಲ್ಲಿ ಓಡಾಡಿಕೊಂಡು ಪಾರ್ಟ್‌ಟೈಂ ರಾಜಕೀಯ ನಡೆಸುತ್ತಾ ಒಂದೆರಡು ಬಾರಿ ಸಣ್ಣಪುಟ್ಟ ಎಲೆಕ್ಷನ್‌ಗೂ ನಿಂತರು. ಇತ್ತ ಕಾಂಬ್ಳೆ ವರ್ಗಾ ಆದ ಕಡೆಗೆಲ್ಲಾ ಹೋಗಬೇಕಾಗಿ ಬಂದರೂ ಜಯಪದ್ಮ ಮಾತ್ರ ಬೆಂಗಳೂರು ಬಿಡಲಿಲ್ಲ. ಹೀಗಾಗಿ ಕಾಂಬ್ಳೆ ಮೈಸೂರಿಗೆ ವರ್ಗವಾಗಿ ಬಂದಾಗ ಚನ್ನಪಟ್ಟಣ ಟೌನಿನ ಭಂಗಯ್ಯನ ಮಗಳು ಸುಮಿತ್ರಾಳ ರಂಗಪ್ರವೇಶವಾಗಿದೆ.

ಈ ಹಂತದಲ್ಲಿ ಸುಮಿತ್ರಾ "ಕಾಂಬ್ಳೆ ಚನ್ನಪಟ್ಟಣದ ವೆಂಕಟಾಚಲಯ್ಯನ ಮೂಲಕ ಬಂದು ನನ್ನ ನೋಡಿ ಮದುವೆ ಆಗಿ ಮೈಸೂರಿಗೆ ಕರಕೊಂಡು ಹೋದ್ರು" ಎನ್ನುತ್ತಾಳೆ. ಆದರೆ ಕಾಂಬ್ಳೆ ಮನೆ ಕೆಲಸಕ್ಕೆ ಕರೆದುಕೊಂಡು ಹೋದೆ ಅಷ್ಟೆ ಎನ್ನುತ್ತಿದ್ದಾನೆ. ಅದೇನೇ ಇರಲಿ ಸುಮಿತ್ರಾ 1994 ರಲ್ಲಿ ಮೈಸೂರಿಗೆ ಹೋಗಿ ಕಾಂಬ್ಳೆ ಮನೆ ಸೇರಿದ ನಂತರ ಪ್ರೀತಿ ಹೆಸರಿನ ಒಂದು ಹೆಣ್ಣು ಆಗಿದೆ. ಈ ಮಗು


ಮಗಳೊಂದಿಗೆ...


ಕಾಂಬ್ಳೆಯದ್ದೇ ಎನ್ನಲು ಒಂದು ಸಾಕ್ಷ್ಯಯೂ ಇದೆ.

ಈಗ್ಗೆ ಮೂರ್ನಾಲ್ಕು ವರ್ಷಗಳ ಹಿಂದೆಯೇ ಸುಮಿತ್ರಾಳನ್ನು ಕಾಂಬ್ಳೆ ತನ್ನ ಮನೆಯಿಂದ ಹೊರಹಾಕಿ ಮತ್ತೆ ಮೊದಲ ಹೆಂಡತಿ ಜಯಪದ್ಮ ಜೊತೆ ಇರತೊಡಗಿದ. ಆಗ ಸುಮಿತ್ರಾ ಅಲಸೂರ್ ಗೇಟ್ ಮಹಿಳಾ ಪೊಲೀಸ್ ಠಾಣೆಗೆ ದೂರು ಕೊಟ್ಟಾಗ ಪ್ರಕರಣ ಆಗ ಸಿಟಿ ಪೊಲೀಸ್ ಕಮಿಷನರ್‌ರಾಗಿದ್ದ ಮರಿಸ್ವಾಮಿ ಹತ್ತಿರ ಹೋಗಿತ್ತು. ಮರಿಸ್ವಾಮಿ ಹಾಗೂ ಬಡಣ್ಣನವರ್ ಎಂಬ ಇನ್ನೊಬ್ಬ ಪೊಲೀಸ್ ಆಫೀಸರ್ ಸೇರಿ ಕಾಂಬ್ಳೆಯನ್ನು ಕರೆಸಿ, "ಸುಮಿತ್ರಾಗೆ ಪರಿಹಾರ ಕೊಟ್ಟರೆ ಸರಿ, ಇಲ್ಲಾಂದ್ರೆ ಬಟ್ಟೆ ಬಿಚ್ಚಿಸಿ ಬರೀ ಚೆಡ್ಡೀಲಿ ನಿಲ್ಲಿಸ್ತೀವಿ" ಎಂದು ಧಮಕಿ ಕೊಟ್ಟಿದ್ದರು.

ಕಳ್ಳನ ಮನಸ್ಸು ಹುಳ್ಳುಳ್ಳಗೆ ಎಂಬಂತೆ ಹೆದರಿಕೊಂಡ ಕಾಂಬ್ಳೆ ಅರ್ಜೆಂಟಾಗಿ ಮೂರು ಲಕ್ಷ ರೂಪಾಯಿ ಜೋಡಿಸಿ ತಂದು ಸುಮಿತ್ರಾಗೆ ಕೊಟ್ಟ. ಆ ಹಣ ಕಮಿಷನರ್ ಕಚೇರಿ ರೋಡಲ್ಲೇ ಇರುವ ಸಿಂಡಿಕೇಟ್ ಬ್ಯಾಂಕ್ ಶಾಖೆಯಲ್ಲಿ ಈಗಲೂ ಮಗಳು ಪ್ರೀತಿ ಹೆಸರಿನಲ್ಲಿ ಫಿಕ್ಸೆಡ್ ಡಿಪಾಸಿಟ್ ಆಗಿ ಭದ್ರವಾಗಿದೆ.

ಸುಮಿತ್ರಾ ತನ್ನ ಹೆಂಡತಿ ಅಲ್ಲದೇ ಹೋಗಿದಿದ್ದರೆ, ಪ್ರೀತಿ ಮಗಳೇ ಅಲ್ಲದಿದ್ದರೆ ಈ ಕಾಂಬ್ಳೆ ಅದ್ಯಾಕೆ ಮೂರು ಲಕ್ಷದಷ್ಟು ದೊಡ್ಡ ಮೊತ್ತವನ್ನು ತಪ್ಪುದಂಡವಾಗಿ ಕೊಡಲು ಒಪ್ಪುತ್ತಿದ್ದ?

ಇಷ್ಟೆಲ್ಲಾ ರಾದ್ಧಾಂತ ಮಾಡಿಕೊಂಡ ಮೇಲೂ ಬುದ್ಧಿ ಕಲಿಯದ ಕಾಂಬ್ಳೆ ತೀರಾ ಇತ್ತೀಚೆಗೆ ರಾಮನಗರ ಸಮೀಪದ ಹಳ್ಳಿ ಹುಡುಗಿ ಶಿವರತ್ನಮ್ಮ ಎಂಬುವಳನ್ನು ಕರೆಸಿಕೊಂಡು ಮೈಸೂರಿನ ಇಲಾಖಾ ಕ್ವಾರ್ಟರ್ಸ್‌ನಲ್ಲಿ ಇರಿಸಿಕೊಂಡಿದ್ದಾನೆ. ಅವಳಿಗೂ ಈಗ ಒಂದು ಮಗುವಂತೆ.


ಮದುವೆ ಸಂದರ್ಭದಲ್ಲಿ....

ಅಂದರೆ 30 ವರ್ಷದ ಸರ್ವೀಸ್‌ನಲ್ಲಿ ಮೂರು ಮದುವೆ, ಐದಾರು ಮಕ್ಕಳು ಈತನ ಸಾಧನೆ ಅಂತಾಯಿತು. ಜೊತೆಗೆ ಬೆಂಗಳೂರು ಕೋರಮಂಗಲದಲ್ಲೊಂದು ಮೂರಂತಸ್ತಿನ ಮನೆ ಇದೆ. ಇದರಿಂದ ಪ್ರತಿ ತಿಂಗಳು 50 ಸಾವಿರದಷ್ಟು ಬಾಡಿಗೇ ಹಣ ಹುಟ್ಟುತ್ತಿದೆ. ಅಲ್ಲದೆ ಬೆಂಗಳೂರಲ್ಲೇ ಮೂರು ಸೈಟು, ಮೈಸೂರಿನ ಮಹದೇವಪುರದಲ್ಲೊಂದು ಮನೆ, ಅಲ್ಲೂ ಒಂದೆರಡು ಸೈಟುಗಳು, ಗುಲ್ಬರ್ಗಾದಲ್ಲಿ ಇಪ್ಪತ್ತೈದು ಎಕರೆ ಜಮೀನು ಎಲ್ಲಾ ಕಾಂಬ್ಳೆಗಿದೆ.

ಆದರೆ ಇವನಿಗೆ ಕೈತುಂಬಾ ಎಷ್ಟು ಆಸ್ತಿ ಇದೆಯೋ ಅದಕ್ಕೆ ಸಮನಾಗಿ ಮೈ ತುಂಬಾ ಹೆಂಡತಿಯರೂ ಇರುವುದರಿಂದ ಅದನ್ನೆಲ್ಲಾ ಈಗ ಹಂಚಬೇಕಾಗಿ ಬಂದಿದೆ. ಈ ಥರ ಒಂದೇ ಸಲಕ್ಕೆ ಒಬ್ಬರಾದ ಮೇಲೊಬ್ಬರಂತೆ ಮೂವರನ್ನು ಮದುವೆ ಆಗಿರುವ ತಪ್ಪಿಗೆ ನಾಳೆ ಕೆಲಸವೂ ಹೋಗಬಹುದು.

ಕಾಂಬ್ಳೆಗಿದು ಬೇಕಿತ್ತಾ?

■ ವರದಿಗಾರ

ಚನ್ನಪಟ್ಟಣ ಪೊಲೀಸರದ್ದೂ ಕೈವಾಡವಿದೆ

ಈ ಕಾಂಬ್ಳೆ ತಲೆ ಕಂಡರಾಗದ ಒಂದಿಬ್ಬರು ರಾಜ್ಯ ಪೊಲೀಸ್ ಇಲಾಖೆಯೊಳಗೆ ಇದ್ದಾರೆ. ಅವರಲ್ಲಿ ಬೆಂಗಳೂರಿನ ಹೊಯ್ಸಳ ಪೊಲೀಸ್ ಡಿವೈಎಸ್‌ಪಿ ಸಿದ್ಧರಾಮಯ್ಯ ಹಾಗೂ ಉಪ್ಪಾರಪೇಟೆ ಟ್ರಾಫಿಕ್ ಇನ್ಸ್‌ಪೆಕ್ಟರ್ ಸತ್ಯವತಿ ಪ್ರಮುಖರು. ಯಾವುದೋ ಹಳೇ ಜಿದ್ದಿನಿಂದ ಕಾಂಬ್ಳೆ ವಿರುದ್ಧ ಸೆಟೆದು ನಿಂತಿರುವ ಈ ಜೋಡಿ ಈಗ ಕಾಂಬ್ಳೆಯ ಎರಡನೇ ಹೆಂಡತಿ ಸುಮಿತ್ರಾಗೆ ಸಪೋರ್ಟ್ ನೀಡುತ್ತಾ ಕಾಂಬ್ಳೆಯನ್ನು ಹಣ್ಣುಗಾಯಿ ನೀರುಗಾಯಿ ಮಾಡುತ್ತಿದೆ.

ಈ ನಡುವೆ ಸುಮಿತ್ರಾ ಒಮ್ಮೆ ಕಾಂಬ್ಳೆ ವಿರುದ್ಧ ಜೀವನಾಂಶ ಕೋರಿ ಫ್ಯಾಮಿಲಿ ಕೋರ್ಟಿಗೂ ಹೋಗಿದ್ದಾರೆ. ಕಾಂಬ್ಳೆಯಿಂದ ಈಗಾಗಲೇ ಮೂರ್ನಾಲ್ಕು ಲಕ್ಷ ಜೀವನಾಂಶ ಗಿಟ್ಟಿಸಿರುವ ಸುಮಿತ್ರಾ ಅಷ್ಟಕ್ಕೆ ಸುಮ್ಮನಾಗುವಂತೆ ಕಾಣುತ್ತಿಲ್ಲ.

ಡಾ. ದೊಡಮನಿ ಶೂಟ್‌ಔಟ್ ಕೇಸ್

▶▶▶ ಹಿಂದಿನ ಪುಟದಿಂದ


ಹಿರೇಮಠ್ ಮತ್ತು ದೊಡಮನಿ ನಡುವಿನ ಈ ಜಿದ್ದಾಜಿದ್ದಿ ಉತ್ತುಂಗದಲ್ಲಿದ್ದಾಗಲೇ ಆಸ್ಪತ್ರೆಗೆ ನಿಯಾನ್ ದೀಪಗಳನ್ನು ಸರಬರಾಜು ಮಾಡುವ ಗುತ್ತಿಗೆಯನ್ನು ಕಾಂಗ್ರೆಸ್‌ನ ಬಂಗಾರೇಶ್ ಹಿರೇಮಠ್ ಪಡೆದಿದ್ದ. ಇವನಿಗೆ ಬೆಂಬಲವಾಗಿ ಮಾಜಿ ಸಂಸದ ವಿನಯ್ ಕುಲಕರ್ಣಿಯ ತಮ್ಮ ವಿಜಯ್ ಕುಲಕರ್ಣಿ ನಿಂತಿದ್ದ. ಇವರಿಬ್ಬರೂ ಕಿಮ್ಸ್ ನಿರ್ದೇಶಕ ಹಿರೇಮಠ್‌ರೊಂದಿಗೆ ಡೀಲ್ ಕುದುರಿಸಿಕೊಂಡಿದ್ದರು.


ನಡುಮನಿ

ಆದರೆ ಈ ಡೀಲ್‌ನಲ್ಲಿ ಅಧೀಕ್ಷಕರಾಗಿದ್ದ ದೊಡಮನಿಯವನ್ನು ಸೇರಿಸಿಕೊಂಡಿರಲಿಲ್ಲ. ಅಂದಮೇಲೆ ದೊಡಮನಿಯವರು ಇದಕ್ಕೆ ಏಕೆ ಸಹಕರಿಸುತ್ತಾರೆ? ನೇರವಾಗಿ ಹಿರೇಮಠ್‌ರೊಂದಿಗೆ ಬಹಿರಂಗ ಜಗಳಕ್ಕಿಳಿದುಬಿಟ್ಟರು. ಅಪಾರ ಮೊತ್ತದ ಹಣವನ್ನು ಲೂಟಿ ಮಾಡುವ ಹಾದಿಯಲ್ಲಿನ ಮುಳ್ಳಾಗಿ ನಿಂತಿದ್ದ ದೊಡಮನಿಯನ್ನು ತೆಗೆಯಲು ಈ ಕಾಂಗ್ರೆಸ್ ಕಂಟ್ರಾಕ್ಟರ್‌ಗಳು ಮತ್ತು ಹಿರೇಮಠ್ ಸೇರಿಕೊಂಡು ಸಂಚು ರೂಪಿಸಿಯೇ ಬಿಟ್ಟರು. ಅದರ ಪರಿಣಾಮವೇ ಡಿಸೆಂಬರ್ 11ರ ರಾತ್ರಿ ದೊಡಮನಿಯ ಮೇಲೆ ನಡೆದ ಶೂಟೌಟ್.

ಉಳ್ಳಾಗಡ್ಡಿಮಠನ ಪಾತ್ರ!

ಹಿರೇಮಠ್, ಬಂಗಾರೇಶ್ ಮತ್ತು ವಿಜಯ ಕುಲಕರ್ಣಿ ಹೆಣೆದ ಪ್ಲಾನ್ ಅನ್ನು ಜಾರಿಗೊಳಿಸುವ ಹೊಣೆಗಾರಿಕೆಯನ್ನು ವಿಶ್ವಪ್ರಕಾಶ್ ಉಳ್ಳಾಗಡ್ಡಿಮಠ ಎಂಬ ಮದ್ದುಗುಂಡಿನ ವ್ಯಾಪಾರಿಗೆ ವಹಿಸಲಾಯಿತು. ದೊಡಮನಿಯ ಮೇಲೆ ಗುಂಡಿನ ದಾಳಿ ನಡೆದ ದಿನ ಸಂಜೆ ಈ ವಿಶ್ವಪ್ರಕಾಶ್ ಉಳ್ಳಾಗಡ್ಡಿ ಸುಮಾರು ಹತ್ತು ಜನರನ್ನು ಕರೆದುಕೊಂಡು ಬಂದು ದೊಡಮನಿಯವರ ಛೇಂಬರಿನಲ್ಲಿ ಕುಳಿತಿದ್ದ. ಆ ಹತ್ತು ಮಂದಿ ಯಾರು? ಅವರಲ್ಲಿ ದೊಡಮನಿಯ ಮೇಲೆ ದಾಳಿ ಮಾಡಿದ ಇಬ್ಬರು ಹುಡುಗರೂ ಇದ್ದರು. ಅವರಿಗೆ ದೊಡಮನಿಯನ್ನು ತೋರಿಸುವ ಸಲುವಾಗಿಯೇ ಕರೆತಂದಿದ್ದನೇ ಎಂಬುದು ಇನ್ನೂ ಸ್ಪಷ್ಟವಾಗಬೇಕಿದೆ. ದೊಡಮನಿ ಮಾತ್ರ ಈ ವಿಚಾರವನ್ನು ಮಾರ್ಚ್ 7ರಂದು ಕಮೀಷನರ್ ನಾರಾಯಣ ನಡುಮನಿಗೆ ಬರೆದ ಪತ್ರದಲ್ಲಿ ಸ್ಪಷ್ಟಪಡಿಸಿದ್ದಾರೆ.


ಪ್ರತಾಪ್

ಆ ಇಬ್ಬರು ಹಂತಕರು .32 ಬೋರ್ ಪಿಸ್ತೂಲನ್ನು ಸೊಂಟದಲ್ಲಿ ಸಿಕ್ಕಿಸಿಕೊಂಡು ಕಿಮ್ಸ್ ಮುಖ್ಯಗೇಟಿನ ಮುಂದಿರುವ 'ಅಭಿಮಾನ್ ಹೋಟೆಲ್'ನಲ್ಲಿ (ಬಾರ್ ಅಂಡ್ ರೆಸ್ಟೋರೆಂಟ್) ಕಂಠಪೂರ್ತಿ ಕುಡಿದು ನಂತರ ದೊಡಮನಿ ಮನೆ ಹತ್ತಿರ ಬಂದಿದ್ದರು. ದೊಡಮನಿಯ ಆಗಮನವಾಗುತ್ತಿದ್ದಂತೆ ಗುಂಡಿನ ಮಳೆಗರೆದು ಪರಾರಿಯಾದರು. ಇತ್ತ ದೊಡಮನಿಗೆ ಗುಂಡೇಟು ಬೀಳುತ್ತಿದ್ದಂತೆ ವಿಜಯ್ ಕುಲಕರ್ಣಿ ಹುಬ್ಬಳ್ಳಿಯಿಂದ ಜಾಗಖಾಲಿ ಮಾಡಿ ಹೈದರಾಬಾದ್ ಸೇರಿಕೊಂಡಿದ್ದ.

ಚಂದನರಾಣಿ ಔಟ್ ಏಕೆ?

ಇನ್ನೊಂದೆಡೆಗೆ ದೊಡಮನಿಯವರ ಮೂರನೇ ಪತ್ನಿ ಚಂದನರಾಣಿಗೂ ಹಾಗೂ ಕೊಲೆ ಸಂಚು ರೂಪಿಸಿದ ಬಂಗಾರೇಶ್ ಹಿರೇಮಠ್ ಮತ್ತು ವಿಜಯ ಕುಲಕರ್ಣಿಗೂ ಅನ್ಯೋನ್ಯ ಸಂಬಂಧವಿದ್ದುದು ಹುಬ್ಬಳ್ಳಿಯ ಪೊಲೀಸರನ್ನೂ ಒಳಗೊಂಡಂತೆ ಎಲ್ಲರಿಗೂ ಗೊತ್ತಿರುವ ವಿಚಾರ. ತನ್ನ ಹೆಂಡತಿ ಬೇರೆಯವರೊಂದಿಗೆ ಓಡಾಡಿಕೊಂಡಿರುವುದು, ಅದನ್ನು ಪಕ್ಕದ ಒಳಗೆ ಹೊರಗೆ ಜನ ಎಲೆ ಅಡಿಕೆ ಜಗಿದಂತೆ ಮಾತಾಡಿಕೊಳ್ಳುವುದು ದೊಡಮನಿಗೆ ಬೇಸರ ತರಿಸಿತ್ತು. ಈ ಕಾರಣಕ್ಕಾಗಿಯೇ ಹೆಂಡತಿಯೊಂದಿಗೆ ಎಷ್ಟೋ ಬಾರಿ ಜಗಳ ಆಗಿದ್ದೂ ಉಂಟು. ಅಲ್ಲದೇ ದೊಡಮನಿಯವರಿಗೆ ಮೊದಲ ಪತ್ನಿಯಿಂದ ಪಡೆದ ಒಬ್ಬ ಪುತ್ರಿ ಹಾಗೂ ಎರಡನೇ ಹೆಂಡತಿಯಿಂದ ಪಡೆದ ಒಬ್ಬ ಪುತ್ರ ಇದ್ದಾರೆ. ಈ ಮಕ್ಕಳ ವಿಚಾರದಲ್ಲಿಯೂ ದೊಡಮನಿ ಮತ್ತು ಚಂದನರಾಣಿಯ ನಡುವೆ ಜಗಳವಾಗುತ್ತಿತ್ತು. ಅವರ ಕಿತ್ತಾಟ ಕೆಲವೊಮ್ಮೆ ತಾರಕಕ್ಕೇರಿ ಪೊಲೀಸ್ ಸ್ಟೇಶನ್ ಮೆಟ್ಟಿಲೇರಿದ್ದೂ ಉಂಟು. ಹೀಗಿದ್ದ ಮೇಲೆ, ಚಂದನರಾಣಿ ಕೂಡ ಈ ಕೊಲೆಯತ್ನಕ್ಕೆ ಎಷ್ಟರಮಟ್ಟಿಗೆ ಸಹಕರಿಸಿದ್ದಾಳೆ ಎಂಬುದನ್ನು ಅರಿತುಕೊಳ್ಳಲು ಆಕೆಯನ್ನು ಬ್ರೇನ್ ಮ್ಯಾಪಿಂಗ್‌ಗಾಗಲೀ ಅಥವಾ ನ್ಯಾರ್ಕೋ ಅನಾಲಿಸಿಸ್‌ಗಾಗಲೀ ಒಳಪಡಿಸದಿರುವುದು ಆಶ್ಚರ್ಯ ತರುತ್ತದೆ.

ಒಟ್ಟಿನಲ್ಲಿ, ಹುಬ್ಬಳ್ಳಿ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಪೊಲೀಸರು ಏಳು ಜನ ಶಂಕಿತ ಅಪರಾಧಿಗಳ ಪಟ್ಟಿ ಸಲ್ಲಿಸಿದ್ದು ಅದರಲ್ಲಿ ಕೇವಲ ನಾಲ್ಕು ಜನರನ್ನು ಮಾತ್ರ ಬಂಧಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದೆ. ಸದ್ಯ ನ್ಯಾಯಾಲಯ ಅವರನ್ನೆಲ್ಲ ಹದಿನಾಲ್ಕು ದಿನಗಳ ನ್ಯಾಯಾಂಗ ಬಂಧನದಲ್ಲಿರಿಸಿದೆ. ಈ ನಡುವೆ ಶ್ಯಾಮ ಜಾಧವ್ ಎಂಬ ಏಳನೇ ಆರೋಪಿ ಜೂನ್ 4ರಂದು ದೊಡಮನಿಯವರ ಮನೆಗೆ ಬಂದು ತಾನು ನಿರಪರಾಧಿ, ಉಳ್ಳಾಗಡ್ಡಿಮಠ ತನ್ನನ್ನು ಬೇಕಂತಲೇ ಸಿಕ್ಕಿಸಿದ್ದಾನೆ ಎಂದು ಅಲವತ್ತುಕೊಂಡದ್ದೂ ನಡೆದಿದೆ. ಈತ ಉಳ್ಳಾಗಡ್ಡಿಮಠನ ಶಿಷ್ಯನೂ ಹೌದು ಹಾಗೂ ಸೆಟ್ಲಮೆಂಟಿನ ಮಾಜಿ ರೌಡಿಯೂ ಹೌದು.

ಏನೇ ನ್ಯೂನತೆಗಳಿದ್ದರೂ, ಐದೂವರೆ ತಿಂಗಳ ದೀರ್ಘ ಸಮಯ ತೆಗೆದುಕೊಂಡರೂ ಆರೋಪಿಗಳನ್ನು ಬಂಧಿಸಿದ ಪೊಲೀಸರ ಕ್ರಮ ಶ್ಲಾಘನೀಯವಂತೂ ಹೌದು.

■ ವರದಿಗಾರ

ನಮ್ಮಪ್ಪನ ಮಾತ ಕೇಳಿದ್ದೇ ತಪ್ಪಾಯ್ತು ಕಂಡ್ರೀ

ಥೂತ್ತೇರಿ

ಯಾಹೂ

ನಮ್ಮ ಎಡೂರಪ್ಪನವರಿಗೆ ಮುಖ್ಯಮಂತ್ರಿಯಾದ ಖುಷಿ ಒಂದು ರೀತಿಯ ಉನ್ಮಾದ ಸ್ಥಿತಿ ತಲುಪಿದ ಕೂಡಲೇ, ದ್ರೋಹಿ ದೇವೇಗೌಡ, ವಂಚಕ ಕುಮಾರಸ್ವಾಮಿ ಎಂಬುದೆಲ್ಲಾ ಮನಸ್ಸಿನಿಂದ ಮಾಯವಾಗಿ, ಈ ಕೂಡಲೇ ವಂಚಕದ್ರೋಹಿಗಳನ್ನು ಸಂಧಿಸಿ ವಂದಿಸಿ ಬರಬೇಕೆನಿಸಿತಂತಲ್ಲಾ,

ಇತ್ತ ಎಡೂರಪ್ಪ ದಿಕ್ಕುತಪ್ಪಿದ ಎತ್ತಿನಂತೆ ತಮ್ಮ ಮನೆಯ ಕಡೆ ಬರುತ್ತಿರುವ ಸುದ್ದಿ ತಿಳಿದ ದೇವೇಗೌಡರು "ಬರಲಿ, ಬರಲಿ" ಎಂದು ತಮ್ಮ ಎಂದಿನ ಅರಳೆಣ್ಣೆ ಮುಖಕ್ಕೆ ಒಂದಿಷ್ಟು ಬೇವಿನೆಣ್ಣೆ ಸವರಿಕೊಂಡು ಕೂತರಂತಲ್ಲಾ, ಆ ಕೂಡಲೇ ದಿಢೀರೆಂದು ಒಳನುಗ್ಗಿ ಬಂದ ಎಡೂರಪ್ಪ ಎಮ್ಮೆ ಮುಖಕ್ಕೆ ಉಚ್ಚೆಳ್ಳು ಸೊಪ್ಪು ಹಿಡಿದಂತೆ ಹೂವಿನ ಬೊಕೆ ಹಿಡಿದು "ತಮ್ಮನ್ನ ನೋಡಬೇಕು ಅನ್ನುಸ್ತು ಅದಕ್ಕೆ ಓಡಿಬಂದೆ" ಎಂದರಂತಲ್ಲಾ, ಅದಕ್ಕೆ ದೇವೇಗೌಡರಿಗೆ ಏನು ಹೇಳಲು ತೋಚದೆ "ಹಾಸನಕ್ಕು ಹೋಗಿದ್ದಿರಂತೆ" ಎಂದರಂತಲ್ಲಾ, ಕೂಡಲೇ ಎಡೂರಪ್ಪ "ಅಯ್ಯೋ, ಆ ಗೋಳು ನೋಡಕ್ಕಾಗಲ್ಲ ಸಾರ್. 25 ಜನ ಸತ್ತವ್ರುರೆ, ಆದರಲ್ಲಿ 18 ಜನ ಹೆಂಗುಸರೇ ಸತ್ತವ್ರುರೆ. ನಾನು ಸಾಂತ್ವನ ಹೇಳಿ ಬಂದೆ" ಎಂದರಂತಲ್ಲಾ, ಅದಕ್ಕೆ ಗೌಡರು "ಒಳ್ಳೆದು. ನಾನು ಮಲಗಬೇಕು, ಹೋಗಿಬನ್ನಿ" ಎಂದರಂತಲ್ಲಾ, ಥೂತ್ತೇರಿ!

* * * * *

ದೇವೇಗೌಡರ ಈ ನಿರುತ್ಸಾಹದ ಪ್ರತಿಕ್ರಿಯೆಗೆ ಕಾರಣವೇನೆಂದು ಎಡೂರಪ್ಪ ಶಾನೆಹೊತ್ತು ಯೋಚಿಸಲಾಗಿ, ಕಡೆಗೂ ಕಾರಣ ಹೊಳೆದೇಬಿಟ್ಟಿತಂತಲ್ಲಾ, ತಾನು ಅಧಿಕಾರ ಸಿಕ್ಕ ಅವಧಿಯಲ್ಲಿ ಹಿಂದಿನ ಸರ್ಕಾರಗಳ ಹಗರಣವನ್ನು ಬಯಲಿಗೆಳೆದು ಬಿಸಾಡುತ್ತೇನೆ ಅನ್ನಬಾರದಿತ್ತು. ಹಿಂದಿನ ಸರ್ಕಾರಗಳ ಹಗರಣದಲ್ಲಿ ನನ್ನದೂ ಇಪ್ಪತ್ತು ತಿಂಗಳ ಪಾಲಿದೆ ಎಂದು ಯೋಚಿಸಬೇಕಿತ್ತು ಎಂದು ಹಲುಬಿದರಂತಲ್ಲಾ, ದೇವೇಗೌಡರ ಮಕ್ಕಳನ್ನು ಅಧಿಕಾರದ ಹತ್ತಿರದವರೆಗೂ ತಂದುಬಿಟ್ಟು, ತಾನು ಮಾತ್ರ ಅಜ್ಞಾತವಾಸಿಯಂತೆ ಅತಂತ್ರನಾದ ಸಿದ್ದರಾಮಯ್ಯ "ಹಿಂದಿನ ಸರ್ಕಾರದ ಹಗರಣಗಳ ತನಿಖೆಯಲ್ಲಿ ಸ್ಕೂಲು ಮಕ್ಕಳ ಸೈಕಲ್ ಹಗರಣದ 30 ಕೋಟಿ ಕಿಕ್‌ಬ್ಯಾಕ್ ಸೇರಲಿ. ಇದು ನನ್ನ ಆಪಾದನೆಯಲ್ಲ, ದೇವೇಗೌಡರ ಮಗ ರೇವಣ್ಣನ ಆಪಾದನೆ" ಎಂದು ಜಾರಿಕೊಂಡರಂತಲ್ಲಾ,

ಇತ್ತ ದೇವೇಗೌಡ ನಿದ್ರೆಗೆ ತುತ್ತಾಗುತ್ತಿರುವಂತೆ ಹೊಸ ಫೈಲುಗಳನ್ನ ತೆಗೆದುಕೊಂಡ ರೇವಣ್ಣ, ತನಗೆ ಗೊತ್ತಿರುವ ಕೆಲವು ಕಾಗದಪತ್ರಗಳನ್ನು ಅದರೊಳಕ್ಕೆ ಸೇರಿಸಿ, ಪ್ರೆಸ್‌ಮೀಟ್ ಮಾಡುತ್ತ ಸದರಿ ಫೈಲನ್ನು ಅತ್ತಇತ್ತ ಎಸೆಯುತ್ತ, ಅಪ್ಪನ ವರಸೆ ಕಲಿತ ಖುಷಿಯಲ್ಲಿ ಜೊಲ್ಲನ್ನು ಜಾಸ್ತಿ ಮಾಡಿಕೊಂಡನಂತಲ್ಲಾ, ಥೂತ್ತೇರಿ!!!

* * * * *

ಜಗದೀಶ್ ಶೆಟ್ಟರ್ ಎಂಬ ಮಾಜಿ ವಿರೋಧ ಪಕ್ಷದ ನಾಯಕರು ತಾವು ಹಚ್ಚಿದ ಪಟಾಕಿಯನ್ನು ತಮ್ಮ ಮುಕುಳಿಗೇ ಇಟ್ಟುಕೊಂಡು ಟುಸ್ ಮಾಡಿಕೊಂಡರಂತಲ್ಲಾ, ಎಸ್ಸೆಂ ಕೃಷ್ಣರ ಕಾಲದಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಶೆಟ್ಟರ್ ಏನು ಮಾಡಿದರೂ ಕೃಷ್ಣರ ಸರ್ಕಾರವನ್ನು ವಿರೋಧಿಸಲಾರದೆ ನೆಲಹಿಡಿದು ಹೋಗಿದ್ದರಂತಲ್ಲಾ, ಇಂತಹ ಆಸಾಮಿ ಯಡ್ಡಿ ಎದುರು ಚೆಡ್ಡಿ ಬಿಗಿದು ತೊಡೆ ತಟ್ಟಿದ್ದನ್ನು ನೋಡಿದ ಹುಬ್ಬಳ್ಳಿ ಜನ "ಈ ಶೆಟ್ಟರ್ ಎಂತಹ ಗೊಂಪರ್ ಎಂದು ನಮಗೆ ಗೊತ್ತಿಲ್ಲವೆ" ಎಂದು ಅನುಮಾನ ವ್ಯಕ್ತಪಡಿಸಿದರಂತಲ್ಲಾ, ಅದೇ ಹೊತ್ತಿಗೆ ದಿಲ್ಲಿ ಚೆಡ್ಡಿಗಳು ಬಂದು "ಅಲ್ಲೊ ಶೆಟ್ಟ್ರ, ಆ ಎಡ್ಡಿ ನಿನಗೆ ಕೆಲಸಕ್ಕೆ ಬಾರದ ಖಾತೆ ಕೊಟ್ಟು ಅದಕ್ಕೆ ಹಣ ಕೊಡಲ್ಲ, ಒಳ್ಳೆ ಅಧಿಕಾರಿಗಳನ್ನ ಕೊಡಲ್ಲ, ನಿನ್ನ ಕ್ಷೇತ್ರದ ಕಡೆ ತಿರುಗಿಯೂ ನೋಡಲ್ಲ, ಆಗೇನು ಮಾಡ್ತೀ?" ಎಂದರಂತಲ್ಲಾ, ಸದಾ ಆಮಿಷಕ್ಕೆ ಬಲಿಯಾಗುತ್ತ ತನ್ನ ಸ್ಥಾನಮಾನಗಳನ್ನೇ ಬಲಿಗೊಡುತ್ತ ಬಂದಿರುವ ಶೆಟ್ಟರ್ "ಆಯ್ತು, ತಾವು ಹೇಳಿದಂತೆ ಮಾಡುತ್ತೇನೆ. ದೂಸರಾ ಮಾತಾಡಲ್ಲ, ಸ್ಪೀಕರ್ ಕುರ್ಚಿ ಎಲ್ಲಿದೆ ತೋರಿಸಿ" ಎಂದರಂತಲ್ಲಾ, ಥೂತ್ತೇರಿ!!!

* * * * *

ಗೆದ್ದು ಖುಷಿಯಲ್ಲಿರುವವರನ್ನು ಮಾತನಾಡಿಸುವುದಕ್ಕಿಂತ ಸೋತು ಸುಮ್ಮನಾದವರನ್ನು ಮಾತನಾಡಿಸುವುದು ಒಳ್ಳೆಯದೆಂದು ಭಾವಿಸಿ ಮಾಜಿ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯನ್ನು ಮಾತನಾಡಿಸಿದರೆ ಹೇಗೆ ಅನ್ನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಲಾಗಿ, ರಿಂಗಾಯ್ತು,

ರಿಂಗ್ ಟೋನ್: ಈ ಸಂಜೆ ಯಾಕಾಗಿದೇ ನೀನಿಲ್ಲದೆ ಈ ಸಂಜೆಯಾ....

"ಹಲೋ, ಯಾರು?"

"ನಾನು ಸಾರ್, ಯಾಹೂ."

"ಏನ್ ಯಾಹು ಅವರೆ, ಈ ಕಡೆ ಬರ್ಲೆಯಿಲ್ಲ?"

"ಒಂದಿಷ್ಟು ಬಿಜಿಲಿದ್ದಿನಿ ಸಾರ್. ಸಂಜೆ ಬರ್ತಿನಿ. ನೀವಂತು ಆರಾಮಾಗಿದ್ದಿರಾ?"

"ಎಲ್ಲಿ ಆರಾಮ್ರಿ? ಈ ನಮ್ಮಪ್ಪ ಮಾಡೊ ಕೆಲ್ಸ ಒಂದೊಂದಲ್ಲ,"

"ಅವುರೇನು ಮಾಡಿದ್ರು ಸಾರ್? ಪಾಪ ಅವುರು ಮಾಡ್ತ ಇರೊವೆಲ್ಲ ನಿಮಗಾಗಿ."

"ನಮಗಾಗಿ ಅವುರೇನೂ ಮಾಡದು ಬೇಡ, ಇನ್ನು ಮೇಲೆ ಸುಮ್ಮನಿದ್ರೆ ಸಾಕಾಗ್ಯದೆ."

"ಅವುರೆಲ್ಲಿ ಸುಮ್ಮನಿರ್ತಾರೆ ಸಾರ್? ಕಡೆವರಿಗೂ ರಾಜಕಾರಣ ಮಾಡ್ತರಂತೆ."

"ಮಾಡಕಂಡೋಗ್ಲಿ ಬಿಡಿ. ನಾನಂತು ಅವರ ಮಾತ ಕೇಳಬಾರದಿತ್ತು ಅಂತ ಈಗನ್ನುಸ್ತಾಯಿದೆ."

"ಈಗನ್ನಿಸಿ ಏನು ಪ್ರಯೋಜನ ಸಾರ್? ಎಡೂರಪ್ಪನಿಗೆ ಅಧಿಕಾರ ಕೊಡುವಾಗ ಗೌಡ್ರ ಮಾತ ಕೇಳಿಸಿಕೋಬಾರದಿತ್ತು ನೀವು."

"ನಿಜ ಕಂಡ್ರಿ. ಆಗವುರಿಗೆ ಅಧಿಕಾರ ಕೊಟ್ಟು ಇಪ್ಪತ್ತು ತಿಂಗಳಾದ ಮೇಲೆ ಅವುರು ನಾವು ಸೀಟಂಚಿಕೊಂಡು ಗೆದ್ದು ಬಂದಿದ್ರೆ, ಈಗ ಪುನಃ ನಾನೇ ಮುಖ್ಯಮಂತ್ರಿಯಾಗಬವುದಿತ್ತಲ್ರೀ."

"ನಿಜ ಸಾರ್. ಅನ್ಯಾಯವಾಗಿ ಅಧಿಕಾರ ಕಳಕಂಡ್ರಿ, ಜೊತೆಗೆ ಅವುಮಾನವೂ ಆಯ್ತು."

"ಅವುಮಾನ ಏನಾಗಿಲ್ಲ."

"ಸಾರಿ ಸಾರ್. ಮಾನ, ಅವುಮಾನ, ನಾಚಿಕೆ, ಇವೆಲ್ಲಾ ದೇವೇಗೌಡ್ರುಲ್ಲಿ ಇದ್ರೆ ನಿಮಗೂ ಇರತಿದ್ದೊ. ಇದರಲ್ಲೆಲ್ಲಾ ದೇವೇಗೌಡ್ರುದೆ ದೊಡ್ಡ ತಪ್ಪಿದೆ."

"ನಾನವುರನ್ನ ಬಿಟ್ಟು ಬಿಜೆಪಿಗಳ ಜೊತೆ ಸೇರಿ ಅಧಿಕಾರ ಹಿಡಿದಾಗ ಇವುರು ಸುಮ್ಮನಿರಬೇಕಾಗಿತ್ತು. ಒಂದೆರಡು ದಿನ ನಾಟಕ ಮಾಡಿ ಬಂದು ನಮ್ಮ ಜೊತೆ ಸೇರಿಕೊಂಡು ನಮ್ಮ ಲೈಫ್‌ನೂ ಹಾಳು ಮಾಡಿದರಲ್ರೀ."


"ಲೈಫೇನು ಹಾಳಾಗಿಲ್ಲ ತಗಳಿ ಸಾ. 20 ತಿಂಗಳು ಮುಖ್ಯಮಂತ್ರಿ ಆಗಿದ್ರಿ. ಇನ್ನ ಸಾಯವರಿಗೂ ಮಾಜಿ ಮುಖ್ಯಮಂತ್ರಿ ಅನ್ನಿಸಿಕೊಳ್ತಿರಿ. ಮುಂದೆ ಎಂದಾದ್ರು ರೆಸಾರ್ಟ್ ರಾಜಕಾರಣ ಶುರುವಾದ್ರೆ ಇನ್ನೂ ಒಂದು ಚಾನ್ಸಿದೆ."

"ರೆಸಾರ್ಟ್ ರಾಜಕಾರಣಕ್ಕೆ ದುಡ್ಡುಬೇಕು ಕಂಡ್ರಿ. ಮೊದ್ಲೆ ಈ ಸರಕಾರ ರೆಡ್ಡಿಗಳ ಕೈಗೆ ಸಿಕ್ಕಿದೆ, ಬಿಡ್ತರ ಇನ್ನವುರು?"

"ಈಗ ನಿಮ್ಮ ಪಾರ್ಟಿಗೆ ಬಂದಿರೊ 28 ಸೀಟಿನ ಜೊತೆಗೆ ಇನ್ನು 28 ಸೀಟು ಬಂದ್ರೆ, ಪುನಃ ರೆಸಾರ್ಟು ರಾಜಕಾರಣ ಶುರುಮಾಡಬವುದಲ್ಲ?"

"ಅಯ್ಯೋ, ಈ 28 ಸೀಟು ಬಂದಿರೋದು ಆ ಕಾಂಗ್ರೆಸ್‌ನೋರು ಕೋ ಆಪರೇಟ್ ಮಾಡಿದ್ರಿಂದ ಕಂಡ್ರೀ. ಅವುರು ಒಳ್ಳೆ ಕ್ಯಾಂಡೇಟ್ ಹಾಕಿದ್ರೆ ನಾವು ಕೇವಲ ಇಪ್ಪತ್ತು ಜನ ಆರಿಸಿ ಬರ್ತಿದ್ವೊ, ಅದರಲ್ಲೂ ನಮ್ಮಪ್ಪ ಎಲ್ಲಾ ಕ್ಷೇತ್ರದಲ್ಲೂ ತುಂಬಾ ಓಡಾಡಿದ್ರೆ, ಅಷ್ಟೂ ಬರ್ತಿರಲಿಲ್ಲ."

"ಥೂತ್ತೇರಿ!!!" ■





ಮೈಸೂರು: ದೇವರಾಜ ಠಾಣಾ ಪೊಲೀಸರಿಂದ ಹೋಮ!

ಮೈಸೂರು ಪೊಲೀಸರಿಗೆ ಅದ್ಯಾವ ರಾಹು ಬಡಿದುಕೊಂಡಿದೆಯೋ ಏನೋ, ಪೊಲೀಸ್ ಸ್ಟೇಷನ್ ಒಳಗಡೆಯೇ ಅಚ್ಚುಕಟ್ಟಾದ ಒಂದು ಹೋಮ-ಹವನ ನಡೆಸಿ ತಮ್ಮ ಜನ್ಮ ಪಾವನಗೊಳಿಸಿಕೊಂಡಿದ್ದಾರೆ.

ಈ ಪುಣ್ಯ ಪುರುಷಾರ್ಥದ ಕೆಲಸ ಮಾಡಿರುವುದು ದೇವರಾಜ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಎನ್.ಎಸ್. ಚಂದ್ರಶೇಖರ್!

ಇದಕ್ಕೆ ಸ್ಟೇಷನ್ನಿಗೆ ಕಾಗೆ ನುಗ್ಗಿತ್ತು ಎಂಬ ಕಾರಣ ಕೊಡಲಾಗಿದೆಯಾದರೂ ಅಸಲಿಯತ್ತೇನೆಂದರೆ ವ್ಯಾಪಾರ ಸರಿಯಾಗಿ ಕುದುರುತ್ತಿಲ್ಲ ಎಂಬುದೇ ಆಗಿದೆ.

ಮೂಲತಃ ಚನ್ನಪಟ್ಟಣದವನಾದ ಚಂದ್ರಶೇಖರ ದೇವರಾಜ ಠಾಣೆಗೆ ಬರುವ ಮೊದಲು ಕೆ.ಆರ್. ಪುರಂನಲ್ಲಿದ್ದ. ಮೈಸೂರಿನ ಪೊಲೀಸ್ ಠಾಣೆಗಳಲ್ಲೇ ಭಾರೀ ರೋಲ್‌ಕಾಲ್ ಆದಾಯವಿರುವ ದೇವರಾಜ ಠಾಣೆಗೆ ಸಖತ್ ಲಂಚ ಕೊಟ್ಟು ಇನ್ಸ್‌ಪೆಕ್ಟರ್ ಆಗಿ ವಕ್ಕರಿಸಿಕೊಂಡ ಚಂದ್ರನಿಗೆ ತಾನು ನಿರೀಕ್ಷಿಸಿದಷ್ಟು ಆಮದನಿ ಹುಟ್ಟುತ್ತಿಲ್ಲ ಅನ್ನಿಸಿತು. ಅದೇ ಸಮಯಕ್ಕೆ ಕಾಗೆಯೊಂದು ಸ್ಟೇಷನ್ ಒಳಗಡೆ ಹಾರಿ ಬಂತಂತೆ. ನಮ್ಮ ಜನ ಶನೇಶ್ವರನ ವಾಹನವಾದ ಕಾಗೆಯನ್ನು ಪೂಜಿಸುತ್ತಾರಾದರೂ ಕಾಗೆ ಹೊಕ್ಕರೆ ಮನೆ ಹಾಳೆಂಬ ಮೂಢನಂಬಿಕೆಯಂತೂ ಇದೆ. ಕೆಲವರು ಕಾಗೆ ಹೊಕ್ಕರೆ ಮನೆ ಬದಲಾಯಿಸುವುದೂ ಉಂಟು.

ಆದರೆ ಪೊಲೀಸರಿಗೆಂತಾ ಧಾಡಿ? ಅಂತ ಕಳ್ಳಕಾರರು, ಢಕಾಯಿತರು, ರೌಡಿಗಳೇ ಸ್ಟೇಷನ್‌ಗೆ ಬಂದು ಹೋಗುವಾಗ ಕೊನೆಗೆ ಪೊಲೀಸರಂಥ ಪೊಲೀಸರೇ ಠಾಣೆಯಲ್ಲಿರುವಾಗ ಈ ಯಕಶ್ಚಿತ್ ಕಾಗೆ ಏನು ಮಾಡೀತು ಅಲ್ಲವಾ?

ಆದರೆ ಗೂಬೆ ಇನ್ಸ್‌ಪೆಕ್ಟರ್ ಚಂದ್ರಶೇಖರನಿಗೆ ಈ ಕಾಗೆ ಜೊತೆಗೆ ಇನ್ನೆರಡು ನೆಪಗಳೂ ಸಿಕ್ಕಿದವು. ಅದರಲ್ಲಿ ಒಂದು ಠಾಣಾ ಸಿಬ್ಬಂದಿಯೊಬ್ಬ ಒಮ್ಮೆ ಸ್ಟೇಷನ್‌ನಲ್ಲೇ ಜಾರಿ ಬಿದ್ದನಂತೆ. ಅದಾದಮೇಲೆ ಇನ್ನೊಬ್ಬನಿಗೆ ಹಾರ್ಟ್ ಅಟ್ಯಾಕ್ ಆಯಿತು. ಇದನ್ನೆಲ್ಲಾ ನೋಡಿದ ಚಂದ್ರಶೇಖರ್ ಇದಕ್ಕೆಲ್ಲಾ ವಾಸ್ತುದೋಷ ಹಾಗೂ ಕಾಗೆ ನುಗ್ಗಿದ್ದೇ ಕಾರಣ ಎಂದು ತಾನೇ ತೀರ್ಮಾನಿಸಿಬಿಟ್ಟ. ಠಾಣೆಯಲ್ಲೇ ಹೋಮ-ಹವನ ನಡೆಸಲು ಹೊರಟ. ಅದರಂತೆ ಕಳೆದ ಮೇ 29 ರಂದು ಬೆಳ್ಳಂಬೆಳಗ್ಗೆ ದೇವರಾಜ ಠಾಣೆಯಲ್ಲಿ ಪುರೋಹಿತರು ಬಂದು ಚಕ್ಕಲಮಕ್ಕಲ ಕೂತು ಸಂಸ್ಕೃತ ಮಂತ್ರ ಒದರಿ ಭರ್ಜರಿ ಹೋಮ ನಡೆಸಿ ಕಾಸು ಕಿತ್ತುಕೊಂಡು ಹೋಗಿದ್ದಾರೆ.

ಇಲ್ಲಿ ನಮ್ಮ ಪ್ರಶ್ನೆ ಇಷ್ಟೆ : ಯಾವುದೇ ಪೊಲೀಸ್ ಸ್ಟೇಷನ್ನು ಸರ್ಕಾರದ ಭಾಗವಿದ್ದಂತೆ. ನಮ್ಮ ಸರ್ಕಾರಗಳು ಹೇಗೆ ಒಂದು ಜಾತಿ-ಧರ್ಮದ ಭಾಗವಲ್ಲವೋ ಅದೇ ರೀತಿ ಈ ಧಾರ್ಮಿಕ ಕಂದಾಚಾರಗಳ ತಾಣವೂ ಆಗಕೂಡದು. ಹೀಗಿರುವಾಗ ಇನ್ಸ್‌ಪೆಕ್ಟರ್ ಚಂದ್ರಶೇಖರನೆಂಬ ಮೂರ್ಖ ಹೀಗೆ ಹಾಡುಹಗಲೇ ಠಾಣೆಯಲ್ಲಿ ಹೋಮ ಮಾಡಿಸಿದರೂ ಹಿರಿಯ ಅಧಿಕಾರಿಗಳೇಕೆ ಪ್ರಶ್ನಿಸಿಲ್ಲ, ಕಮೀಷನರ್ ರವೀಂದ್ರನಾಥ್ ಈಗಲಾದರೂ ಈ ಬಗ್ಗೆ ವಿಚಾರಣೆ ನಡೆಸಿ ಚಂದ್ರಶೇಖರನಿಗೆ ಉಗಿಯಲಿ.

ಅಷ್ಟೇ ಅಲ್ಲ, ಇಡೀ ಮೈಸೂರಿನಲ್ಲೇ ಅತೀ ದೊಡ್ಡ ವ್ಯಾಪ್ತಿ ಜವಾಬ್ದಾರಿ ಹೊಂದಿರುವ, ದೇವರಾಜ ಪೊಲೀಸ್ ಸ್ಟೇಷನ್ ಅನ್ನು ಸರಿದಾರಿಗೆ ತರಬೇಕಿದೆ. ಈ ಠಾಣೆ ಸುತ್ತಾಮುತ್ತಾ ಒಂದು ನೂರು ಲಾಡ್ಜ್‌ಗಳಿವೆ. ಇದರಲ್ಲಿ ಅರ್ಧಕ್ಕರ್ಧ ಸೆಮಿ ಬ್ರಾಥಲ್‌ಗಳು. ಇನ್ನು ಲೆಕ್ಕವಿರದಷ್ಟು ಬಾರ್‌ಗಳು, ಬಸ್‌ಸ್ಟ್ಯಾಂಡ್, ರೈಲ್ವೇ ಸ್ಟೇಷನ್ನು, ಅರಮನೆ, ಲೇವಾದೇವಿ, ಸಿಟಿ ಮಾರ್ಕೆಟ್... ಹೀಗೆ ಮೈಸೂರಿನ ಎಲ್ಲಾ ಭಾರಿ ಭಾರಿ ವ್ಯವಹಾರಗಳೆಲ್ಲಾ ದೇವರಾಜ ಪೊಲೀಸ್ ಠಾಣೆ ವ್ಯಾಪ್ತಿಗೇ ಬರುತ್ತವೆ. ಬೇಡ ಬೇಡ ಎಂದರೂ ತಾನಾಗೇ ಬಂದು ಬೀಳುವ ಮಂತ್ಲಿ ಹಫ್ತಾನೇ ಹೆಚ್ಚುಕಡಿಮೆ ತಿಂಗಳಿಗೆ 20 ಲಕ್ಷದಷ್ಟಿದೆ. ಈ ಆಮದನಿ ನೋಡಿಯೇ ಚಂದ್ರಶೇಖರನೂ ಭಾರಿ ಮೊತ್ತದ ಲಂಚ ಕೊಟ್ಟು ದೇವರಾಜ ಠಾಣೆಗೆ ಬಂದಿದ್ದಾನೆ. ಹಾಗೆ ಬಂದವನು ಅಚ್ಚುಕಟ್ಟಾಗಿ ಹಫ್ತಾ ವಸೂಲಿ ಮಾಡಿಕೊಂಡೂ ಬರುತ್ತಿದ್ದಾನೆ. ಅದರ ನಡುವೆ ಈಗ ಹೋಮ-ಹವನಗಳ ಕುಚೇಷ್ಟೆಯೂ ಇವನಿಂದ ನಡೆದಿದೆ.

ಮೈಸೂರು ಪೊಲೀಸ್ ಉನ್ನತಾಧಿಕಾರಿಗಳಿಗೆ ಜನರ ಪ್ರಶ್ನೆ ಏನೆಂದರೆ ನಿಮ್ಮದು ಪೊಲೀಸ್ ಸ್ಟೇಷನ್ನೋ ಅಥವಾ ಹಿಂದೂ ದೇವಸ್ಥಾನನೋ? ಎಂದು.

ಇದಕ್ಕೆ ಉತ್ತರ ಕೊಡುತ್ತೀರಾ?

■ ವರದಿಗಾರ

ಯಡ್ಡಿ ಬಗಲಲ್ಲಿರುವ ಸಂತೋಷ್ ಯಾರು?

ಈತ ಮಂತ್ರಿಯುಲ್ಲ, ಶಾಸಕನೂ ಅಲ್ಲ. ಆದರೆ ಹೊಸ ಬಿಜೆಪಿ ಸರ್ಕಾರದ ಮೂಗುದಾರ ಹಿಡಿದಿರುವ ಪ್ರಮುಖರಲ್ಲೊಬ್ಬ.

ಆತನೇ ಸಂತೋಷ್!

ಹೇಳಿಕೊಳ್ಳಲಿಕ್ಕೆ ರಾಜ್ಯ ಬಿಜೆಪಿಯ ಸಂಘಟನಾ ಕಾರ್ಯದರ್ಶಿ ಎಂಬ ಹುದ್ದೆ ಸಂತೋಷ್‌ಗಿದೆಯಾದರೂ ಈತನ ಕಾರ್ಯಾಚರಣೆಗಳು ನಿಗೂಢವಾಗಿವೆ. ಇವತ್ತು ಸಂತೋಷ್ ಎಷ್ಟು ಪವರ್‌ಫುಲ್ ಆಗಿದ್ದಾನೆಂದರೆ ಯಡ್ಡಿ ಸರ್ಕಾರದಲ್ಲಿ ಯಾರ್ಯಾರು ಸಚಿವರಾಗಬೇಕೆಂಬುದರಿಂದ ಹಿಡಿದು ಯಾರಿಗೆ ಯಾವ ಖಾತೆ ಎಂದು ಚರ್ಚೆ ನಡೆದಾಗಲೂ ಅಲ್ಲಿರುತ್ತಿದ್ದ ನಾಲ್ವರು ಬಿಜೆಪಿ ಪ್ರಮುಖರ ಪೈಕಿ ಸಂತೋಷ್ ಇದ್ದೇ ಇರುತ್ತಿದ್ದ. ಯಡ್ಡಿ, ಸದಾನಂದಗೌಡ, ಅನಂತ್‌ಕುಮಾರ್ ಉಳಿದ ಮೂವರಾಗಿರುತ್ತಿದ್ದರು.

ರಾಜ್ಯ ಬಿಜೆಪಿಯೊಳಗಿನ ಯಡ್ಡಿ-ಅನಂತ್ ಬಣಗಳ [illegible] ಸಂತೋಷ್ ಮೊದಲಿನಿಂದಲೂ ಯಡ್ಡಿ [illegible] RSS [illegible]

[illegible] crisis [illegible]

[illegible] RSS [illegible]

[illegible] RSS [illegible]



ಯಡಿಯೂರಪ್ಪ ತಾನೆಷ್ಟು ಜಾಣ ಮತ್ತು ನರಿಬುದ್ಧಿಯ ಮನುಷ್ಯ ಎಂಬುದನ್ನು ತಮ್ಮ ಸಂಪುಟದ ಸದಸ್ಯರಿಗೆ ಖಾತೆಗಳನ್ನು ಹಂಚುವಲ್ಲಿ ತೋರಿಸಿಕೊಟ್ಟಿದ್ದಾರೆ. ಭಾರತೀಯ ಜನತಾ ಪಕ್ಷದಲ್ಲಿ ತನಗೆ ಎದುರಾಳಿಯಾಗಿರುವ ಅನಂತ್‌ಕುಮಾರ್‌ರವರ ಶಿಷ್ಯಂದಿರಿಗೆ ನಾಮ್‌ಕಾವಾಸ್ತೆ ಖಾತೆಗಳನ್ನೂ, ತನ್ನ ಹಿಂಬಾಲಕರಿಗೆ ಸಂಪದ್ಭರಿತವಾದ ಖಾತೆಗಳನ್ನು ಹಂಚಿ ತನ್ನ ಚಾಣಾಕ್ಷತನವನ್ನು ಮತ್ತು ಪಕ್ಷದ ಮೇಲಿರುವ ತಮ್ಮ ಹತೋಟಿಯನ್ನು ಮೆರೆದಿದ್ದಾರೆ.

ಹಾಗೆ ನೋಡಿದರೆ ಸಂಪುಟ ಸಚಿವರಿಗೆ ಯಡ್ಡಿ ಖಾತೆಗಳನ್ನು ಹಂಚಿದ್ದರೂ ಬಹುತೇಕ ಮುಖ್ಯ ಖಾತೆಗಳೂ ಪರೋಕ್ಷವಾಗಿ ಇನ್ನೂ ತಮ್ಮ ಕೈಯಲ್ಲೇ ಇರುವಂತೆ ನೋಡಿಕೊಂಡಿದ್ದಾರೆ. ಕರ್ನಾಟಕದ ಇತಿಹಾಸದಲ್ಲೇ ಯಾವೊಬ್ಬ ಮುಖ್ಯಮಂತ್ರಿಯೂ ಅಧಿಕಾರ ದಾಹದಿಂದ ತನ್ನ ಬಳಿಯೇ ಇಷ್ಟೊಂದು ಖಾತೆಗಳನ್ನು ಉಳಿಸಿಕೊಂಡ ಉದಾಹರಣೆಯೇ ಇಲ್ಲ.

ಅಧಿಕೃತವಾಗಿ ಮುಖ್ಯಮಂತ್ರಿ ಬಳಿ ಏನೆಲ್ಲಾ ಇದೆ ನೋಡಿ. ನಗರಾಭಿವೃದ್ಧಿ, ಹಣಕಾಸು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಅರಣ್ಯ, ಗಣಿ ಮತ್ತು ಭೂ ವಿಜ್ಞಾನ, ಸಾರ್ವಜನಿಕ ಉದ್ದಿಮೆ ಮತ್ತು ಗುಪ್ತದಳ. ಹೀಗೆ ಹತ್ತು ಅತೀ ಸಂಪದ್ಭರಿತ ಖಾತೆಗಳನ್ನು ಸಿಎಂ ಸಾಹೇಬರು ತಮ್ಮಲ್ಲೇ ಉಳಿಸಿಕೊಂಡಿದ್ದಾರೆ. ಅದರಲ್ಲೂ ಮುಖ್ಯವಾಗಿ ನಗರಾಭಿವೃದ್ಧಿ ಮತ್ತು ಗಣಿ ಖಾತೆಗಾಗಿ ಕೋಜಾ ಸರ್ಕಾರದ ಎರಡನೆ ಭಾಗದಲ್ಲಿ ಕುಮಾರಸ್ವಾಮಿಯವರು ಯಡ್ಡಿ ಜೊತೆ ಕುಸ್ತಿ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು. ಆ ಎರಡು ಖಾತೆಗಳನ್ನು ಜೆಡಿಎಸ್‌ಗೆ ಬಜೆಪಿ ನೀಡಲಿಲ್ಲವೆಂಬ ಕಾರಣಕ್ಕಾಗಿ ಅಂದು ಯಡ್ಡಿಯನ್ನು ಮುಖ್ಯಮಂತ್ರಿ ಕುರ್ಚಿಯಿಂದ ಕುಮಾರಸ್ವಾಮಿ ಇಳಿಸಿದ್ದರು. ಈ ಬಾರಿ ಈ ಎರಡು ಖಾತೆಗಳಿಗಾಗಿ ಗಣಿ ಧಣಿಗಳಾದ ರೆಡ್ಡಿ ಬ್ರದರ್ಸ್ ಅರ್ಜಿ ಸಲ್ಲಿಸಿದ್ದರೂ ಅದನ್ನು ತುಂಬ ಜಾಣ್ಮೆಯಿಂದ ನಿಭಾಯಿಸಿ ಯಡ್ಡಿ ತನ್ನಲ್ಲೇ ಉಳಿಸಿಕೊಂಡಿದ್ದಾರೆ.

ನಿನ್ನೆಯಷ್ಟೇ ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಕಟ್ಟಾ ಸುಬ್ರಮಣ್ಯ ನಾಯ್ಡು ಎಂಬ ತನ್ನ ಪರಮಾಪ್ತ ಗೆಳೆಯನಿಗೆ ಯಡಿಯೂರಪ್ಪನವರು ಯಾರೂ ನಿರೀಕ್ಷಿಸದಷ್ಟು ದೊಡ್ಡ ದೊಡ್ಡ ಇಲಾಖೆಗಳನ್ನು ನೀಡಿದ್ದಾರೆ. ಈಗ ಕಟ್ಟಾ ಕೈಯಲ್ಲಿ ಅಬಕಾರಿ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ, ಬೆಂಗಳೂರು ಜಲಮಂಡಳಿ ಹಾಗೂ ವಾರ್ತಾ ಮತ್ತು ಪ್ರಸಾರ ಇಲಾಖೆಯನ್ನು ನೀಡಿದ್ದಾರೆ. ಮೊನ್ನೆ ಮೊನ್ನೆ ತನಕ ಆಸ್ಪತ್ರೆಯಲ್ಲಿ ಬೆನ್ನು ನೋವಿನಿಂದ ಮಲಗಿದ್ದ ಕಟ್ಟಾಗೆ ಇಷ್ಟೊಂದು ಇಲಾಖೆಗಳನ್ನು ನಿಭಾಯಿಸುವ ಶಕ್ತಿ ಇದೆಯೇ? ಎಂದು ಯಾರಾದರೂ ಸಹಜವಾಗಿಯೇ ಪ್ರಶ್ನಿಸಬಹುದು.

ಆದರೆ ವಾಸ್ತವ ಸಂಗತಿಯೆಂದರೆ ಕಟ್ಟಾ ಸುಬ್ರಮಣ್ಯ ನಾಯ್ಡುರವರ ಆರೋಗ್ಯ ತುಂಬ ಹದಗೆಟ್ಟಿದೆ. ಮೊನ್ನೆ ಪ್ರತಿಜ್ಞೆ ಸ್ವೀಕರಿಸಿದ ಬಳಿಕ "ನಾನು ನೂರು ಮೀಟರ್ ಓಟದ ಸ್ಪರ್ಧೆಯಲ್ಲಿ ಭಾಗವಹಿಸಲು ತಯಾರಿದ್ದೇನೆ" ಎಂದು ಅವರು ಹೇಳಿದರಾದರೂ ಅದು ಅವರಿಂದ ಆಗದ ಮಾತು. ನಿಜ ಏನೆಂದರೆ ಇನ್ನು ಒಂದೆರಡು ದಿನಗಳಲ್ಲೇ ಅವರು ಹೆಚ್ಚಿನ ಚಿಕಿತ್ಸೆಗಾಗಿ ಲಂಡನ್‌ಗೆ ಹಾರಿಹೋಗುವುದು ಗ್ಯಾರಂಟಿಯಾಗಿದೆ. ಚುನಾವಣೆಯ ಮೊದಲು ಕಟ್ಟಾ ಲಂಡನ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚುನಾವಣೆಗಾಗಿ ಓಡಿಬಂದ ಕಟ್ಟಾ ಮತ್ತೆ ಕನಿಷ್ಟವೆಂದರೂ ಎರಡು ತಿಂಗಳುಗಳ ಕಾಲ ಚಿಕಿತ್ಸೆ ಪಡೆಯಲೇಬೇಕಾಗಿದೆ. ಈ ಕಾರಣಕ್ಕಾಗಿ ನಿನ್ನೆ ಅತುರಾತುರವಾಗಿ ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. ಈಗ ಆತ ಮತ್ತೆ ಲಂಡನ್‌ಗೆ ಹೋಗಲಿರುವುದರಿಂದ ಆತನಿಗೆ ನೀಡಲಾಗಿರುವ ಎಲ್ಲಾ ಖಾತೆಗಳನ್ನು ಸಿಎಂ ಸಾಹೇಬರೇ ನಿರ್ವಹಿಸುವುದು ಅನಿವಾರ್ಯವಾಗಿದೆ. ಅಲ್ಲಿಗೆ ಹಣಕಾಸು, ನಗರಾಭಿವೃದ್ಧಿ ಜೊತೆಗೆ ಅಬಕಾರಿ ಇಲಾಖೆಯೂ ಯಡ್ಡಿಯ ಕಪಿಮುಷ್ಠಿಯೊಳಗೆ ಇರುತ್ತದೆ. ಅತ್ತ ಕೊಟ್ಟಂಗೂ ಆಯಿತು, ಇತ್ತ ಇಟ್ಟುಕೊಂಡಂಗೂ ಆಯಿತು ಎಂಬುದು ಯಡ್ಡಿಯ ತರ್ಕ!

ಯಡ್ಡಿಯ ಕಿಚನ್ ಕ್ಯಾಬಿನೆಟ್ಟಿನ ಅತ್ಯಂತ ಕಿರಿಯ ಆದರೆ ಪ್ರಮುಖ ಸದಸ್ಯೆಯಾದ ಶೋಭಾ ಕರಂದ್ಲಾಜೆ ಗೌಡ ಮೊದಲ ಬಾರಿ ಶಾಸಕಿಯಾಗಿದ್ದರೂ ಆಕೆಗೆ ನಜೀರ್ ಸಾಬ್ ಮತ್ತು ಎಂ.ಪಿ. ಪ್ರಕಾಶ್‌ರಂಥ ಹಿರಿಯ ರಾಜಕಾರಣಿಯ ಸುಪರ್ದಿಯಲ್ಲಿದ್ದ ಗ್ರಾಮೀಣ ಮತ್ತು ಪಂಚಾಯತ್ ರಾಜ್ ಖಾತೆಯನ್ನು ನೀಡಿದ್ದಾರೆ ಯಡ್ಡಿ. ಇದು ಎಲ್ಲ ಹಿರಿಯ ಶಾಸಕರೂ ಬೆಚ್ಚಿಬೀಳುವಂತೆ ಮಾಡಿದೆ. ಈ ಖಾತೆಯನ್ನೂ ಪರೋಕ್ಷವಾಗಿ ಯಡ್ಡಿಯೇ ನಿರ್ವಹಿಸುತ್ತಾರೆ ಎಂಬುದು ಬಹಿರಂಗ ಸತ್ಯ.

ಇದರ ಹಿಂದೆ ಇನ್ನೊಂದು ಹುನ್ನಾರವೂ ಇದೆ. ಈ ಖಾತೆಗೆ ವಿಶ್ವ ಬ್ಯಾಂಕಿನಿಂದ ಸಾವಿರಾರು ಕೋಟಿ ರೂಪಾಯಿಗಳ ಫಂಡು ಹರಿದುಬರುತ್ತದೆ. ಹೀಗಾಗಿ ಅಲ್ಲಿ ಹೆಚ್ಚು ಮೇಯಬಹುದು. ಮಾತ್ರವಲ್ಲ ಗ್ರಾಮೀಣ ಮಟ್ಟದಲ್ಲಿ ಸ್ವಲ್ಪ ಕೆಲಸ ಮಾಡಿ ರೈತರ ಮನಸ್ಸನ್ನೂ ಗೆಲ್ಲಬಹುದು ಎಂಬ ಕಾರಣಕ್ಕಾಗಿ ಈ ಪ್ರಮುಖ ಖಾತೆಯನ್ನು ತನ್ನ ನಂಬಿಕಸ್ಥೆ ಶೋಭಾಗೆ ನೀಡಿದ್ದಾರೆ. ಈ ಖಾತೆಗಾಗಿ ಈಶ್ವರಪ್ಪ ದುಂಬಾಲು ಬಿದ್ದಿದ್ದರೂ ಕೂಡ ಇದು ಶೋಭಾ ಪಾಲಾಗಿದೆ ಎಂದರೆ ಯಡ್ಡಿಯ ಚತುರತೆ ಗೊತ್ತಾಗುತ್ತದೆ.

ತನ್ನ ಪರಮ ವೈರಿ ಅನಂತ್‌ಕುಮಾರ್‌ರ ರೈಟ್ ಮತ್ತು ಲೆಫ್ಟ್ ಹ್ಯಾಂಡ್‌ಗಳಂತಿರುವ ವಿಶ್ವೇಶ್ವರಹೆಗಡೆ ಕಾಗೇರಿ ಮತ್ತು ಅರವಿಂದ ಲಿಂಬಾವಳಿಯನ್ನು ಸಚಿವ ಸಂಪುಟಕ್ಕೇನೋ ಯಡ್ಡಿ ಸೇರಿಸಿಕೊಂಡರು. ಆದರೆ ಈಗ ಅವರಿಬ್ಬರಿಗೆ ಕೊಟ್ಟಿರುವ ಖಾತೆಗಳನ್ನು ನೋಡಿದರೆ ನಿಜಕ್ಕೂ ನಗು ಬರುತ್ತದೆ. ಇವರಿಬ್ಬರೂ ಚೆಡ್ಡಿ ಸಂಘಟನೆಯಾಗಿರುವ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ (ಎಬಿವಿಪಿ) ನಾಯಕರಾಗಿದ್ದಾಗ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಗಳಾಗಿ ಚೆಡ್ಡಿಗಳ ಸಿದ್ಧಾಂತಕ್ಕೆ ಅಣುಗುಣವಾದ ಕ್ರಾಂತಿಯಾಗಬೇಕು ಎಂದು ಭಾಷಣ ಬಿಗಿಯುತ್ತಾ ರಾಜ್ಯಾದ್ಯಂತ ಹೋರಾಟವನ್ನು ಮಾಡಿದ್ದರು. ಅದನ್ನು ಯಡ್ಡಿ ತಮ್ಮ ಮನಸ್ಸಿನಲ್ಲಿಟ್ಟುಕೊಂಡೇ ಕಾಗೇರಿಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ನೀಡಿದರೆ ಲಿಂಬಾವಳಿಗೆ ಉನ್ನತ ಶಿಕ್ಷಣ ನೀಡಿದ್ದಾರೆ.

ಇದರಲ್ಲಿ ಎರಡು ಕಲ್ಲುಗಳಲ್ಲಿ ಮೂರು ಹಕ್ಕಿಗಳನ್ನು ಬಡಿಯುವ ತಂತ್ರ ಅಡಗಿದೆ. "ಅಂದು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿ ಮಾಡಬೇಕು ಎಂದು ಹೇಳಿದ್ದಿರಲ್ಲ, ಈಗ ಮಾಡಿ ತೋರಿಸಿ" ಎಂದು ಪರೋಕ್ಷವಾಗಿ ಅನಂತ್‌ರ ಪಟ್ಟದ ಶಿಷ್ಯರಿಗೆ ಯಡಿಯೂರಪ್ಪ ಸವಾಲು ಹಾಕಿದ್ದಾರೆ. ಅಷ್ಟೇ ಅಲ್ಲ ಅನಂತ್ ಬಣದ ಇಬ್ಬರಿಗೆ ಬೇರೆ ಬೇರೆ ಖಾತೆಗಳನ್ನು ನೀಡುವ ಬದಲಾಗಿ ಶಿಕ್ಷಣಕ್ಕೆ ಸಂಬಂಧಪಟ್ಟ ಎರಡು ಖಾತೆಗಳನ್ನೇ ನೀಡಿ ಅನಂತ್ ಬೆಂಬಲಿಗರು ಕೇವಲ ಒಂದು ಇಲಾಖೆಗೆ ತಮ್ಮ ಕಾರ್ಯಾಚರಣೆಯನ್ನು ಸೀಮಿತ


> ಯಡಿಯೂರಪ್ಪ ತನ್ನ ರಾಜಕೀಯ ಅನುಭವ ಮತ್ತು ಚಾಲಾಕಿತನದಿಂದ ಅನಂತ್ ಕುಮಾರ್ ಮತ್ತು ಗಣಿ ಧಣಿಗಳ ಸವಾಲನ್ನು ಮೀರಿ ಇಡೀ ಸಂಪುಟವನ್ನ ತನ್ನ ಮೂಗಿನ ನೇರಕ್ಕೆ ರಚಿಸಿಕೊಂಡಿದ್ದಾರೆ. ಆ ಮೂಲಕ ರಾಜ್ಯ ಬಿಜೆಪಿಯನ್ನು ತನ್ನ ಕಪಿಮುಷ್ಠಿಯಲ್ಲಿ ಹಿಡಿದಿಟ್ಟುಕೊಂಡಿದ್ದಾರೆ. ಯಡ್ಡಿಯ ಈ ಅಧಿಕಾರ ದಾಹ ಮತ್ತು ಎಲ್ಲರನ್ನೂ ಸಂಶಯದಿಂದ ನೋಡುವ ಪ್ರವೃತ್ತಿ ಸದ್ಯದಲ್ಲೇ ಬಿಜೆಪಿಯಲ್ಲಿ ಅಸಮಾಧಾನದ ಅಲೆಯನ್ನು ಸೃಷ್ಟಿಸುತ್ತದೆ ಎಂಬುದರಲ್ಲಿ ಸಂಶಯವಿಲ್ಲ.


ಖಾತೆ ಕ್ಯಾತೆ!











...ಳಿಸಿಕೊಳ್ಳುವಂತೆಯೂ ಮಾಡಿದ್ದಾರೆ. ...ದರಿಂದಾಗಿ ಅತ್ತ ಪ್ರತಿಭಟಿಸುವಂತೆಯೂ ಇಲ್ಲ, ...ತ್ತ ಸಂಭ್ರಮಿಸುವಂತೆಯೂ ಇಲ್ಲ ಎಂಬಂತಾಗಿದೆ ... ಇಬ್ಬರು ಸಚಿವರ ಸ್ಥಿತಿ. ಎರಡು ಕಲ್ಲಿಗೆ ...ಗೇರಿ. ಲಿಂಬಾವಳಿ ಮತ್ತು ಅನಂತ್ ಎಂಬ ...ಮೂವರೂ ಟಿಟ್ ಆಗುವಂತೆ ...ಮಾಡಿದ್ದಾರೆ ಯಡ್ಡಿ!

ಶಿವಮೊಗ್ಗ ಜಿಲ್ಲೆಯವರೇ ಆದ ...ಯಡ್ಡಿ ತನಗೆ ಒಳ್ಳೆಯ ಖಾತೆ ...ತಬಹುದು ಎಂಬ ಕನಸ್ಸಿನಲ್ಲಿದ್ದರು ...ಶ್ವರಪ್ಪ. ತನಗೆ ಗೃಹಖಾತೆ ಅಥವಾ ...ದಾಯ, ಪಂಚಾಯತ್‌ರಾಜ್ ಅಥವಾ ...ರಾವರಿ... ಇಂತಹ ಯಾವುದಾದರೂ ...ಡ್ಡ ಖಾತೆಯನ್ನೇ ನೀಡಿ ಎಂದು ...ಶ್ವರಪ್ಪ ಯಡ್ಡಿಯ ಕಿವಿಯಲ್ಲಿ ಹಲವು ...ರಿ ತಮ್ಮ ಅಹವಾಲನ್ನು ...ಂಡಿಸಿದ್ದರು. ಆದರೆ ಯಡಿಯೂರಪ್ಪ ...ತ್ರ ಇದ್ಯಾವ ಖಾತೆಯನ್ನೂ ನೀಡದೆ ...ಂಧನ ಖಾತೆ ನೀಡಿ ಒಂದು ...ತಿಯಲ್ಲಿ ಈಶ್ವರಪ್ಪನನ್ನು 'ಬಂಧನ' ...ಮಾಡಿದ್ದಾರೆ. ಅದಕ್ಕೆ ಕೂಡ ಬಲವಾದ ...ಕಾರಣವಿದೆ.


"ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ...ಪ್ಪತ್ನಾಲ್ಕು ಗಂಟೆಗಳಲ್ಲೇ ರೈತರಿಗೆ ...ವಿದ್ಯುತ್‌ಅನ್ನು ಉಚಿತವಾಗಿ ನೀಡುತ್ತೇವೆ" ...ಎಂದು ಯಡ್ಡಿಯ ಮುಖಾರವಿಂದವಿದ್ದ ...ಜೆಪಿಯ ಪ್ರಣಾಳಿಕೆಯಲ್ಲಿ ರಾಜ್ಯದ ...ರೈತರಿಗೆ ಪ್ರಾಮಿಸ್ ಮಾಡಲಾಗಿತ್ತು. ...ಗೆ ಈಶ್ವರಪ್ಪನಿಗೆ ಇಂಧನ ಖಾತೆ ...ನೀಡುವ ಮುಖಾಂತರ ಉಚಿತ ವಿದ್ಯುತ್ ...ನೀಡುವ ಬಹಳ ದೊಡ್ಡ ...ಜವಾಬ್ದಾರಿಯನ್ನು ಆತನ ...ಹೆಗಲಿಗೇರಿಸಿದ್ದಾರೆ ಯಡ್ಡಿ. ಅನುಷ್ಠಾನಕ್ಕೆ ...ತರಲಾಗದಂತಹ ಈ ಉಚಿತ ವಿದ್ಯುತ್ ಯೋಜನೆ ...ವಿಫಲವಾದರೆ ಅದರ ನೇರ ಹೊಣೆ ಈಶ್ವರಪ್ಪನ ...ಮೇಲೆ ಹೊರಿಸಿ ಅವರನ್ನು 'ರೈತ ...ವಿರೋಧಿ'ಯನ್ನಾಗಿಸುವುದು ಯಡ್ಡಿಯ ಹುನ್ನಾರ.

ಇನ್ನೊಂದೆಡೆ ತನ್ನ ಮತ್ತೋರ್ವ ವೈರಿ ...ಜಗದೀಶ್ ಶೆಟ್ಟರ್‌ಗೆ ಸ್ಪೀಕರ್ ಹುದ್ದೆಯೆಂಬ 'ಬಡ್ತಿ' ...ನೀಡಿ ಕೈತೊಳೆದುಕೊಂಡಿದ್ದರೂ ಅದ್ಯಾಕೋ ...ಯಡ್ಡಿಗೆ ಇನ್ನೂ ಸಮಾಧಾನವಾದಂತಿಲ್ಲ. ...ಹೇಗಾದರೂ ಮಾಡಿ ಜಗದೀಶ್ ಶೆಟ್ಟರ್‌ರ ...ಹುದ್ದೆಗೆಡಿಸಬೇಕೆಂದು ಶಪಥಗೈದಿರುವಂತಿದೆ ಯಡ್ಡಿ.


ಕಾರಣಕ್ಕೇ ಖಾತೆ ಹಂಚಿಕೆ ಸಮಯದಲ್ಲಿ ...ಇನ್ನೊಂದು ಷಡ್ಯಂತ್ರ ರೂಪಿಸಿದ್ದಾರೆ. ಅದೇನೆಂದರೆ ...ಮೊದಲ ಬಾರಿಗೆ ವಿಧಾನಸಭೆಗೆ ಆಯ್ಕೆಯಾಗಿರುವ ...ಲಿಂಗಾಯತ ಸಮುದಾಯದ ನಾಯಕ ಬಸವರಾಜ ...ಬೊಮ್ಮಾಯಿ ಅವರಿಗೆ ಅತ್ಯಂತ ಪ್ರಮುಖ ...ಖಾತೆಯಾದ ಜಲಸಂಪನ್ಮೂಲ ಖಾತೆಯನ್ನು ...ನೀಡಿರುವುದು.

ಇದರಲ್ಲಿ ಹಲವಾರು ಉದ್ದೇಶಗಳಿವೆ. ...ಮುಖ್ಯವಾಗಿ ಉತ್ತರ ಕರ್ನಾಟಕದಲ್ಲಿ ಹಲವಾರು ...ನೀರಾವರಿ ಯೋಜನೆಗಳು ನೆನೆಗುದಿಗೆ ...ಬಿದ್ದಿರುವುದರಿಂದ ಅವುಗಳನ್ನು ಸರಿಪಡಿಸಿ ...ಬೊಮ್ಮಾಯಿ ಪಾಪ್ಯುಲರ್ ಆಗಲು ಅವಕಾಶ ...ಮಾಡಿಕೊಡುವುದು. ಅಂದರೆ ಬೊಮ್ಮಾಯಿ ...ಪಾಪ್ಯುಲರ್ ಆದಷ್ಟೂ ಜಗದೀಶ್ ಶೆಟ್ಟರ್ ...ಅನ್‌ಪಾಪ್ಯುಲರ್ ಎಂದು ಬಿಂಬಿಸುವುದು. ಅಷ್ಟೇ ...ಲ್ಲ, ಹುಬ್ಬಳ್ಳಿ ಧಾರವಾಡ ಪ್ರದೇಶದಲ್ಲಿ ಶೆಟ್ಟರ್‌ಗೆ ...ಪರ್ಯಾಯವಾಗಿ ತಾನೇ ಮತ್ತೋರ್ವ ಲಿಂಗಾಯತ ...ನಾಯಕನನ್ನು ಬೆಳೆಸುವುದು. ತನ್ನ ಪ್ರಬಲ ...ಎದುರಾಳಿಯೊಬ್ಬನನ್ನು ಹೀಗೆ ಪರೋಕ್ಷವಾಗಿ ...ಹಾಕಿದ್ದಾರೆ ಯಡ್ಡಿ.

ಗಣಿ ಧಣಿಗಳ ಸಮೇತ ಈಶ್ವರಪ್ಪ ಹಾಗೂ ...ನೇಕ ಹಿರಿಯ ನಾಯಕರು ಬಯಸಿದ್ದ ಗೃಹ ...ಖಾತೆಯನ್ನು ಕೂಡಾ ಯಡ್ಡಿ ತುಂಬ ...ಚಾಣಾಕ್ಷತನದಿಂದ ನಿಭಾಯಿಸಿದ್ದಾರೆ. ಈ ...ಖಾತೆಯನ್ನು ಲಿಂಗಾಯತರಿಗೆ ನೀಡಿದರೆ ...ಉಳಿದವರು ಕ್ಯಾತೆ ತೆಗೆಯುತ್ತಾರೆ. ಹಾಗೆಯೇ ...ಸಂಖ್ಯೆಯವಾಗಿ ಪ್ರಬಲವಾದ ಇನ್ನೊಂದು ...ಸಮುದಾಯವರಾದ ಒಕ್ಕಲಿಗರಿಗೆ ನೀಡಿದರೆ ಅದು ...ತನಗೇ ಕುತ್ತಾಗಬಹುದು ಎಂಬ ...ಕಾರಣದಿಂದಾಗಿ ಸಂಘಪರಿವಾರದ ಶಿಸ್ತಿನ ...ಸಿಪಾಯಿಯಾಗಿರುವ "ಮತ್ತು ಅಲ್ಪಸಂಖ್ಯಾತ









ಬ್ರಾಹ್ಮಣ ಜಾತಿಗೆ ಸೇರಿರುವ ವಿ.ಎಸ್. ಆಚಾರ್ಯರಿಗೆ ಅದನ್ನು ನೀಡಿ ಸೇಫ್ ಆಗಿದ್ದಾರೆ.

ಹಾಗೆ ನೋಡಿದರೆ ಈ ಖಾತೆಯನ್ನು ರಾಮಚಂದ್ರಗೌಡ ಅಥವಾ ಆಚಾರ್ಯರಿಗೆ ಕೊಡತಕ್ಕದ್ದು ಎಂದು ಸ್ವತಃ ರಾಷ್ಟ್ರೀಯನಾಯಕ ಅಡ್ವಾಣಿಯೇ ಸೂಚಿಸಿದ್ದರಂತೆ. ಆದರೆ ರಾಮಚಂದ್ರಗೌಡರಿಗೆ ಈ ಖಾತೆಯನ್ನು ನೀಡಿದರೆ ಅವರಿಗೆ ಮಾಜಿ ಪ್ರಧಾನಿ ಮತ್ತು ಗೌಡರಗೌಡ ದೇವೇಗೌಡ ಮತ್ತು ಕರ್ನಾಟಕ ರಕ್ಷಣಾ ವೇದಿಕೆಯ ನಾರಾಯಣ ಗೌಡ ತರಹದ ಒಕ್ಕಲಿಗರು ನೀಡಬಹುದಾದ ಕಿರಿಕ್‌ಗಳನ್ನು ಮೆಟ್ಟನಿಲ್ಲುವ ತಾಕತ್ತಿಲ್ಲ ಎಂಬ ಕಾರಣಕ್ಕೆ ಕೊನೆಗೆ ಅದು ಜನಿವಾರಿ ಆಚಾರ್ಯನ ಪಾಲಾಗಿದೆ. ಅಂದಹಾಗೆ ಆಚಾರಿಗೆ ಈ ಖಾತೆಯನ್ನು ನೀಡುವ ಮೂಲಕ ಅತ್ತ ಅಡ್ವಾಣಿಯನ್ನೂ ತೃಪ್ತಿಪಡಿಸಿದಂತಾಯಿತು, ಇತ್ತ ಕೇಶವಶಿಲ್ಪದ ಚೆಡ್ಡಿಗಳನ್ನೂ ಸಂತೋಷಗೊಳಿಸಿದಂತಾಯಿತು. ಹೇಗಿದೆ ಯಡ್ಡಿಯ ಚೆಡ್ಡಿ ಬುದ್ಧಿ?

ಇನ್ನು ಜಾತಿ ಪ್ರೇಮವನ್ನೂ ಇಲಾಖೆ ಹಂಚಿಕೆಯಲ್ಲಿ ಯಡ್ಡಿ ಪ್ರದರ್ಶಿಸಿದ್ದಾರೆ. ತಮ್ಮದೇ ಲಿಂಗಾಯತ ಜಾತಿಗೆ ಸೇರಿರುವ ಸಿ.ಎಂ. ಉದಾಸಿಗೆ ಲೋಕೋಪಯೋಗಿ, ಎಸ್.ಎ. ರವೀಂದ್ರನಾಥ್‌ಗೆ ಕೃಷಿ, ಬಸವರಾಜ ಬೊಮ್ಮಾಯಿಗೆ ಜಲಸಂಪನ್ಮೂಲ... ಇಂತಹ ಸಂಪದ್ಭರಿತ ಮತ್ತು ಹೇರಳವಾಗಿ ಹಣ ಮುಕ್ಕುವ ಅವಕಾಶಗಳಿರುವ ಮೂರು ಪ್ರಮುಖ ಇಲಾಖೆಗಳನ್ನು ತಮ್ಮ ಅನುಯಾಯಿಗಳ ಮಡಿಲಿಗೆ ಹಾಕುವ ಮೂಲಕ ಕೆಲ ಲಿಂಗಾಯತರು ತಮ್ಮದೇ ಆದ ಬಸವಣ್ಣನ ಕಲ್ಯಾಣ ರಾಜ್ಯವನ್ನು ಸೃಷ್ಟಿಸಿಕೊಳ್ಳಲು ನೆರವಾಗಿದ್ದಾರೆ ಯಡ್ಡಿ!

ಇನ್ನು ರಾಜ್ಯದ ಮಟ್ಟಿಗೆ ಬಿಜೆಪಿಯನ್ನು ಬಳ್ಳಾರಿ ಜನಾರ್ದನನ ಪಕ್ಷವಾಗಿ ಪರಿವರ್ತಿಸಿರುವ ಗಣಿ ಧಣಿಗಳಾದ ಕರುಣಾಕರ ರೆಡ್ಡಿ, ಜನಾರ್ದನ ರೆಡ್ಡಿ ಮತ್ತು ಅವರ ಗೇಟ್‌ಕೀಪರ್ ಶ್ರೀರಾಮುಲುರನ್ನು ಸಮಾಧಾನಪಡಿಸಲು ಯಡಿಯೂರಪ್ಪ ಶತಪ್ರಯತ್ನ ಪಟ್ಟಿದ್ದರಿಂದಲೇ ಖಾತೆ ಹಂಚಿಕೆ ತಡವಾಯಿತು. ಮುಖ್ಯವಾಗಿ ಅವರು ಬೇಡಿಕೆ ಸಲ್ಲಿಸಿದ್ದು ಗೃಹ, ನಗರಾಭಿವೃದ್ಧಿ ಗಣಿ ಮತ್ತು ಭೂ ವಿಜ್ಞಾನ ಖಾತೆಗಳಿಗಾಗಿ. ಚುನಾವಣೆ ಸಂದರ್ಭದಲ್ಲಿ ಈ ರೆಡ್ಡಿಗಳು ಬಿಜೆಪಿ ಅಭ್ಯರ್ಥಿಗಳಿಗೆ ಕೋಟ್ಯಂತರ ರೂಪಾಯಿಗಳ ಫಂಡ್ ನೀಡಿದ್ದರಿಂದ ಅವರನ್ನು ಸುಲಭವಾಗಿ ನಿರ್ಲಕ್ಷಿಸುವಂತಿಲ್ಲ, ಹಾಗೆಯೇ ಅವರಿಗೆಲ್ಲ ಕಾಂಜಿ ಪಿಂಜಿ ಖಾತೆಗಳನ್ನು ನೀಡಿ ಅವರ ವಿರೋಧವನ್ನೂ ಕಟ್ಟಿಕೊಳ್ಳುವಂತಿಲ್ಲ ಎಂಬಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡಿದ್ದ ಯಡ್ಡಿ ಅದನ್ನೂ ಅತೀ ಜಾಣ್ಮೆಯಿಂದ ನಿಭಾಯಿಸಿದ್ದಾರೆ.







ಕರುಣಾಕರ ರೆಡ್ಡಿಗೆ ಕಂದಾಯ, ಜನಾರ್ದನ ರೆಡ್ಡಿಗೆ ಪ್ರವಾಸೋದ್ಯಮ ಮತ್ತು ಮೂಲಸೌಕರ್ಯ ಹಾಗೂ ಅವರ ಭಂಟ ಶ್ರೀರಾಮುಲುಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆಗಳನ್ನು ನೀಡಿರುವ ಯಡ್ಡಿ ಅಲ್ಲೂ ಕೂಡ ಒಂದು ತಂತ್ರವನ್ನು ಹೆಣೆದಿದ್ದಾರೆ. ಅದೇನೆಂದರೆ ಶ್ರೀರಾಮುಲು ಎಂಬ ರೌಡಿ ಸಚಿವನಿಗೆ ನೀಡಿರುವ ಆರೋಗ್ಯ ಇಲಾಖೆಯಲ್ಲಿ ಮದನ್‌ಗೋಪಾಲ್‌ರಂಥ ಅತ್ಯಂತ ಶಿಸ್ತಿನ ಅಧಿಕಾರಿಯನ್ನು ಇರಿಸಿದ್ದಾರೆ. ಎಲ್ಲಿಯ ತನಕ ಮದನ್‌ಗೋಪಾಲ್ ಆ ಜಾಗದಲ್ಲಿರುತ್ತಾರೋ ಅಲ್ಲಿಯತನಕ ಶ್ರೀರಾಮುಲು ತನ್ನ ಬಾಲ ಬಿಚ್ಚುವಂತಿಲ್ಲ, ಹಾಗೆ ಮಾಡಿದ್ದಾರೆ ಯಡ್ಡಿ. ಇನ್ನು ರೆಡ್ಡಿ ಬ್ರದರ್ಸ್‌ಗಳಿಗೆ ನೀಡಿರುವ ಇಲಾಖೆಗಳಿಗೆ ಮದನ್‌ಗೋಪಾಲರಂಥ ಖಟ್ಟರ್ ಅಧಿಕಾರಿಗಳನ್ನು ಯಡ್ಡಿ ತಂದು ಕೂರಿಸುವುದರಲ್ಲಿ ಯಾವ ಅನುಮಾನವೂ ಇಲ್ಲ. ಈ ತಂತ್ರದ ಮೂಲಕ ರೆಡ್ಡಿ ಬ್ರದರ್ಸ್‌ಗಳ ಆರ್ಭಟವನ್ನು ಪರೋಕ್ಷವಾಗಿ ಮಟ್ಟಹಾಕಿದ್ದಾರೆ.

ಬೆಂಗಳೂರಿನ ಪರಮ ಭೂಕಳ್ಳನಾಗಿರುವ ಆರ್. ಅಶೋಕ್ ಎಂಬ ಮಂತ್ರಿಯೂ ಬೆಂಗಳೂರು ಅಭಿವೃದ್ಧಿಯಂತಹ ಇಲಾಖೆಯನ್ನು ಬಯಸಿದ್ದ. ಅದಕ್ಕೆ ಕಾರಣವೂ ಇತ್ತು. ಅಂತಹದ್ದೊಂದು ಇಲಾಖೆ ತನ್ನ ಕೈಸೇರಿದರೆ ಇಡೀ ಬೆಂಗಳೂರು ನಗರವನ್ನೇ ನುಂಗಿ ನೀರು ಕುಡಿಯುವ ದುರಾಶೆ. ಆದರೆ ಅದರಿಂದ ಅಶೋಕನಿಗೆ ಲಾಭವಾಗುತ್ತಿತ್ತೇ ಹೊರತು ಯಡ್ಡಿ ತಟ್ಟೆಗೆ ಬೆಂಗಳೂರೆಂಬ ತುಪ್ಪದ ಹನಿಯೂ ಬೀಳುತ್ತಿರಲಿಲ್ಲ. ಆದ್ದರಿಂದ ಅಶೋಕ್ ತನ್ನ ಅಪಾರ ಹಸಿವನ್ನು ನೀಗಿಸಿಕೊಂಡು ನಾಗರಿಕನಾಗಲಿ ಎಂದು ಆತನಿಗೆ ಆಹಾರ ಮತ್ತು ನಾಗರೀಕ ಪೂರೈಕೆ ಎಂಬ ಇಲಾಖೆಯನ್ನು ನೀಡಲು ಮುಂದಾಗಿದ್ದರು. (ಹಾಗೆ ಮಾಡುವ ಮೂಲಕ ಯಡ್ಡಿ ತನಗೂ ಹಾಸ್ಯ ಮನೋಭಾವವಿದೆ ಎಂದು ಸಾಬೀತುಮಾಡಲು ಹೊರಟಿದ್ದರೇನೋ ಎಂಬ ಮಾತು ಈಗ ಬಿಜೆಪಿ ವಲಯದಿಂದಲೇ ಕೇಳಿಬರುತ್ತಿದೆ!) ಆದರೆ ಇದರ ಸುಳಿವು ಸಿಕ್ಕ ಅಶೋಕ್ ಯಡ್ಡಿಯ ಮುಂದೆ ಅತ್ತೂ ಕರೆದು ಈಗ ಸಾರಿಗೆ ಇಲಾಖೆಯನ್ನು ಪಡೆದಿದ್ದಾರೆ. ಈ ಇಲಾಖೆಯಲ್ಲೇ ಹಳ್ಳಿಯ ಹೈದ ಚಲುವರಾಯಸ್ವಾಮಿ ಕೋಟ್ಯಂತರ ರೂಪಾಯಿಯನ್ನು ಗುಳುಂ ಮಾಡಿದ್ದ. ಇನ್ನು ಬೆಂಗಳೂರಿನ ಗಂಡು ಅಶೋಕ್ ನುಂಗುವಿಕೆಗೆ ಸಾರಿಗೆ ಇಲಾಖೆಯಲ್ಲಿ ಬ್ರೇಕ್ ಹಾಕುವವರ್ಯಾರು?!

ಖಾತೆ ಹಂಚಿಕೆಯಲ್ಲಿ ಸ್ವತಂತ್ರ ಅಭ್ಯರ್ಥಿಗಳು ಲೆಕ್ಕಕ್ಕೆ ಮಾತ್ರ ಉಂಟು ಆದರೆ ಆಟಕ್ಕಿಲ್ಲ ಎಂಬ ಯಡ್ಡಿ ಸಿದ್ಧಾಂತಕ್ಕೆ ಗುರಿಯಾಗಿದ್ದಾರೆ. ಅವರೆಲ್ಲರಿಗೂ ನಾಮಕಾವಸ್ಥೆ ಇಲಾಖೆಗಳನ್ನು ಹಂಚಲಾಗಿದೆ. ಬಿಜೆಪಿ ಸರ್ಕಾರ ಎಂಬ ದೋಣಿಯನ್ನು ಈಗಾಗಲೇ ಏರಿರುವ ಇವರಿಗೆ ಇವತ್ತು ಅಂಬಿಗ ಯಡ್ಡಿ ಹೇಳಿದಂತೆ ಮಾಡುತ್ತಾ ಸಿಕ್ಕಷ್ಟು ಸೀರುಂಡೆಯೆಂದು ಸುಮ್ಮನಿರುವುದು ಅನಿವಾರ್ಯವಾಗಿದೆ. ಹಾಗೆಯೇ ಮುಮ್ತಾಜ್ ಅಲಿಖಾನ್ ಎಂಬ ಸಾಬಿಗೆ ವಕ್ಫ್ ಮತ್ತು ಹಜ್ ಹಾಗೂ ಅಲ್ಪಸಂಖ್ಯಾತರ ಕ್ಷೇಮಾಭಿವೃದ್ಧಿ ಖಾತೆಯನ್ನು ನೀಡಲಾಗಿದೆ. ಆ ಖಾತೆಗಳು ಹೇಗಿದ್ದರೂ ಬಿಜೆಪಿ ನಾಯಕರಿಗೆ ಬೇಕಿರಲಿಲ್ಲವಾದ್ದರಿಂದ ಅವು ಖಾನ್‌ಗೆ ಸಿಕ್ಕಿರುವುದು ಅನ್ನ ಹಳಸಿತ್ತು, ನಾಯಿ ಹಸಿದಿತ್ತು ಎಂಬ ನಾಣ್ಣುಡಿಯಂತಿದೆ.

ಹೀಗೆ ಯಡಿಯೂರಪ್ಪ ತನ್ನ ರಾಜಕೀಯ ಅನುಭವ ಮತ್ತು ಚಾಲಾಕಿತನದಿಂದ ಅನಂತ್ ಕುಮಾರ್ ಮತ್ತು ಗಣಿ ಧಣಿಗಳ ಸವಾಲನ್ನು ಮೀರಿ ಇಡೀ ಸಂಪುಟವನ್ನು ತನ್ನ ಮೂಗಿನ ನೇರಕ್ಕೆ ರಚಿಸಿಕೊಂಡಿದ್ದಾರೆ. ಆ ಮೂಲಕ ರಾಜ್ಯ ಬಿಜೆಪಿಯನ್ನು ತನ್ನ ಕಪಿಮುಷ್ಠಿಯಲ್ಲಿ ಹಿಡಿದಿಟ್ಟುಕೊಂಡಿದ್ದಾರೆ. ಯಡ್ಡಿಯ ಈ ಅಧಿಕಾರ ದಾಹ ಮತ್ತು ಎಲ್ಲರನ್ನೂ ಸಂಶಯದಿಂದ ನೋಡುವ ಪ್ರವೃತ್ತಿ ಸದ್ಯದಲ್ಲೇ ಬಿಜೆಪಿಯಲ್ಲಿ ಅಸಮಾಧಾನದ ಅಲೆಯನ್ನು ಸೃಷ್ಟಿಸುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

■ ಸದಾಶಿವ ಶೆಣೈ

ಮನೆಹಾಳರಿಗೇ ಮಣೆ ಹಾಕಿದ ಯಡ್ಡಿ

ಸಿಎಂ ಯಡ್ಡಿ ನಾನಾ ಕುತಂತ್ರ ಮಾಡಿ ಜಗದೀಶ್ ಶೆಟ್ಟರ್, ಈಶ್ವರಪ್ಪ ತರದ ಸೀನಿಯರ್ ಲೀಡರ್‌ಗಳನ್ನು ತುಳಿದಿರುವುದು ಒಂದೆಡೆಯಾದರೆ ಅತೀ ಅಯೋಗ್ಯರಾದ ಕೆಲವರಿಗೆ ಪೊಗದಸ್ತಾದ, ಮೇಯುವ ಖಾತೆಗಳನ್ನು ಕೊಟ್ಟಿರುವುದು ಗಾಬರಿಗೊಳಿಸುವಂತಿದೆ. ಮುರುಗೇಶ ನಿರಾಣಿ, ಮಾಲೂರಿನ ಕೃಷ್ಣಯ್ಯ ಶೆಟ್ಟಿ ಹಾಗೂ ಕಟ್ಟಾ ನಾಯ್ಡುಗೆ ದಕ್ಕಿರುವ ಖಾತೆಗಳಿಗೂ ಈ ದುರಾತ್ಮರು ನಡೆಸುತ್ತಿರುವ ಬ್ಯುಸಿನೆಸ್‌ಗಳಿಗೂ ನೇರ ಸಂಬಂಧವಿರುವುದೇ ಇದಕ್ಕೆ ಕಾರಣ.

ಉದಾಹರಣೆಗೆ ಈ ಮುರುಗೇಶ ರುದ್ರಪ್ಪ ನಿರಾಣಿಗೆ ಮಧ್ಯಮ ಹಾಗೂ ಬೃಹತ್ ಕೈಗಾರಿಕಾ ಖಾತೆ ಕೊಡಲಾಗಿದೆ. ಸ್ವತಃ ತಾನೇ ಕೈಗಾರಿಕೋದ್ಯಮಿಯಾಗಿರುವ ನಿರಾಣಿ ಸಿಮೆಂಟ್ ಫ್ಯಾಕ್ಟರಿ, ಸಕ್ಕರೆ ಕಾರ್ಖಾನೆ ಹೊಂದಿದ್ದಾನೆ. ಈಗ ಖಾಸಗಿ ವಿದ್ಯುತ್ ಉತ್ಪಾದನಾ ಕ್ಷೇತ್ರಕ್ಕೂ ಕಾಲಿಡುತ್ತಿದ್ದಾನೆ. ಇವನ ಅತೀ ಕಳಪೆ ಸಿಮೆಂಟನ್ನು ತನ್ನ ಕ್ಷೇತ್ರದ ಎಲ್ಲಾ ಅಭಿವೃದ್ಧಿ ಕಾಮಗಾರಿಗಳಲ್ಲೂ ಬಳಸುವಂತೆ ಮೊದಲಿನಿಂದಲೂ ಒತ್ತಡ ತಂದು ಸಾಕಷ್ಟು ಹಣ ತಿಂದು ಹಾಕಿದ್ದ ಖದೀಮ ಇವನು. ಇಂಥವನಿಗೆ ಈಗ ಕೈಗಾರಿಕಾ ಖಾತೆ ಸಿಕ್ಕರೆ ಸುಮ್ಮನಿರುತ್ತಾನಾ?

ಇನ್ನು ಮಾಲೂರಿನ ಕೃಷ್ಣಯ್ಯ ಶೆಟ್ಟಿ ಕತೆ ಇದಕ್ಕಿಂತ ಭಿನ್ನವಾಗಿಲ್ಲ. ಇವನಿಗೆ ವಸತಿ, ಮುಜರಾಯಿ ಖಾತೆ ಸಿಕ್ಕಿದೆ. ದಿನಬೆಳಗಾದರೆ ತಿರುಪತಿಗೆ ಓಡಿಹೋಗಿ ಕಪ್ಪು ಕಾಣಿಕೆ ನೀಡಿ ತನ್ನ ಪಾಪಕಾರ್ಯಗಳಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳುವ ಶೆಟ್ಟಿ ಯಡ್ಡಿ ಸರ್ಕಾರಕ್ಕೆ ಮರ್ಯಾದೆ ತರುವ ಮನುಷ್ಯನಲ್ಲ. ಇವನು ಹಾಗೂ ತಮ್ಮ ಬಲರಾಂ ಶೆಟ್ಟಿ ಸೇರಿಕೊಂಡು 'ಬಾಲಾಜಿ ಕೃಪ' ಹೆಸರಿನ ಬೇನಾಮಿ ಲೇಔಟ್‌ಗಳನ್ನು ಅಕ್ರಮವಾಗಿ ರಚಿಸಿ ಸಾವಿರಾರು ಜನರಿಗೆ ವಂಚಿಸಿದ್ದಾರೆ.



ಬೆಂಗಳೂರಿನ ಗಾಂಧಿನಗರದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್ ಬ್ರಾಂಚಿನ ಮ್ಯಾನೇಜರ್ ಆಗಿದ್ದ ರೆಡ್ಡಿ ಎಂಬುವನೂ ಈ ಅಕ್ರಮ ದಂಧೆಯಲ್ಲಿ ಪಾಲುದಾರನಾಗಿದ್ದಾನೆ. ಈ ಕೃಷ್ಣಯ್ಯ ಶೆಟ್ಟಿ ದೇವನಹಳ್ಳಿ ಬಳಿ ಹತ್ತಾರು ಎಕರೆ ಸರ್ಕಾರಿ ಗೋಮಾಳದ ಜಮೀನಿಗೆ ಬೇಲಿ ಸುತ್ತಿ ಸೈಟು ಮಾಡಿ ಮಾರಿಕೊಂಡಿದ್ದಾನೆ. ಇವತ್ತಲ್ಲಾ ನಾಳೆ ಶೆಟ್ಟಿ ಜೈಲಿಗೆ ಹೋಗುವ ಸನ್ನಿವೇಶ ಬರಬಹುದು. ಒಟ್ಟಾರೆಯಾಗಿ ಸೈಟು, ಮನೆ ವ್ಯವಹಾರದಲ್ಲೇ ನೂರಾರು ಕೋಟಿ ಚೀಟಿಂಗ್ ನಡೆಸಿ ಕಾನೂನಿನ ಚೌಕಟ್ಟಿನೊಳಗೇ ಸಿಕ್ಕಿಬಿದ್ದಿರುವ ಶೆಟ್ಟಿಗೆ ಹೋಗಿ ಹೋಗಿ ವಸತಿ ಖಾತೆ ಕೊಟ್ಟರೆ ಜನ ಉದ್ಧಾರವಾಗುತ್ತಾರಾ? ಶೆಟ್ಟಿ ಪಾಲಿಗಂತೂ 'ರೋಗಿ ಬಯಸಿದ್ದೂ ವೈದ್ಯ ಹೇಳಿದ್ದೂ' ಎರಡೂ ಒಂದೇ ಆದಂತಾಗಿದೆ ವಸತಿ ಖಾತೆ ಸಿಕ್ಕಿರುವುದು.



ಕಟ್ಟಾ ನಾಯ್ಡುಗೂ ಇಂಥದ್ದೇ ವಂಚಕ ಚರಿತ್ರೆಯಿದೆ. ಈಗ ಮಾಹಿತಿ ಹಾಗೂ ಜೈವಿಕ ತಂತ್ರಜ್ಞಾನ ಖಾತೆ (ITBT) ಖರೀದಿಸಿರುವ ಕಟ್ಟಾಗೆ ಇನ್‌ಫರ್ಮೇಷನ್ ಟೆಕ್ನಾಲಜಿ ಬಗ್ಗೆ ಏನೇನು ಗೊತ್ತಿಲ್ಲದಿದ್ದರೂ ಬೆಂಗಳೂರಲ್ಲಿ ಎಲ್ಲೆಲ್ಲಿ ಸರ್ಕಾರಿ ಜಾಗವಿದೆ ಎಂಬ ಇನ್‌ಫರ್ಮೇಶನ್ ಅಂತೂ ಇದ್ದೇ ಇದೆ. ಕಳೆದ ಸರ್ಕಾರವಿದ್ದಾಗಲೂ ಇದೇ ಕಟ್ಟಾ ಎಲೆಕ್ಟ್ರಾನಿಕ್ ಸಿಟಿ ಸುತ್ತಾಮುತ್ತಾ ನಕಲಿ ಐಟಿ ಕಂಪನಿಗಳ ಹೆಸರಿನಲ್ಲಿ ನೂರಾರು ಎಕರೆ ಜಮೀನು ಮಂಜೂರು ಮಾಡಿಸಿಕೊಂಡು ನುಂಗಿ ನೀರು ಕುಡಿದಿದ್ದಾನೆ. ಭೂಗಳ್ಳನಿಗೆ ಯಡ್ಡಿ ಐಟಿ-ಬಿಟಿ ಖಾತೆ ಕೊಟ್ಟಿರುವ ಅರ್ಥವೇನು ಗೊತ್ತೆ?

ಕಟ್ಟಾನ ಕಪಟ ಲ್ಯಾಂಡ್ ಡೀಲಿಂಗ್‌ಗಳಲ್ಲಿ ಸ್ವತಃ ಯಡ್ಡಿ, ಸಿ.ಟಿ. ರವಿ, ವೆಂಕಯ್ಯ ನಾಯ್ಡು, ಅಶೋಕ್, ಶೋಭಾ, ಸುರಾನಾ ಮುಂತಾದವರ ಪಾಲುದಾರಿಕೆಯಿದೆ.

ಕಟ್ಟಾ ಕೊಬ್ಬಿದಷ್ಟೂ ಈ ಕುಳಗಳಿಗೇ ಲಾಭ!

ಹಾಗಾಗಿ ಯಡ್ಡಿ ಬೇಕಂತಲೇ ಕಟ್ಟಾಗೆ ITBT ಬಗ್ಗೆ ಏನೇನೂ ಗೊತ್ತಿರದಿದ್ದರೂ ಅವನ ಚೋರವಿದ್ಯೆಗೆ ಮನಸೋತು ಮಾತ್ರ ಖಾತೆ ಹಂಚಿಕೆ ಮಾಡಿದ್ದಾರೆ.

ಮುಂದೆ ಈ ತ್ರಿಮೂರ್ತಿಗಳೇ ಯಡ್ಡಿ ಪಾಲಿಗೆ ಮುಳುಗು ನೀರು ತರುತ್ತಾರೆ... ನೋಡುತ್ತಿರಿ. ■

ರಡ್ಡಿ ಲಿಂಗಾಯತ V/s ಪಂಚಮಸಾಲಿ!

ಈ ಕದನವನ್ನು ಆರಂಭಿಸಿದ್ದು ಹುನಗುಂದದ [illegible]. ಪಂಚಮಸಾಲಿಗಳ ರಾಜ್ಯ ಮಟ್ಟದ ಸಂಘ ಹುಟ್ಟುಹಾಕಿದ




ಕಾಶಪ್ಪನವರ್

ಕಾಶಪ್ಪನವರ್ ಕಾಂಗ್ರೆಸ್ಸಿನಲ್ಲಿ ಅಲ್ಪಸಂಖ್ಯಾತರಾದ ರಡ್ಡಿ ಲಿಂಗಾಯತರ ಪ್ರಾಬಲ್ಯವಿರುವುದನ್ನು ಬಲವಾಗಿ ವಿರೋಧಿಸಿದರು. [illegible]

ಮುಂದ [illegible] 2004 [illegible] 2004ರ [illegible] ಬಿಜೆಪಿಗೆ ಲಾಭ ಆಯಿತು.

[illegible] ಕಾಂಗ್ರೆಸ್‌ಗೆ [illegible]



ಪಂಚಮಸಾಲಿಗಳ ಪಾಲಿಟಿಕ್ಸ್!

ಇಡೀ ಜಿಲ್ಲೆಯಾದ್ಯಂತ ಪಂಚಮಸಾಲಿಗಳ ಪಾಲಿಟಿಕ್ಸ್ ಚೆನ್ನಾಗಿ ಕೆಲಸ ಮಾಡುವುದರೊಂದಿಗೆ ಬಿಜೆಪಿ ಜಯ ಸಾಧಿಸಿದೆ. ಈ ಅರ್ಥದಲ್ಲಿ ಇದು ಆರ್‌ಎಸ್‌ಎಸ್ ಸಿದ್ಧಾಂತದ ಜಯವೂ ಅಲ್ಲ, ಬಿಜೆಪಿಯ ಜಯವೂ ಅಲ್ಲ. ಅದು ಕೇವಲ ಪಂಚಮಸಾಲಿಗಳ ಪಾಲಿಟಿಕ್ಸ್ ಮತ್ತು ಗಣೆದುಡ್ಡಿನ ಜಯ ಮಾತ್ರ. ●●

ಈ ಹೆಡ್ಡಿಂಗೇ ಸ್ವಲ್ಪ ವಿಚಿತ್ರವೆನಿಸಬಹುದು. ಈ ಚುನಾವಣೆಯಲ್ಲಿ ಗೆದ್ದಿದ್ದು ಬಿಜೆಪಿಯೂ ಅಲ್ಲ, ಸಂಘಪರಿವಾರವೂ ಅಲ್ಲ, ಗೆದ್ದಿದ್ದು ಯಡಿಯೂರಪ್ಪ ಮತ್ತು ಆತನನ್ನು ಗೆಲ್ಲಿಸಿದ ಲಿಂಗಾಯತರು.

ಆದರೆ, ಗದಗ ಜಿಲ್ಲೆಗೆ ಬಂದರೆ ಅದು ಕೇವಲ ಲಿಂಗಾಯತರು ಎಂದು ಹೇಳಿದರೆ ಸರಿಹೋಗುವುದಿಲ್ಲ, ಪಂಚಮಸಾಲಿ ಲಿಂಗಾಯತರು ಎಂದೇ ಹೇಳಬೇಕಾಗುತ್ತದೆ.

ನೋಡಿ, ಕಳೆದ ಬಾರಿ ವಾಜಪೇಯಿಯ ಅಲೆಯಿದ್ದಾಗಲೂ ಗದುಗಿನ ಐದು ಕ್ಷೇತ್ರಗಳ ಪೈಕಿ ಮೂರನ್ನು ಕಾಂಗ್ರೆಸ್ ಕಿತ್ತುಕೊಂಡಿತ್ತು. ಈಗ ಅದಿಲ್ಲದಿದ್ದರೂ ಬಿಜೆಪಿ ಪೂರ್ತಿ ಜಯಭೇರಿ ಭಾರಿಸಿದೆ. ಕ್ಷೇತ್ರ ಪುನರ್ವಿಂಗಡಣೆಯಿಂದಾಗಿ ಮುಂಡರಗಿ ಕ್ಷೇತ್ರ ಮಾಯವಾಗಿ ಹೋಯಿತು. ಕಳೆದ ಬಾರಿ ಇಲ್ಲಿಂದ ಗೆದ್ದಿದ್ದ ಕಾಂಗ್ರೆಸ್ಸಿನ ಎಸ್.ಎಸ್.ಪಾಟೀಲ್ ಇದರಿಂದಾಗಿ ಕ್ಷೇತ್ರವನ್ನೇ ಕಳೆದುಕೊಂಡು ಅನಾಥರಾದರು. ಪ್ರಾಯಶಃ ಇದೇ ಬಿಜೆಪಿಗೆ, ಅರ್ಥಾತ್ ಪಂಚಮಸಾಲಿಗಳಿಗೆ ವರದಾನವಾಗಿ ಹೋಯಿತು.

ಇತ್ತ ಗದುಗಿನಿಂದ ಎಚ್ಕೆ ನಿಲ್ಲುತ್ತಾರೆ ಎಂಬುದನ್ನು ಕೇಳಿದ ಎಸ್.ಎಸ್.ಪಾಟೀಲ್ ತಾನು ಬಿಜೆಪಿಯಿಂದ ಕಣಕ್ಕಿಳಿಯುತ್ತೇನೆ ಎಂದು ಧಮಕಿ ಹಾಕಿದರು. ಇನ್ನೊಂದು ಕಡೆ ರೋಣದಿಂದ ಸ್ಪರ್ಧಿಸಿದ, ಸ್ಪರ್ಧಿಸುತ್ತಲೇ ಇರುವ ಜಿ.ಎಸ್.ಪಾಟೀಲರಿಗೂ ಭಯ ಶುರುವಾಗಿತ್ತು. ಏಕೆಂದರೆ, ಕ್ಷೇತ್ರ ಪುನರ್ವಿಂಗಡಣೆಯಲ್ಲಿ ಮುಂಡರಗಿಯ 28 ಹಳ್ಳಿಗಳು ರೋಣಕ್ಕೆ ಸೇರ್ಪಡೆಗೊಂಡಿದ್ದವು.



ಶ್ರೀಶೈಲಪ್ಪ ಬದರೂರು

ಕಾಂಗ್ರೆಸ್ಸಿನಲ್ಲಿದ್ದೂ ಪರಸ್ಪರ ವೈರಿಗಳಂತಿರುವ ಎಚ್ಕೆ ಮತ್ತು ಎಸ್.ಎಸ್.ಪಾಟೀಲ್ ಕುಟುಂಬಗಳು ಈ ಮುದಿ ಟೋಪಿವಾಲ ಎಸ್.ಎಸ್.ಪಾಟೀಲನನ್ನು ಸಂತೃಪ್ತಗೊಳಿಸುವ ಸಲುವಾಗಿ ನರಗುಂದ ಕ್ಷೇತ್ರಕ್ಕೆ ಈತನನ್ನು ಕ್ಯಾಂಡಿಡೇಟ್ ಮಾಡಿಬಿಟ್ಟರು. ಈ ಎಸ್.ಎಸ್.ಪಾಟೀಲನೆಂಬ ಮುದಿಗೂಬೆಯಿಂದ ಅತ್ತ ಎಚ್ಕೆಗೂ ಲಾಭವಾಗಲಿಲ್ಲ, ಇತ್ತ ಜಿ.ಎಸ್.ಪಾಟೀಲರಿಗೂ ಲಾಭವಾಗಲಿಲ್ಲ.

ಅದಿರಲಿ, ನರಗುಂದದಲ್ಲಿ ಗೆಲ್ಲುವ ಅಭ್ಯರ್ಥಿಯೇ ಆಗಿದ್ದ ಬಿ.ಆರ್. ಯಾವಗಲ್ ಕಾಂಗ್ರೆಸ್‌ನ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿ ಎರಡನೇ ಸ್ಥಾನ ಗಳಿಸುವ ಮೂಲಕ ಬಿಜೆಪಿಯ ಸಿ.ಸಿ.ಪಾಟೀಲ್ ಗೆಲುವಿಗೆ ಅನುಕೂಲ ಮಾಡಿಕೊಟ್ಟರು. ಹೀಗಾಗಿ ಯಾವಗಲ್ ಮೂಲಕ ಕಾಂಗ್ರೆಸ್‌ಗೆ ದಕ್ಕಬೇಕಿದ್ದ ಜಯ ಬಿಜೆಪಿಯ ಪಂಚಮಸಾಲಿ ಸಿ.ಸಿ.ಪಾಟೀಲ್ ಪಾಲಾಯಿತು.

ಗದಗ ಕ್ಷೇತ್ರದ ಹಣಾಹಣಿ ಹೇಗಿತ್ತೆಂದರೆ ಮೊದಲ ಬಾರಿ ಚುನಾವಣಾ ರಾಜಕೀಯಕ್ಕಿಳಿದಿದ್ದ ಎಚ್ಕೆಗೆ ಗೆದ್ದೇ ಗೆಲ್ಲುತ್ತೇನೆಂಬ ಹುಂಬು ವಿಶ್ವಾಸವಿತ್ತು. ಅದಕ್ಕಾಗಿಯೇ ಅವರು ಹುಲಕೋಟಿಯ ಹುಲಿಯಂತೆಯೇ ವರ್ತಿಸುತ್ತಿದ್ದರು. ಈ ಹಿಂದೆ ನಾಲ್ಕು ಬಾರಿ ಗೆದ್ದಿದ್ದ ಅವರ ಸಹೋದರ ಡಿ.ಆರ್.ಪಾಟೀಲ್ ಗದಗ ನಗರದ ಲಿಂಗಾಯತ ನಾಯಕರ ವಿರೋಧವಿದ್ದರೂ ಗ್ರಾಮೀಣ ಭಾಗದ ಮತದಾರರ ಆಶೀರ್ವಾದ ಪಡೆದಿದ್ದರು.

ಈ ಸಲ ಬಿಜೆಪಿಯಿಂದ ಸ್ಪರ್ಧಿಸಿದ್ದ ಶ್ರೀಶೈಲಪ್ಪ ಬದರೂರ್ ಸ್ಥಳೀಯರಲ್ಲ, ಆತ ತನ್ನ ಸ್ವಂತ ತಾಲ್ಲೂಕು ರೋಣದ ಸ್ವಂತ ಊರು ಸೂಡಿಯ ಗ್ರಾಮ ಪಂಚಾಯತಿ ಎಲೆಕ್ಷನ್‌ಗೆ ನಿಂತರೂ ಗೆಲ್ಲುವ ಗಿರಾಕಿಯಲ್ಲ. ಹಾಗಿದ್ದರೂ ಆತ ಎಮ್ಮೆಲ್ಲೇ ಎಲೆಕ್ಷನ್‌ನಲ್ಲಿ ಎಂಟು ಸಾವಿರ ಮತಗಳಿಂದ ಗೆದ್ದು ಎಚ್ಕೆಯನ್ನು ಹೊಡೆದುರುಳಿಸಿದ್ದಾರೆ. ಅದು ಹೇಗೆ?



ಗದುಗಿನ ಪಂಚಮಸಾಲಿಗಳಿಗೆ ಎಚ್ಕೆ ಕುಟುಂಬದ ವಿರುದ್ಧ ಮೊದಲಿನಿಂದಲೂ ಸಿಟ್ಟಿತ್ತು. ಡಿ.ಆರ್.ಪಾಟೀಲ್ ಎಪಿಎಂಸಿ ಅಧ್ಯಕ್ಷರಾಗಿದ್ದಾಗ ದಲ್ಲಾಳಿ ವ್ಯಾಪಾರಸ್ಥರ ಪರವಾಗಿ ನಿಲ್ಲದೇ ರೈತರ ಪರವಾಗಿ ನಿಂತಿದ್ದು ಎಪಿಎಂಸಿ ವ್ಯಾಪಾರಿಗಳು ಅವರ ವಿರುದ್ಧ ಮುನಿಸಿಕೊಳ್ಳುವುದಕ್ಕೆ ಕಾರಣವಾಗಿತ್ತು. ಈ ವ್ಯಾಪಾರಿಗಳಲ್ಲಿ ಬಹುತೇಕರು ಪಂಚಮಸಾಲಿಗಳೇ. ಹೀಗಾಗಿ ಎಚ್ಕೆ ಕುಟುಂಬದ ವಿರೋಧಿ ಶಕ್ತಿಗಳೆಲ್ಲಾ ಈ ಬಾರಿ ಪಂಚಮಸಾಲಿ ಎಂಬ ಬ್ಯಾನರ್‌ನಡಿಯಲ್ಲಿ ಒಗ್ಗಟ್ಟಾಗಿ ತಮ್ಮ ಕ್ಯಾಂಡಿಡೇಟ್ ಎಂದೇ ಮೊದಲಿನಿಂದಲೂ ತಿಳಿಯಲಾಗಿದ್ದ ಬದರೂರ್‌ನನ್ನು


ಉಗಾರ ಷುಗರ್ ಫ್ಯಾಕ್ಟರಿ ಮತ್ತು ಬೊಬ್ಬೆ ಹೊಡೆಯುತ್ತಿರುವ ರೈತರು



ಯಡ್ಡಿಯ ಅದೃಷ್ಟವೋ? ದುರಾದೃಷ್ಟವೋ? ಈತ ಮುಖ್ಯಮಂತ್ರಿಯ ಕುರ್ಚಿಯ ಮೇಲೆ ಆಸೀನನಾಗುತ್ತಿರುವಂತೆ ಕರ್ನಾಟಕದ ರೈತ ಒಂದೇ ಸಮ ಬೊಬ್ಬೆ ಹೊಡೆಯುತ್ತಿದ್ದಾನೆ. ಮಳೆಯಾಗಿ ಸಕಾಲಕ್ಕೆ ಗೊಬ್ಬರ ಸಿಗದೆ ಹೋಗಿರುವುದರಿಂದ ಆತ ಬೀದಿಗೆ ಇಳಿದು ಪ್ರತಿಭಟಿಸುತ್ತಿದ್ದಾನೆ. ಆದರೆ ಪ್ರತಿ ಸಲದಂತೆ ಆತ ತಾನು ಮಾಡಿದ ಸಾಲಕ್ಕೆ ಶೂಲವನ್ನೇರುವ ಬದಲು ಈಗ ತನ್ನ ಸರಕಾರದ ಮುಖ್ಯಮಂತ್ರಿಗೆ ವಿಷದ ಬಾಟಲಿ ಕಳಿಸುವಷ್ಟು ಪ್ರಜ್ಞಾವಂತಿಕೆ ಮೆರೆಯುತ್ತಿದ್ದಾನೆ.

ಜಾಗೃತ ರೈತರದು ಈ ಪರಿಯ ಪ್ರತಿಭಟನೆಯಾದರೆ ಜಾಗೃತಿ ಎಂಬುದೆ ಗೊತ್ತಿಲ್ಲದ ಹೈದ್ರಾಬಾದ ಕರ್ನಾಟಕದ ರೈತರ ಗೋಳು ಯಾರೂ ಕೇಳುವವರಿಲ್ಲದೆ ಇಲ್ಲಿನ ರೈತ ತಾನು ನೇಣು ಹಾಕಿಕೊಳ್ಳುವ ದಿನವನ್ನು ಎಣಿಸುತ್ತ ಕಾಲ ಕಳೆಯುತ್ತಿದ್ದಾನೆ. ಇತ್ತೀಚಿನ ತನಕ ಚುನಾವಣೆಯ ಜ್ವರದಲ್ಲಿ ಮುಳುಗಿಹೋಗಿದ್ದ ಜನಪ್ರತಿನಿಧಿಗಳಲ್ಲಿ ಕೆಲವರು ಗೆದ್ದು ಬೆಂಗಳೂರು ಸೇರಿದ್ದರೆ, ಕೆಲವರು ಆಗಲೇ ಎಲ್ಲೋ ಮಟಾಮಾಯವಾಗಿ ಬಿಟ್ಟಿದ್ದಾರೆ.

ರೈತರ ನೆರವಿಗೆ ಧಾವಿಸಿ ಬರಬೇಕಾಗಿದ್ದ ಸರಕಾರದ ಅಧಿಕಾರಿಗಳು ಹೊಸ ಸರಕಾರದ ಧ್ಯೇಯೋದ್ದೇಶಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತ ತಮ್ಮ ಕಮಾಯಿಯ ಲೆಕ್ಕ ಹಾಕುತ್ತಿದ್ದಾರೆ. ಇಂಥ ಸಂದಿಗ್ಧ ಸಂದರ್ಭದಲ್ಲಿ ಕೆಲ ಬಂಡವಾಳಶಾಹಿಗಳು ರೈತರ ಮೇಲೆ ಯಾವ ಕರುಣೆಯೂ ಇಲ್ಲದೆ ಗದಾಪ್ರಹಾರ ಮಾಡಲು ಶುರುಹಚ್ಚಿಕೊಂಡಿದ್ದಾರೆ.




ರವಿ ಮಂಟೂರ್

ಕಲಬುರ್ಗಿ, ಜಿಲ್ಲೆಯ ಜೇವರ್ಗಿ ತಾಲೂಕಿನ ನಾಗರಹಳ್ಳಿ ಎಂಬ ಸಣ್ಣ ಹಳ್ಳಿಯಲ್ಲಿ (ಶಹಾಪುರ - ಸಿಂಧಗಿ ಎಂಬ ಮುಖ್ಯ ರಸ್ತೆಯಲ್ಲಿ) ಇತ್ತೀಚೆಗೆ ಆರಂಭಿಸಿದ ಉಗಾರ ಷುಗರ ಲಿ.ವರ್ಕ್ಸ್ ಎಂಬ ಸಕ್ಕರೆ ಕಾರ್ಖಾನೆಯ ಮಂಡಳಿ ಇಲ್ಲದ ಕ್ಯಾತೆ ತೆಗೆದು ರೈತರನ್ನು ಹಣ್ಣುಗಾಯಿ ನೀರುಗಾಯಿ ಮಾಡಲು ಹೊರಟದೆ. 2006 ನೇ ಸಾಲಿನಲ್ಲಿ ಇಲ್ಲಿನ ಪ್ರತಿ ರೈತರ ಮನೆಗಳಿಗೆ ಎಡತಾಕಿ "ನೀವು ಕಬ್ಬು ಬೆಳೆಯಿರಿ. ನೀವು ಬೆಳೆದ ಕಬ್ಬೆಲ್ಲವನ್ನೂ ನಾವೇ ನಮ್ಮ ಷುಗರ್ ಫ್ಯಾಕ್ಟರಿಗೆ ತೆಗೆದುಕೊಳ್ಳುತ್ತೇವೆ" ಎಂದು ಅವರನ್ನೆಲ್ಲ ಪುಸಲಾಯಿಸಿ ರೈತರಿಗೆ ಬಾಂಡುಗಳನ್ನು ನೀಡಿದ್ದರು. ಕೆಲವು ರೈತರು ಆರ್ಥಿಕ ಕಾರಣ ಮುಂದೆ ಮಾಡಿ ಕಬ್ಬು ಬೆಳೆಯುವುದು ಸಾಧ್ಯವಾಗಲಿಕ್ಕಿಲ್ಲ ಎಂದು ಅನುಮಾನ ವ್ಯಕ್ತಪಡಿಸಿದರೆ ಅಂತಹವರಿಗೆ ಸರಕಾರಿ ಬ್ಯಾಂಕುಗಳ ಮೂಲಕ ಹಣಕಾಸಿನ ನೆರವು ಒದಗಿಸಿ ಅವರ ಹೊಲದಲ್ಲಿ ಕಬ್ಬು ಬೆಳೆಯಲು ಪ್ರೋತ್ಸಾಹಿಸಿದರು.



ವೆಂಕಟೇಶ್ ಕಟ್ಟಿ

ಅಂದು ಉಗಾರ ಷುಗರ ಕಂಪನಿಯವರು ಪುಸಲಾಯಿಸಿ ಬೆಳೆಸಿದ ಕಬ್ಬು ಜೇವರ್ಗಿ ತಾಲೂಕಿನ ರೈತರ ಹೊಲಗಳಲ್ಲಿ ಈಗ ಭರಪೂರವಾಗಿ ಬೆಳೆದುನಿಂತಿದೆ. ಈ ಕಬ್ಬು ಷುಗರ್ ಫ್ಯಾಕ್ಟರಿ ಸೇರಿದರೆ ರೈತರಿಗೆ ಒಂದಿಷ್ಟು ಹಣ ಮತ್ತು ನೆಮ್ಮದಿ ಸಿಗುತ್ತಿತ್ತು. ಆದರೆ ಫ್ಯಾಕ್ಟರಿಯ ಆಡಳಿತ ಮಂಡಳಿಯ ಬೇಜವಾಬ್ದಾರಿತನದಿಂದಾಗಿ ರೈತರು ಬೆಳೆದ ಕಬ್ಬು ಅವರ ಹೊಲಗಳಲ್ಲೇ ಮುಂಗಾರು ಮಳೆಯ ಬೀಸುಗಾಳಿಗೆ ಸಿಕ್ಕಿಹಾಕಿಕೊಂಡು ಉರುಳಿ ಬೀಳುತ್ತಿವೆ. ದಿನನಿತ್ಯ ಸದರಿ ಕಂಪನಿಯ ಕಚೇರಿಗೆ ರೈತರು ಹೋಗಿ"ನಮ್ಮ ಕಬ್ಬು ಕಟಾವು ಮಾಡಿಕೊಂಡು ಹೋಗಿ"ಎಂದು ಹೇಳಿದರೆ ಫ್ಯಾಕ್ಟರಿಯ ಸೋಂಭೇರಿ ಅಧಿಕಾರಿ ವೆಂಕಟೇಶ ಕಟ್ಟಿ ಅವರ ಅಹವಾಲನ್ನು ಕಿವಿಯ ಮೇಲಿರಲಿ ಕುಂಡೆಯ ಕೆಳಗೂ ಹಾಕಿಕೊಳ್ಳುತ್ತಿಲ್ಲ. ಯಾರು ಮೊದಲು ದುಡ್ಡು ಕೊಟ್ಟು ತನ್ನ ಕೈಬೆಚ್ಚಗೆ ಮಾಡುತ್ತಾರೋ ಅಂಥ ರೈತರ ಹೊಲಗಳಿಗೆ ಗ್ಯಾಂಗ ಮನ್‌ರನ್ನು ಕಳಿಸಿ ಅರ್ಜಂಟ್ ಕಬ್ಬು ಕಟಾವು ಮಾಡಿಸುತ್ತಾನೆ. ಯಾರು ಕೈ ಬೆಚ್ಚಗೆ ಮಾಡಲಾರರೋ ಅವರ ಮುಖವನ್ನು ಹೊರಳಿಯೂ ಕೂಡ ನೋಡಲಾರ.



ಅವಿನಾಶ್ ಶಿರಗಾಂವ್ಕರ್

ಈ ಕಂಪನಿಯ ಎಂ.ಡಿಯಾಗಿರುವ ರಾಜಬಾವು ಸಾಹೇಬ ಶಿರಗಾಂವಕರ್‌ನ ಮೂರನೆ ಷುಗರ್ ಫ್ಯಾಕ್ಟರಿ ಇದಾಗಿದೆ. ಆತನಿಗೆ ಇಂಥದ್ದರಲ್ಲಿ ಸಾಕಷ್ಟು ಅನುಭವ ಇದ್ದರೂ ಇಲ್ಲಿನ ಇನ್‌ಚಾರ್ಜ ಎಂ.ಡಿ ಅನಿವಾಶ ಶಿರಗಾಂವ್ಕರ್ ಎಂಬ ನಾಮರ್ಧನನ್ನು ಇಲ್ಲಿನ ಕೆಲವು ತಲೆಹಿಡುಕ

...ವಿರುದ್ಧದ ಅಸ್ತ್ರವನ್ನಾಗಿ ಮಾಡಿಕೊಂಡರು. ...ದೆಲ್ಲಾ ಎಳ್ಳಿಗೆ ಅರ್ಥವಾಗಲೇ ಇಲ್ಲ. ನಗರ ...ನೇತದಲ್ಲಿ ತನಗೆ ಓಟು ಸಿಗದಿದ್ದರೂ ...ಗ್ರಾಮಾಂತರದಲ್ಲಿ ಜನ ತನ್ನನ್ನು ಬೆಂಬಲಿಸಿಯೇ ...ಯುತ್ತಾರೆಂದು ನಂಬಿದ್ದ ಎಳ್ಳಿ ಚುನಾವಣೆಯ ...ನಾವಲೇ ತಾನು ಗೆದ್ದಾಗಿದೆ ಎಂಬಂತೆ ...ರ್ಶಿಸುತ್ತಿದ್ದರು. ಈ ಹುಂಬು ವಿಶ್ವಾಸದಿಂದಲೇ ...ನವು ಕ್ಷೇತ್ರದಲ್ಲಿ ಪ್ರಚಾರಕ್ಕೂ ಇಳಿಯಲಿಲ್ಲ. ...ದಲಿಗೆ ಹುಬ್ಬಳ್ಳಿ-ಧಾರವಾಡ, ಬಾಗಲಕೋಟೆ, ...ಜಾಪುರಗಳಲ್ಲಿ ತಮ್ಮ ಪಕ್ಷದಲ್ಲಿಯೇ ಇರುವ ...ನ್ನು ವಿರೋಧಿಗಳನ್ನು ಸೋಲಿಸುವುದಕ್ಕೆ ...ಡೆದಾಡಿದರು. ಆದರಲ್ಲೇನೋ ...ಯಶಸ್ವಿಯಾದರು. ಅವರೆಲ್ಲರೊಂದಿಗೆ ಸ್ವಕ್ಷೇತ್ರ ...ಮಗಿನಲ್ಲಿ ತಾವೂ ಮಣ್ಣುಮುಕ್ಕಿದರು.

...ರೋಣ ತಾಲ್ಲೂಕಿನಲ್ಲಿ ಬಿಜೆಪಿಯ ಕಳಕಪ್ಪ ...ಂಡಿ ಮತ್ತೊಮ್ಮೆ ಗೆದ್ದಿದ್ದು ಕೇವಲ ಸಾವಿರ ...ಲ್ಲರೆ ಮತಗಳಿಂದ. ಇಲ್ಲೂ ಪಂಚಮಸಾಲಿ ...ಲಿಟಿಕ್ಸೇ ಕೆಲಸ ಮಾಡಿತ್ತು. ಜೊತೆಗೆ ...ರಾಮುಲು ದುಡ್ಡು ಕೂಡ.

...ಮೀಸಲು ಕ್ಷೇತ್ರವಾದ ನರಗುಂದದಲ್ಲಿ ಎಲ್ಲ ...ರ್ಟಿಗಳ ಅಭ್ಯರ್ಥಿಗಳೂ ಸ್ಥಳೀಯ ಜನರಿಗೆ ...ಪರಿಚಿತರೆ. ಆದರೆ, ಇಲ್ಲಿ ಗಣಿದೊರೆಗಳ ...ದುಡ್ಡು ಬಿಜೆಪಿಗೆ ಪ್ಲಸ್ ಪಾಯಿಂಟ್ ಆಗಿತ್ತು.

...ಹೀಗೆ, ಇಡೀ ಜಿಲ್ಲೆಯಾದ್ಯಂತ ...ಪಂಚಮಸಾಲಿಗಳ ಪಾಲಿಟಿಕ್ಸ್ ಚೆನ್ನಾಗಿ ಕೆಲಸ ...ಮಾಡುವುದರೊಂದಿಗೆ ಬಿಜೆಪಿ ಜಯ ಸಾಧಿಸಿದೆ. ...ಅರ್ಥದಲ್ಲಿ ಇದು ಆರ್‌ಎಸ್‌ಎಸ್ ಸಿದ್ಧಾಂತದ ...ಯವೂ ಅಲ್ಲ, ಬಿಜೆಪಿಯ ಜಯವೂ ಅಲ್ಲ. ...ದು ಕೇವಲ ಪಂಚಮಸಾಲಿಗಳ ಪಾಲಿಟಿಕ್ಸ್ ...ಮತ್ತು ಗಣಿದುಡ್ಡಿನ ಜಯ ಮಾತ್ರ. ಗಣಿ ...ಧಣಿಗಳು ಗದಗ ಜಿಲ್ಲೆಯ ಗೆಲುವನ್ನು ತಮ್ಮ ...ಖಾತೆಗೆ ಸೇರಿಸಿಕೊಳ್ಳುತ್ತಿದ್ದಾರೆ.

...ಇನ್ನೊಂದು ವಿಶೇಷ ಎಂದರೆ ಜಿಲ್ಲೆಯಲ್ಲಿನ ...ಷ್ಟೂ ಸ್ಥಾನಗಳನ್ನು ಬಿಜೆಪಿಯ ಮಡಿಲಿಗೆ ...ಕುವಲ್ಲಿ ಯಶಸ್ವಿಯಾದ ಪಂಚಮಸಾಲಿಗಳಿಗೆ ...ಡ್ಡಿ ಹೇಗೆ ಗುದ್ದಿದ್ದಾನೆಂದರೆ ಈಗ ಜಿಲ್ಲೆಗೆ ...ದೂ ಮಂತ್ರಿಗಿರಿಯನ್ನು ಕೊಟ್ಟಿಲ್ಲ. ...ಟೊಂಥರ ಪಂಚಮಸಾಲಿಗಳಿಗೆ ಸಾದರು ...ದ್ದಿದಂತಾಗಿದೆ. ■

...ಧಿಕಾರಿಗಳು ದಾರಿ ತಪ್ಪಿಸುತ್ತಿದ್ದಾರೆ. ತಮ್ಮ ...ಫ್ಯಾಕ್ಟರಿ ರೈತರು ಬೆಳೆದಿರುವ ಕಬ್ಬು ...ರಿಸಲು ಅಸಮರ್ಥವಾಗಿದ್ದರೆ ತಮ್ಮವೇ ...ಗಿರುವ ಕೂಡಲ ಸಂಗಮದಲ್ಲಿರುವ ...ದಾಶಿವ ಶುಗರ್ ಫ್ಯಾಕ್ಟರಿಯಲ್ಲಾಗಲಿ, ...ಗಾರ ಎಂಬ ಹೆಸರಿನ ಬೆಳಗಾಂವ ಜಿಲ್ಲೆಯ ...ಘಣಿಯ ಕಾರ್ಖಾನೆಗಾಗಲಿ ಅವುಗಳನ್ನು ...ಸಾಗಿಸಿ ನುರಿಸಬಹುದಿತ್ತು.

ಆದರೆ ಅದನ್ನು ಮಾಡದೇ ...ಕಾರ್ಖಾನೆಯ ಬಾಯ್ಲರ್ ಕೆಟ್ಟು ಹೋಗಿದೆ. ...ನಿವಾರ್ಯವಾಗಿ ಕಬ್ಬು ನುರಿಸಲು ...ಸಾಧ್ಯವಾಗುತ್ತಿಲ್ಲ ಎಂಬ ಸಬೂಬು ಹೇಳುತ್ತಾ ...ರೈತರು ಬೆಳೆದಿರುವ ಕಬ್ಬಿಗೆ ತಾವು ...ಜವಾಬ್ದಾರರಲ್ಲ ಎಂದು ನುಣುಚಿಕೊಳ್ಳುವ ...ಮನಣಿಕೆಯಲ್ಲಿದ್ದಾರೆ. ಇದರಿಂದಾಗಿ ಸುಮಾರು ...00 ಎಕರೆಗಳಲ್ಲಿ ರೈತರು ಬೆಳೆಸಿರುವ ...ಸುಮಾರು 15,000 ಸಾವಿರ ಟನ್ ಕಬ್ಬು ...ನಾಶವಾಗುತ್ತಿದೆ. ತಾವು ಮುತುವರ್ಜಿ ವಹಿಸಿ ...ಬೆಳೆಸಿದ ಕಬ್ಬು ನೆಲಕ್ಕೆ ಬಿದ್ದ ಮೇಲೆ ರೈತರು ...ಕೋರಿಯನ್ನು ಪ್ರವೇಶಿಸಲೇಬೇಕಾದ ಸಂದರ್ಭ ...ಸೃಷ್ಟಿಯಾಗಿದೆ. ಕಬ್ಬು ಬೆಳೆದ ರೈತರ ಬದುಕು ...ನ ದಿನಕ್ಕೆ ನರಕ ಸದೃಶ್ಯವಾಗುತ್ತಿದ್ದರೆ ಬೆಂಕಿ ...ನ್ನ ಮನೆಯಲ್ಲೇ ಗಳ ಹಿರಿದರು ಎಂಬಂತೆ ...ಂಪು ಪುಢಾರಿಗಳು ಫ್ಯಾಕ್ಟರಿ ಆಡಳಿತ ...ಮಂಡಳಿಯೊಂದಿಗೆ ಕಣ್ಣಾಮುಚ್ಚಾಲೆ ...ಆಟವಾಡುತ್ತಿದ್ದಾರೆ.

ತಮ್ಮ ಮುಖ್ಯಮಂತ್ರಿಯ ಪ್ರತಿಜ್ಞಾವಿಧಿಯ ...ಸಂದರ್ಭದಲ್ಲಿ ರೈತರ ಹೆಸರಿನ ಮೇಲೆ ...ಪ್ರಮಾಣವಚನ ತೆಗೆದುಕೊಂಡ, ರೈತರ ...ಹಸಿರು ಟವಲನ್ನು ತಮ್ಮ ಹೆಗಲ ಮೇಲೆ ...ಹಾಕಿಕೊಂಡು ಸಂಭ್ರಮಿಸಿದ ...ಯಡಿಯೂರಪ್ಪನಿಗೆ ರೈತರ ಗೋಳು ...ಕೇಳಿಸುವುದೆ?

ವಿಶ್ವಾರಾಧ್ಯ ಸತ್ಯಂಪೇಟೆ ■

ವಿ.ಭಟ್ಟನ ಡಬ್ಬಲ್ ಗೇಮ್!

'ನಂ 1' ಕನ್ನಡ ದೈನಿಕ 'ವಿಜಯ ಕರ್ನಾಟಕ'ದ ಚೆಡ್ಡಿ ಸಂಪಾದಕ ವಿಶ್ವೇಶ್ವರ ಭಟ್ಟ ತಾನೆಂತಹ ಪತ್ರಕರ್ತ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದಾನೆ.

ಈ ಬಾರಿಯ ಚುನಾವಣೆಯಲ್ಲಿ ಆತನ ಚೆಡ್ಡಿ ಬ್ರೈಟಕ್ಸಿನ ವರದಿಗಾರರು ಅದೇನೇನನ್ನೋ ತಿಂದು ಕೆಲ ರಾಜಕಾರಣಿಗಳ ಪರ ಬರೆದು, ತಮಗಾಗದವರ ವಿರುದ್ಧ ಕತ್ತಿ ಮಸೆದು ಎಲ್ಲರಿಂದಲೂ ಉಗಿಸಿಕೊಂಡಿದ್ದನ್ನು ಜನ ಇನ್ನೂ ಮರೆತಿಲ್ಲ, ಆದರೂ ಈಗ ಅವರೆಲ್ಲರ ಗುರು ವಿ.ಭಟ್ಟ ತನ್ನ ಪತ್ರಿಕೋದ್ಯಮದ ಅಸಲಿ ಶೈಲಿಯನ್ನು ಮತ್ತೊಮ್ಮೆ ಮೆರೆದಿದ್ದಾನೆ.

ಈತ ಬರೆಯುವ 'ನೂರೆಂಟು ಮಾತು' ಎಂಬ ಅಂಕಣದಲ್ಲಿ (ಜೂನ್ 5ರ ಸಂಚಿಕೆ) 'ಇಷ್ಟು ತಿಂದರೂ ಧರ್ಮಸಿಂಗ್‌ಗೆ ಇನ್ನೂ ರಣ ಹಸಿವು!' ಎಂಬ ಶೀರ್ಷಿಕೆಯಡಿ ಪ್ರಸ್ತುತ ರಾಜಕೀಯ ನಾಯಕರ ಬಗ್ಗೆ ತನ್ನ ಎಂದಿನ ಜಾಳುಜಾಳು ಶೈಲಿಯಲ್ಲಿ ಬರೆದಿದ್ದಾನೆ. ಅದರಲ್ಲಿ ಮಾಜಿ ಮುಖ್ಯಮಂತ್ರಿ ಧರ್ಮ ಸಿಂಗ್ ಬಗ್ಗೆ ಪ್ರಸ್ತಾಪಿಸಿ, ಅವರು ಜೇವರ್ಗಿ ಕ್ಷೇತ್ರಕ್ಕೆ ಏನೂ ಮಾಡಿಲ್ಲ; ತಾವೊಬ್ಬರೇ ದುಡ್ಡು ತಿಂದು, ತೇಗುತ್ತಿದ್ದಾರೆ; 'ರೀ ಧರ್ಮಸಿಂಗ್ ಅವರೇ, ಮಾನಮರ್ಯಾದೆ ಇಲ್ವೇನ್ರೀ? ತಿಂದಿದ್ದು ಸಾಕು ಏಳ್ರಿ' ಎಂದು ಜನ ಅನ್ನುವವರೆಗೂ ಅವರ ಅಧಿಕಾರದ ಹಸಿವು ಇಂಗುವುದಿಲ್ಲ ಎಂದೆಲ್ಲ ಬರೆದಿದ್ದಾನೆ.

ಇರಲಿ, ಧರ್ಮಸಿಂಗ್ ಬಗ್ಗೆ ಬರೆಯುವುದಕ್ಕೆ ಆತ ಸ್ವತಂತ್ರರು.

ಆದರೆ ನಾಲ್ಕಾರು ತಿಂಗಳ ಹಿಂದೆ ಈ ವಿ.ಭಟ್ಟ ತನ್ನ ಪತ್ರಿಕೆ ಪ್ರಕಟಿಸಿದ 'ನಿಮ್ಮ ಶಾಸಕರ ಸಾಧನೆ' ಎಂಬ ವಿಶೇಷ ಪುಸ್ತಕದಲ್ಲಿ ಇದೇ ಧರ್ಮ ಸಿಂಗ್‌ರನ್ನು ಹೊಗಳಿದ್ದ! ಅವರು ತಮ್ಮ ಕ್ಷೇತ್ರದಲ್ಲಿ ಏನೆಲ್ಲಾ ಸಾಧನೆ ಮಾಡಿದ್ದಾರೆ ಎಂದು ಎರಡು ಪುಟಗಳಷ್ಟು ಜಾಗದಲ್ಲಿ ಉದ್ದುದ್ದಾ ವಿವರಿಸಿದ್ದ!!

ಏಕೆ ಗೊತ್ತಾ?

ಅಗ ಧರ್ಮ ಸಿಂಗ್‌ರಿಂದ ಈ ಪುಸ್ತಕಕ್ಕೆ ಇದೇ ಭಟ್ಟನ ಪತ್ರಿಕೆ ಒಂದು ಲಕ್ಷದಷ್ಟು ದುಡ್ಡನ್ನು ಪಡೆದಿತ್ತು!

ದುಡ್ಡು ಕೊಟ್ಟ ಯಾವುದೇ ಶಾಸಕ ತನ್ನ ಕ್ಷೇತ್ರದಲ್ಲಿ ಚೆನ್ನಾಗಿ ಕೆಲಸ ಮಾಡಿದ್ದಾನೆ, ಇಷ್ಟೆಲ್ಲಾ ಸಾಧನೆ ಮಾಡಿದ್ದಾನೆ ಎಂದು ವಿಶೇಷ ಪುಸ್ತಕದಲ್ಲಿ (ಅದು ಜಾಹೀರಾತು ಸಂಚಿಕೆಯೂ ಅಲ್ಲ) ಹೊಗಳುವ ವಿ.ಭಟ್ಟನಿಗೆ ಈಗ ಜ್ಞಾನೋದಯವಾಗಿದ್ದಾದರೂ ಹೇಗೆ ಎಂಬುದು ಏಕ ಓದುಗರಿಗಂತೂ ಅರ್ಥವೇ ಆಗುತ್ತಿಲ್ಲವಂತೆ!



ವಿ. ಭಟ್ಟ

ಇನ್ನೊಂದು ಇಂಟರೆಸ್ಟಿಂಗ್ ವಿಷಯ ಯಾವುದೆಂದರೆ ವಿ. ಭಟ್ಟ ಯಾವುದೇ ರಾಜಕೀಯ ವಿಷಯವಾಗಿ ಬರೆಯುವಾಗಲೂ ಧರ್ಮ ಸಿಂಗ್‌ರನ್ನೇ ಟಾರ್ಗೆಟ್ ಆಗಿ ಇಟ್ಟುಕೊಂಡು ಬರೀತಾನೆ. (ಲೆಕ್ಕ ಇಟ್ಟಿರುವ ಹಲವರ ಪ್ರಕಾರ ಇದು ಮೂರನೇ ಬಾರಿಯಂತೆ). ಇದಕ್ಕೆ ಕಾರಣವೂ ಇದೆ. ಅದೇನೆಂದರೆ ತಮ್ಮ ಎಲ್ಲಾ ದೌರ್ಬಲ್ಯಗಳ ನಡುವೆಯೂ ಧರ್ಮ ಸಿಂಗ್ ಸೌಮ್ಯವ್ಯಕ್ತಿ, ಜೋರಾಗಿ ಮಾತನಾಡುವವರಲ್ಲ, 'ಯಾಕ್ಲೇ ಹೀಗೆ ಬರೆದಿದ್ದೀ' ಎಂದು ದಬಾಯಿಸುವವರೂ ಅಲ್ಲ. ಇನ್ನು ಅವರಿಗೆ ಜಾತಿ ಬೆಂಬಲವೂ ಇಲ್ಲ, ಕೂಗಿ ಗಲಾಟೆ ಮಾಡಲು ಅಭಿಮಾನಿಗಳೂ ಇಲ್ಲ. ಆದ್ದರಿಂದ ಅವರ ಬಗ್ಗೆ ಏನು ಬೇಕಾದರೂ ಬರೆದು ಬಚಾವಾಗಬಹುದು ಎಂಬ ಧೈರ್ಯ ಈ ಪುಕ್ಕಲ ಭಟ್ಟನಿಗೆ!

ಭ್ರಷ್ಟ ರಾಜಕಾರಣಿಗಳ ಬಗ್ಗೆ ಬರೆಯುವುದಾದರೆ ಬೇಕಾದಷ್ಟು ಮಂದಿ ಸಿಗುತ್ತಾರೆ, ವಯಸ್ಸಾದರೂ ನಿವೃತ್ತರಾಗದ ರಾಜಕಾರಣಿಗಳ ಬಗ್ಗೆ ಬರೆಯುವುದಾದರೆ ಧರ್ಮಸಿಂಗರೇ ಏಕೆ, ದೇವೇಗೌಡರ ಬಗ್ಗೆಯೂ ಬರೆದು ದಕ್ಕಿಸಿಕೊಳ್ಳಲಿ ಎಂದು ಧರ್ಮಸಿಂಗ್‌ರ ಬೆರಳೆಣಿಕೆಯಷ್ಟು ಬೆಂಬಲಿಗರು ಭಟ್ಟರಿಗೆ ಸವಾಲು ಹಾಕುತ್ತಿದ್ದಾರಂತೆ.

ಆ ತಾಕತ್ತು ವಿ.ಭಟ್ಟನಿಗೆ ಇದೆಯೇ? ■

ದುರ್ಗ: ಬಸವರಾಜನ್ ಮುಂದಿರುವ ಸವಾಲುಗಳು



ಚಿತ್ರದುರ್ಗ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿರುವ ಎಸ್.ಕೆ. ಬಸವರಾಜನ್ ಜಿಲ್ಲೆಯ ಏಕೈಕ ಜೆಡಿಎಸ್ ಶಾಸಕರಾಗಿದ್ದಾರೆ. ಕಾಂಗ್ರೆಸ್‌ನ ಜಿ.ಎಚ್. ತಿಪ್ಪಾರೆಡ್ಡಿ, ಬಿಜೆಪಿಯ ಜಿ.ಎಸ್. ಮಂಜುನಾಥ್‌ರ ಪ್ರಬಲ ಪೈಪೋಟಿ ಹಾಗೂ ಬೃಹನ್ಮಠದ ಆಸ್ತಿಪಾಸ್ತಿ ಹೊಡೆದಿದ್ದಾರೆಂಬ ಆರೋಪಗಳ ಸುತ್ತ ನಡೆದ ವಿಷಪೂರಿತ ಪ್ರಚಾರಗಳನ್ನೆದುರಿಸಿ ಬಸವರಾಜನ್ ಶಾಸಕರಾಗಿ ಆಯ್ಕೆಯಾಗಿರುವುದು ಸಾಧಾರಣ ಸಂಗತಿಯೇನಲ್ಲ. ಬೃಹನ್ಮಠದ ಆಡಳಿತಾಧಿಕಾರಿಯಾಗಿದ್ದ ಎಸ್.ಕೆ. ಬಸವರಾಜನ್ ಕಳೆದೊಂದು ದಶಕದಿಂದ ರಾಜಕೀಯ ಪ್ರವೇಶಿಸುವ ಎಲ್ಲಾ ಪ್ರಯತ್ನಗಳು ವಿಫಲವಾಗಿದ್ದವು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಒಂದೂವರೆ ಸಾವಿರದಷ್ಟು ಮತಗಳ ಅಂತರದಿಂದ ಪರಾಭವಗೊಂಡಿದ್ದ ಬಸವರಾಜನ್ ಮತ್ತೆ ರಾಜಕೀಯವಾಗಿ ಚೇತರಿಸಿಕೊಳ್ಳುವುದು ಕಷ್ಟ ಎಂಬ ವಾತಾವರಣವಿತ್ತು. ಅದರಲ್ಲೂ ಬಸವರಾಜ್‌ರನ್ನು ಬೃಹನ್ಮಠದ ಆಡಳಿತಾಧಿಕಾರಿ ಸ್ಥಾನದಿಂದ ತೆರವುಗೊಳಿಸಿದ ನಂತರ ಇಂತಹ ಅಭಿಪ್ರಾಯಗಳಿಗೆ ಮತ್ತಷ್ಟು ರೆಕ್ಕೆಪುಕ್ಕ ಬಂದಿದ್ದವು. ಕಾಂಗ್ರೆಸ್‌ಗೆ ಸೇರ್ಪಡೆಯಾದ ಮಾಜಿ ಸಚಿವ ಏಕಾಂತಯ್ಯ ಮತ್ತು ಅವರ ಬೆಂಬಲಿಗರಂತೂ ಬಸವರಾಜನ್‌ರನ್ನು ಶತಾಯ-ಗತಾಯ ಸೋಲಿಸಲೇಬೇಕೆಂದು ಪಣತೊಟ್ಟಿದ್ದರು. ಈ ನಡುವೆ ಭೀಮಸಮುದ್ರದ ಅಡಿಕೆ ಧಣಿ ಜಿ.ಎಸ್. ಮಂಜುನಾಥ್ ಬಿಜೆಪಿಯಿಂದ ಕಣಕ್ಕಿಳಿದಾಗ ಅಂತೂ ಲಿಂಗಾಯತ ಸಮುದಾಯದ ಮತಗಳು ಹಂಚಿಹೋಗುವ ಸಾಧ್ಯತೆ ಇರುವುದರಿಂದ ಮಾಜಿ ಶಾಸಕ ತಿಪ್ಪಾರೆಡ್ಡಿಯವರ ಹಾದಿ ಸುಗಮವಾಗುತ್ತದೆ ಎಂದೇ ವಿಶ್ಲೇಷಿಸಲಾಗಿತ್ತು. ಇಂತಹ ಎಲ್ಲಾ ಆತಂಕ-ಲೆಕ್ಕಾಚಾರಗಳನ್ನು ತಲೆ ಕೆಳಗಾಗಿಸಿದ್ದು ಬಸವರಾಜನ್‌ರ ಬೆಂಬಲಕ್ಕೆ ನಿಂತ ಹಿಂದುಳಿದ ವರ್ಗಗಳ ಮುಖಂಡರು ಹಾಗೂ ಅಲ್ಪಸಂಖ್ಯಾತ ಮುಖಂಡರು. ನಗರಸಭೆಯ ಮಾಜಿ ಅಧ್ಯಕ್ಷರುಗಳಾದ ಬಿ. ಕಾಂತರಾಜ್, ಸಿ.ಟಿ. ಕೃಷ್ಣಮೂರ್ತಿ, ಎಚ್. ಮಂಜಪ್ಪ, ಎಚ್.ಸಿ. ನಿರಂಜನಮೂರ್ತಿ, ಎಚ್.ಜೆ. ಕೃಷ್ಣಮೂರ್ತಿ, ಕಾಂ. ಚಂದ್ರಪ್ಪ, ದೇವಿಕುಮಾರಿ, ಸುನಿಲ್, ನಿಶಾನಿ ಲಕ್ಷ್ಮಮ್ಮ, ಕೆ.ಟಿ. ಕೇಶವಮೂರ್ತಿ, ಹಿರಿಯ ರಾಜಕೀಯ ಮುಖಂಡರಾದ ಎಂ.ಕೆ. ತಾಜ್‌ಪೀರ್, ಖಾದರ್ ಖಾನ್, ಎಂ.ಸಿ.ಓ. ಬಾಬು, ನಸ್ರುಲ್ಲಾ ವಸ್ತ್ರೀರ್ ಸೇರಿದಂತೆ ಬಹುತೇಕರು ಚಿತ್ರದುರ್ಗ ನಗರದಲ್ಲಿ ಬಸವರಾಜನ್ ಪರವಾಗಿ ಸಮರ್ಥವಾಗಿ ಕೆಲಸ ಮಾಡಿದರು.


ಭೀಮಸಮುದ್ರದ ಅಡಿಕೆ ಧಣಿ, ವಿಧಾನ ಪರಿಷತ್ ಸದಸ್ಯ ಬಿ.ಟಿ. ಚನ್ನಬಸಪ್ಪ, ಪುಟ್ಟಣ್ಣ, ಎ.ಪಿ.ಎಂ.ಸಿ. ಅಧ್ಯಕ್ಷ ಗುರುಮೂರ್ತಿ, ಜಿಲ್ಲಾ ಪಂಚಾಯ್ತಿ ಸದಸ್ಯ ರವಿಕುಮಾರ್, ತಾಲ್ಲೂಕ್ ಪಂಚಾಯ್ತಿ ಮಾಜಿ ಅಧ್ಯಕ್ಷ ಮುರಿಗೆಪ್ಪ ಹಾಗೂ ಬಸವರಾಜ್‌ರ ಪತ್ನಿ ಸೌಭಾಗ್ಯ ಬಸರಾಜನ್ ಬಹುತೇಕ ಗ್ರಾಮೀಣ ಪ್ರದೇಶದ ಹಳ್ಳಿಗಳಲ್ಲಿ ಸುತ್ತಿ ಪ್ರಚಾರ ಮಾಡಿದ್ದು ಬಸವರಾಜನ್‌ರ ಗೆಲುವಿನ ಹಾದಿ ಸುಗಮವಾಗಿಸಿತು. ಇಂತಹ ದೊಡ್ಡ ಸಾಮೂಹಿಕ ಪ್ರಯತ್ನದಿಂದ ಶಾಸಕರಾಗಿರುವ ಬಸವರಾಜನ್ ಕ್ಷೇತ್ರದ ಅಭಿವೃದ್ಧಿಯ ಪ್ರಶ್ನೆಯನ್ನು ಹೇಗೆ ನಿರ್ವಹಿಸುತ್ತಾರೆ ಎಂಬ ಕಾತರ ಇದ್ದೇ ಇದೆ. ಬೃಹನ್ಮಠದ ಆಡಳಿತಾಧಿಕಾರಿಯಾಗಿ ನೂರಾರು ಶಿಕ್ಷಣ ಸಂಸ್ಥೆಗಳನ್ನು ಸಮರ್ಥವಾಗಿ ನಿಭಾಯಿಸಿದ ಅನುಭವವಿರುವ ಬಸವರಾಜನ್‌ಗೆ ಆಡಳಿತಾತ್ಮಕ ಅನುಭವದ ಕೊರತೆಯೇನೂ ಇಲ್ಲ. ಆದರೆ ಒಂದು ಸಮುದಾಯದ ಧಾರ್ಮಿಕ ಚೌಕಟ್ಟಿನಲ್ಲಿದ್ದ ಸಂಸ್ಥೆಗಳ ನಿರ್ವಹಣೆಗೂ, ಬೇರೆಬೇರೆ ಜಾತಿ-ಜನಾಂಗಗಳ ಹಿತಾಸಕ್ತಿಗಳ ನಡುವೆ ಸಾರ್ವಜನಿಕ ಜೀವನದಲ್ಲಿ ಜನಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸುವುದಕ್ಕೂ ವ್ಯತ್ಯಾಸವಿದೆ. ಹಾಗಾಗಿ ಬಸವರಾಜನ್ ಭವಿಷ್ಯದ ಹಾದಿ ಹೂವಿನ ಹಾಸಿಗೆಯೇನೂ ಅಲ್ಲ. ಅದು ಬರೀ ಸವಾಲುಗಳು-ಸಮಸ್ಯೆಗಳೇ ಮುಖಾಮುಖಿಯಾಗುವ ದಾರಿ. ಇಂತಹ ದಾರಿಯನ್ನು ಬಸವರಾಜನ್ ಕ್ರಮಿಸಬಲ್ಲರು, ಜನರ ಪರವಾಗಿ ಕೆಲಸ ಮಾಡಬಲ್ಲರು ಎಂದು ಅಪರಿಮಿತ ವಿಶ್ವಾಸವಿಟ್ಟು ಕ್ಷೇತ್ರದ ಜನತೆ ಗೆಲ್ಲಿಸಿದ್ದಾರೆ. ಮುಸ್ಲಿಮರಂತೂ ಬಸವರಾಜ್‌ಗೆ ಇನ್ನಿಲ್ಲದ ರೀತಿಯಲ್ಲಿ ಬೆಂಬಲಿಸಿದ್ದಾರೆ.

ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಮೋದಿ ಮಾದರಿ ಮುಂದಿಟ್ಟುಕೊಂಡು ಪೀಠಸ್ಥವಾಗಿರುವ ಈ ಸಂದರ್ಭದಲ್ಲಿ ಸಹಜವಾಗಿಯೇ ಮುಸ್ಲಿಂ ಜನಾಂಗ ಒಂದು ರೀತಿಯ ಆತಂಕದ ಸನ್ನಿವೇಶವನ್ನು ಎದುರಿಸುತ್ತಿದೆ. ತಮ್ಮ ರಾಜಕೀಯ ಗೆಲುವಿಗೆ ಮುಸ್ಲಿಮರನ್ನು ಓಲೈಕೆ ಮಾಡಿ ಮತ ಪಡೆಯುವ ಬಹುತೇಕ ರಾಜಕಾರಣಿಗಳು ಅದೇ ಮುಸ್ಲಿಂ ಸಮುದಾಯ ಕೋಮುವಾದಿಗಳಿಂದ ತೊಂದರೆ ಎದುರಿಸುವ ಸಂದರ್ಭಗಳಲ್ಲಿ ಜಾಣಮೌನ ವಹಿಸುತ್ತಾರೆ. ಈ ಸಾಲಿಗೆ ಬಸವರಾಜನ್ ಸೇರದಿರಲಿ.

ಇನ್ನು ಅಭಿವೃದ್ಧಿಯ ಪ್ರಶ್ನೆ ಬಂದಾಗ ಬಸವರಾಜನ್‌ರ ಆಲೋಚನೆಗಳೆಲ್ಲಾ ಹೆಚ್ಚಾಗಿ ನಗರ ಸೌಂದರ್ಯೀಕರಣದ ಸುತ್ತ- ಸುತ್ತುತ್ತವೆ. ನಾಗರೀಕರು ಸಹನೀಯ ಜೀವನ ನಡೆಸಲು ಮೂಲಭೂತ ಸೌಕಾರ್ಯಗಳ ಅಗತ್ಯತೆ ಆದ್ಯತೆಯ ವಿಷಯವಾದರೂ ಅತ್ತ ಅಭಿವೃದ್ಧಿ ಅಲ್ಲದ ಇತ್ತ ಗ್ರಾಮೀಣ ಪ್ರದೇಶವೂ ಅಲ್ಲದ ವಾತಾವರಣವಿರುವ ಚಿತ್ರದುರ್ಗ ನಗರ ಒಂದು ರೀತಿಯಲ್ಲಿ ಬದಲಾವಣೆಯಿಲ್ಲದೇ ನಿಸ್ತೇಜಗೊಂಡಿದೆ. ಯುವ ಜನರನ್ನು ಉತ್ಪಾದಕ ಕೆಲಸಗಳಲ್ಲಿ ತೊಡಗಿಸುವಂತಹ ಔದ್ಯೋಗಿಕ ಅವಕಾಶಗಳನ್ನು ಸೃಷ್ಟಿಸುವತ್ತ ಗಮನ ಹರಿಸಬೇಕಿದೆ.

ಬಹಳ ಮುಖ್ಯವಾಗಿ ಗ್ರಾಮೀಣ ಪ್ರದೇಶದ ರೈತಾಪಿ ಸಮುದಾಯದ ಕೃಷಿ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಅಂತರ್ಜಲ ಹೆಚ್ಚಳ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ಹಮ್ಮಿಕೊಳ್ಳಬೇಕಿದೆ. ವಿದ್ಯುತ್ ಸರಬರಾಜಿನ ಕೊರತೆ ನೀಗಿಸುವುದು, ಕೃಷಿ ಹಾಗೂ ತೋಟಗಾರಿಕೆ ಇಲಾಖೆಗಳು ಕೆಲವೇ ಶ್ರೀಮಂತ ರೈತರ ಸಬ್ಸಿಡಿ ಅನುಕೂಲಕ್ಕೆ ಮಾತ್ರ ಬಳಕೆಯಾಗುತ್ತಿರುವುದನ್ನು ತಪ್ಪಿಸಬೇಕಿದೆ.

ಸರ್ಕಾರಿ ಯೋಜನೆಗಳೆಂದರೆ ಅದು ಶಾಸಕರುಗಳ ಹಿಂಬಾಲಕರಿಗೆ ಮಾತ್ರ ಎಂಬ ಅಭಿಪ್ರಾಯವನ್ನು ಬದಲಾಯಿಸಿ, ನಿಜವಾದ ಫಲಾನುಭವಿಗಳಿಗೆ ನಿಷ್ಪಕ್ಷಪಾತವಾಗಿ ದೊರೆಯುವಂತೆ ನೋಡಿಕೊಳ್ಳಬೇಕು. ಇದನ್ನು ಬಸವರಾಜನ್ ಅರ್ಥ ಮಾಡಿಕೊಳ್ಳುವುದು ಎಷ್ಟು ಮುಖ್ಯವೋ ಅವರನ್ನು ಶಾಸಕ ಸ್ಥಾನಕ್ಕೆ ಕರಿಸಿದ ಬೆಂಬಲಿಗರು ಅರ್ಥಮಾಡಿಕೊಳ್ಳುವುದೂ ಅಷ್ಟೇ ಮುಖ್ಯ. ■



■ ಡಾ. ನಗರಗೆರೆ ರಮೇಶ್

1

ಪ್ರಕ್ಷುಬ್ಧ ಕಾಶ್ಮೀರ

ಕಾಶ್ಮೀರದಲ್ಲಿ ನಡೆಯುತ್ತಿರುವ ಪ್ರಸ್ತುತ ವಿದ್ಯಮಾನಗಳು, ಅವುಗಳ ಹಿನ್ನೆಲೆ ಮತ್ತು ಕಾರಣಗಳನ್ನು ಆಂಧ್ರದ ಖ್ಯಾತ ವಕೀಲ ಮತ್ತು ಮಾನವ ಹಕ್ಕುಗಳ ಹೋರಾಟಗಾರ ಡಾ.ಕೆ. ಬಾಲಗೋಪಾಲ್‌ರವರು 'ಕಲ್ಲೋಲ ಲೋಯ' ಎಂಬ ತೆಲುಗು ಪುಸ್ತಕದಲ್ಲಿ ಸೆರೆ ಹಿಡಿದಿದ್ದಾರೆ. ಆ ಪುಸ್ತಕವನ್ನು ಸದ್ಯದಲ್ಲೇ ಪೀಪಲ್ಸ್ ಡೆಮಾಕ್ರೆಟಿಕ್ ಫೋರಂನವರು ಕನ್ನಡದಲ್ಲಿ 'ಪ್ರಕ್ಷುಬ್ಧ ಕಾಶ್ಮೀರ' ಎಂಬ ಹೆಸರಿನಡಿ ಪ್ರಕಟಿಸಲಿದ್ದಾರೆ. ನಮ್ಮ ಓದುಗರಿಗೂ ಕಾಶ್ಮೀರದ ವಾಸ್ತವ ಸ್ಥಿತಿ ಗೊತ್ತಾಗಲೆಂದು ಆ ಪುಸ್ತಕದ ಹಲವು ಮುಖ್ಯ ವಿಷಯಗಳನ್ನು ಡಾ. ನಗರಗೆರೆ ರಮೇಶ್‌ರವರು ಸಂಕ್ಷಿಪ್ತವಾಗಿ ಅನುವಾದಿಸಿ ನೀಡಿದ್ದಾರೆ. ಅದನ್ನು ಆರು ಕಂತುಗಳಲ್ಲಿ ಪ್ರಕಟಿಸಲಿದ್ದೇವೆ.

ಕಾಶ್ಮೀರದ ಬಗ್ಗೆ ಭಾರತೀಯರಲ್ಲಿ ತಿಳವಳಿಕೆಗಿಂತಲೂ ಭಾವನಾತ್ಮಕತೆಯೇ ಹೆಚ್ಚಾಗಿ ಮನೆ ಮಾಡಿದೆ. ಕೆಲವರಿಗೆ ಅದೊಂದು ಸುಂದರ ಪ್ರದೇಶವಾಗಿ ಕಂಡರೆ ಇನ್ನು ಹಲವರಿಗೆ ಅದು ಭಾರತಮಾತೆಯ ಶಿರದಂತೆ ಭಾಸವಾಗುತ್ತದೆ. ಆದರೆ ಆ 'ಸೌಂದರ್ಯ' ಮತ್ತು 'ಮಾತೆಯ ಶಿರ'ದಲ್ಲಿ ಅದೆಷ್ಟು ಗುಂಡುಗಳು ಹಾರಿದ್ದಾವೆ, ಎಷ್ಟು ರಕ್ತ ಹರಿದಿದೆ ಎಂದಾಗಲಿ, ಅವೆಲ್ಲಕ್ಕೆ ಕಾರಣವೇನೆಂಬುದಾಗಲಿ ಬಹಳಷ್ಟು ಭಾರತೀಯರಿಗೆ ಗೊತ್ತೇ ಇಲ್ಲ.




ಹರಿಸಿಂಗ್

ಕಾಶ್ಮೀರಿಯತ್, ಮುಸ್ಲಿಂ ಮೂಲಭೂತವಾದ, ಭಾರತದ ಸೈನ್ಯ ಮತ್ತು ಪೊಲೀಸರು, ಪಾಕಿಸ್ತಾನದ ಸೈನಿಕರು ಮತ್ತು ಭಯೋತ್ಪಾದಕರು, ಮಾನವ ಹಕ್ಕುಗಳ ಉಲ್ಲಂಘನೆ, ಅಮಾಯಕರ ಬಂಧನ ಮತ್ತು ಹಿಂಸೆ, ಸ್ವಾತಂತ್ರ್ಯ ಮತ್ತು ಸ್ವಾಭಿಮಾನದ ಬದುಕಿಗಾಗಿ ಹಪಹಪಿಸುತ್ತಿರುವ ಸಾಮಾನ್ಯ ಜನತೆ- ಇವೆಲ್ಲವೂ ಪರಸ್ಪರ ಜಿದ್ದಾಜಿ ನಡೆಸುತ್ತಿರುವ ತಾಣವಾಗಿರುವ ಕಾಶ್ಮೀರ ಇಂದು ನಿಜಕ್ಕೂ ಪ್ರಕ್ಷುಬ್ಧ ಪ್ರದೇಶವಾಗಿದೆ.

ಚಾರಿತ್ರಿಕ ಹಿನ್ನೆಲೆ

ಕಾಶ್ಮೀರದ ಕಥೆ ಇಂದು ನಿನ್ನೆಯದಲ್ಲ, ಅಲ್ಲಿನ ಜನ ಕೇವಲ 1947ರ ನಂತರ ತಾವು ಬೇರೆಯವರ ಆಳ್ವಿಕೆಗೆ ಒಳಗಾಗಿದ್ದೇವೆ ಅಂದುಕೊಂಡಿಲ್ಲ, ಅವರ ಈ ಭಾವನೆ ಅಕ್ಬರ್ ಆ ಪ್ರದೇಶವನ್ನು ಆಕ್ರಮಿಸಿಕೊಂಡಾಗಿನಿಂದಲೂ ಇದೆ. ಅಲ್ಲಿನ ಪ್ರಕೃತಿಯ ರಮಣೀಯತೆಯನ್ನು ಕಂಡ ಅಕ್ಬರ್ ಅದನ್ನ ತನ್ನ ಸಾಮ್ರಾಜ್ಯದ ಭಾಗಮಾಡಿಕೊಂಡನೇ ಹೊರತು, ಆ ಜನರನ್ನು ತನ್ನವರನ್ನಾಗಿ ಮಾಡಿಕೊಳ್ಳಲು ಅವನಿಗೆ ಸಾಧ್ಯವಾಗಲಿಲ್ಲ, ಅದಕ್ಕೆ ಮುಖ್ಯ ಕಾರಣ ಕಾಶ್ಮೀರಿಗಳ ವಿಶಿಷ್ಟ ಸಂಸ್ಕೃತಿ. ಅವರು ಮುಸ್ಲಿಮರು ಎಂದು ಸಾಮಾನ್ಯವಾಗಿ ಹೇಳಲಾದರೂ, ಅವರ ಸಾಂಸ್ಕೃತಿಕ ಅನನ್ಯತೆ 'ಕಶ್ಮೀರಿಯತ್' ನಲ್ಲಿದೆ. ಇದು ಪರಂಪರಾನುಗತವಾಗಿ ಇಸ್ಲಾಂ ಎನಿಸಿಕೊಳ್ಳುವ ಧರ್ಮಕ್ಕಿಂತಲೂ ಭಿನ್ನವಾದದ್ದು. ಅಲ್ಲಿನ ಜನರ ಗುರು ಷೇಕ್ ನೂರುದ್ದೀನ್. ತಮ್ಮ ಧಾರ್ಮಿಕ ನಾಯಕರನ್ನು ಜನ ಋಷಿಗಳೆಂದು ಕರೆದರು. ಜಮ್ಮು ಕಾಶ್ಮೀರ್ ಲಿಬರೇಷನ್ ಫ್ರಂಟ್ ಕಾಶ್ಮೀರದ ಸ್ವಾತಂತ್ರ್ಯಕ್ಕಾಗಿ ಮೊದಲಿನಿಂದಲೂ ಹೋರಾಡುತ್ತಿರುವ ಸಂಘಟನೆ. ಆ ಸಂಘಟನೆ ಈ ಕಾಶ್ಮೀರಿಯತ್ ಅನ್ನು ತನ್ನ ಸಿದ್ಧಾಂತವಾಗಿ ಒಪ್ಪಿಕೊಂಡಿತ್ತು. ಅತಿಮುಖ್ಯವಾಗಿ ಕಶ್ಮೀರಿಯತ್‌ನಲ್ಲಿ ಧಾರ್ಮಿಕ ಮೂಲಭೂತವಾದಕ್ಕಾಗಲಿ, ಧರ್ಮಾಂಧತೆಗಾಗಲಿ ಸ್ಥಾನವಿಲ್ಲ.

ಷೇಕ್ ನೂರುದ್ದೀನ್‌ನನ್ನು ಅಲ್ಲಿನ ಹಿಂದೂಗಳು ಸಹ ನಂದ್ ಋಷಿ ಎಂಬ ಹೆಸರಿನಿಂದ ಪೂಜಿಸುತ್ತಾರೆ. ಅವರ ದರ್ಗಾ ಚರಾರ್-ಎ-ಷರೀಫ್‌ನಲ್ಲಿದೆ. ಇದು 1995 ಮೇ 10ರಂದು ಧ್ವಂಸವಾಯಿತು. ಸೂಫಿ ಪರಂಪರೆಯಲ್ಲಿ ನೂರುದ್ದೀನ್‌ರದು ದೊಡ್ಡ ಹೆಸರು. ಅವರು ಉಲೇಮಾಗಳನ್ನು ಮತ್ತು ಮೌಲ್ವಿಗಳನ್ನು ವಿರೋಧಿಸಿದ ರೀತಿಯಲ್ಲಿಯೇ ಶೈವ ಪರಂಪರೆಯ ಸಾಧ್ವಿ ಲಲ್ಲಾಮಾಜಿ ಬ್ರಾಹ್ಮಣ ಪುರೋಹಿತರನ್ನು ವಿಮರ್ಶಿಸುತ್ತಿದ್ದರು. ನಂದ್ ಋಷಿಯ ಸೂಫಿ ಪರಂಪರೆಯಲ್ಲಿ ಹಲವು ಮಹಿಳೆಯರು ಸಹ ಪ್ರಚಾರಕರಾಗಿದ್ದರು. ಬೇಹಾತ್ ಬೀಬೀ, ಶಂಗಾ ಬೀಬೀ, ದೇಹಾತ್ ಬೀಬೀ, ದೇತಾ ಬೀಬೀ, ಸಲ್ ಬೀಬೀ ಮುಂತಾದವರು ಈ ಇಸ್ಲಾಂ ವಿರೋಧಿ ಪರಂಪರೆಯ ಪ್ರತಿನಿಧಿಗಳಾಗಿದ್ದರು. ಇಷ್ಟಾದರೂ, ಭಾರತದ ಇತರ ಪ್ರಾಂತ್ಯಗಳಲ್ಲಿನ ಜನರಲ್ಲಿ ಜಮ್ಮುಕಾಶ್ಮೀರದ ಎಲ್ಲ ಕಡೆಯೂ ಮುಸ್ಲಿಂರೇ ಇದ್ದಾರೆಂದೂ, ಆದ್ದರಿಂದಲೇ ಅವರೆಲ್ಲ ಪಾಕಿಸ್ತಾನಕ್ಕೆ ಸೇರಬೇಕೆಂದೂ ಬಯಸುತ್ತಿದ್ದಾರೆಂಬ ಅನುಮಾನ ಇದೆ.



ಜಗಮೋಹನ್

ಕಾಶ್ಮೀರದಲ್ಲಿ ಸನಾತನವಾದಿ ಮುಸ್ಲಿಮರು ಇಲ್ಲವೆಂದಲ್ಲ, ಆದರೆ ಅಂಥವರ ಸಂಖ್ಯೆ ನಿಧಾನವಾಗಿ ವೃದ್ಧಿಯಾಗುತ್ತಿದೆ. ಭಾರತ ಸರ್ಕಾರದ ವಿರುದ್ಧ ಇರುವ ಕೋಪ ಒಂದೊಂದು ಬಾರಿ ಮುಸ್ಲಿಂ ಸನಾತನವಾದಿ ರೂಪವನ್ನು ಪಡೆಯುವುದೂ ಉಂಟು.

ಭಾರತದ ಬೇರೆಡೆಯಲ್ಲಿ ಬ್ರಿಟಿಷರ ವಿರುದ್ಧ ಹೋರಾಟ ನಡೆಯುತ್ತಿದ್ದಾಗ ಕಾಶ್ಮೀರದ ಜನ ಡೊಗ್ರಾ ರಾಜನ ವಿರುದ್ಧ ಹೋರಾಡುತ್ತಿದ್ದರು. ಡೊಗ್ರಾ ರಾಜ ವಂಶದ ಗುಲಾಬ್ ಸಿಂಗ್ ಮಹಾರಾಜ ರಂಜಿತ್ ಸಿಂಗ್ ವಿರುದ್ಧ ಗುಲಾಬ್ ಸಿಂಗ್ ಬ್ರಿಟಿಷರಿಗೆ ಸಹಾಯ ಮಾಡಿದನು. ಅದಕ್ಕೆ ಪ್ರತಿಯಾಗಿ ಅವರು ಈ ಪ್ರದೇಶವನ್ನು ತುಂಬಾ ಕಡಿಮೆ ದರದಲ್ಲಿ 1846ರಲ್ಲಿ ಗುಲಾಬ್ ಸಿಂಗ್‌ಗೆ ಬಳುವಳಿಯಾಗಿ ಕೊಟ್ಟರು. ಡೊಗ್ರಾ ರಾಜರ ಆಳ್ವಿಕೆಯಲ್ಲಿ ಕಾಶ್ಮೀರಿಗಳು ವಿಪರೀತ ಕಷ್ಟಗಳನ್ನು ಅನುಭವಿಸಿ ಕೊನೆಗೆ ಒಂದು ಹೋರಾಟವನ್ನೇ ಆರಂಭಿಸಿದರು. 1931 ಜುಲೈ 13ರಂದು ಈ ಹೋರಾಟದ ಭಾಗವಾಗಿ ರಾಜನ ಸೈನ್ಯದ ದಾಳಿಯಲ್ಲಿ 22 ಜನ ಹುತಾತ್ಮರಾದರು.

ಕಾಶ್ಮೀರದಲ್ಲಿ ಬಹುಸಂಖ್ಯಾತರು ಮುಸ್ಲಿಂರು. ಆದರೆ ಅವರ ಆಳುವ ರಾಜ ಒಬ್ಬ ಹಿಂದು. ಆತ ಮುಸ್ಲಿಮರ ವಿರುದ್ಧ ಭೇದಭಾವವೂ ಮಾಡಿದ್ದು ಸಹಜವಾಗಿಯೇ ಅಲ್ಲಿನ ಹೋರಾಟಕ್ಕೆ ಒಂದು ಧಾರ್ಮಿಕ ಹಿನ್ನೆಲೆಯನ್ನು ನೀಡಿತು. ಆದರೆ ಷೇಕ್ ಅಬ್ದುಲ್ಲಾ ಅಲ್ಲಿನ ಚಳವಳಿಯ ನಾಯಕತ್ವವನ್ನು ವಹಿಸಿಕೊಂಡ ಮೇಲೆ ಧಾರ್ಮಿಕ ನಿರಪೇಕ್ಷ ಲಕ್ಷಣವನ್ನು ಪಡಕೊಂಡ ಹೋರಾಟವು ಬಹಳಕಾಲ ಅದೇ ರೀತಿಯಲ್ಲಿಯೇ ಮುಂದುವರೆಯಿತು. ಷೇಕ್ ಅಬ್ದುಲ್ಲಾ ಸ್ಥಾಪಿಸಿದ ನ್ಯಾಷನಲ್ ಕಾನ್ಫರೆನ್ಸ್ ಜನಪ್ರಿಯವಾಯಿತು. 1947ರ ನಂತರ ದೇಶವಿಭಜನೆಯ ಕಾಲದಲ್ಲಿ ಕಾಶ್ಮೀರ ಯಾವ ದೇಶದ ಭಾಗವಾಗಬೇಕು ಎನ್ನುವ ಪ್ರಶ್ನೆಯೇ ಮುಖ್ಯವಾಯಿತು. ಆಗಿನ ಮಹಾರಾಜನಾದ ಹರಿ ಸಿಂಗ್ ತನ್ನ ಅಧಿಕಾರವನ್ನು ಯಾವ ದೇಶ ಮಾನ್ಯ ಮಾಡುತ್ತದೋ ಆ ದೇಶದ ಭಾಗವಾಗಬೇಕೆಂದು ಇಚ್ಛೆಪಟ್ಟನು. ಆದರೆ ಜನಸಾಮಾನ್ಯರ ಮತ್ತು ನ್ಯಾಷನಲ್ ಕಾನ್ಫರೆನ್ಸ್‌ನ ಯೋಚನೆ ಬೇರೆಯದೇ ಆಗಿತ್ತು. ಅವರಿಗೆ ಮುಖ್ಯವಾಗಿ ಬೇಕಾಗಿದ್ದದ್ದು ರಾಜಪಾಲನೆಯಿಂದ ಮುಕ್ತಿ. ಒಂದು ಸಮಯದಲ್ಲಿ ಹರಿ ಸಿಂಗ್ ಪಾಕಿಸ್ತಾನದ ಭಾಗವಾಗಬೇಕೆಂದು ಯೋಚನೆ ಮಾಡಿದ್ದೂ ಇದೆ. ದೇಶವಿಭಜನೆಯ ಸಂದರ್ಭದಲ್ಲಿ ಭಾರತದ ಹಲವಾರು ಕಡೆ ಮತ್ತು ಜಮ್ಮು ಪ್ರದೇಶದಲ್ಲಿಯೂ ಹಿಂದೂ ಮುಸ್ಲಿಂರ ನಡುವೆ ಕೋಮು ಘರ್ಷಣೆಗಳು ನಡೆದರೂ, ಕಣಿವೆಯ ಪ್ರದೇಶವಾದ ಕಾಶ್ಮೀರ್ ಮಾತ್ರ ಇಂಥ ಯಾವ ಸಮಸ್ಯೆಯೂ ಇಲ್ಲದೆ ಶಾಂತವಾಗಿದ್ದದ್ದು ಗಮನಾರ್ಹ.



1947 ಅಕ್ಟೋಬರ್‌ನಲ್ಲಿ ಪಾಕಿಸ್ತಾನದ ಕಡೆಯಿಂದ ಕೆಲವರು ಜಮ್ಮು ಕಾಶ್ಮೀರದೊಳಕ್ಕೆ ಪ್ರವೇಶಿಸಿ ದಾಳಿ ಮಾಡಿದ ಸಂದರ್ಭದಲ್ಲಿ ತಾತ್ಕಾಲಿಕವಾಗಿ ಆ ರಾಜ್ಯವನ್ನು ಭಾರತದಲ್ಲಿ ವಿಲೀನಗೊಳಿಸಲು ಮಹಾರಾಜಾ ಹರಿ ಸಿಂಗ್ ಒಪ್ಪಿಕೊಂಡನು. 1947 ಅಕ್ಟೋಬರ್ 26ರ ಒಪ್ಪಂದ ಮುಂದೆ ಜನಾಭಿಪ್ರಾಯ ಸಂಗ್ರಹಣೆಯ ಮೂಲಕ ಸಂಪೂರ್ಣವಾಗಿ ಸಿಂಧುವಾಗುತ್ತದೆ ಎಂಬುದು ಹರಿಸಿಂಗ್ ಮತ್ತು ಅಂದಿನ ಭಾರತ ಸರ್ಕಾರ ನಡುವಿನ ಒಪ್ಪಂದದ ಸಾರಾಂಶ. ಈ ಭರವಸೆಯನ್ನು ನಂತರವೂ ಭಾರತ ಸರ್ಕಾರವು ವಿಶ್ವಸಂಸ್ಥೆಯ ಒಂದು ಸಭೆಯೂ ಸೇರಿದಂತೆ ಹಲವಾರು ಸಂದರ್ಭಗಳಲ್ಲಿ ಜಗತ್ತಿನ ಮುಂದೆ ಪುನರುಚ್ಚರಿಸಿತು.

ಆ ಭರವಸೆಯ ಪ್ರಕಾರ ಆ ಸಂದರ್ಭದಲ್ಲಿಯೇ ಜನಾಭಿಪ್ರಾಯ ಸಂಗ್ರಹಣೆ (ಪ್ಲೆಬಿಸೈಟ್)ಯನ್ನು ನಡೆಸಿದ್ದರೆ ಭಾರತದ ಪರವಾಗಿಯೇ ಶೇಕಡ 90ರಷ್ಟು ಕಾಶ್ಮೀರಿಗಳು ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸುತ್ತಿದ್ದರೆಂದು ಎಲ್ಲ ರಾಜಕೀಯ ವಿಶ್ಲೇಷಕರೂ ಒಪ್ಪುತ್ತಾರೆ. ಆದರೆ ಕಾಶ್ಮೀರಿಗಳ ಬಗ್ಗೆ ಭಾರತ ಸರ್ಕಾರಕ್ಕೆ ನಂಬಿಕೆ ಇಲ್ಲದ್ದರಿಂದ, ಕೇವಲ ಒಬ್ಬ ವ್ಯಕ್ತಿಯ ಮೂಲಕ ಷೇಕ್ ಅಬ್ದುಲ್ಲಾ ವಿಲೀನವನ್ನು ಸಂಪೂರ್ಣಗೊಳಿಸಬೇಕೆಂದು ಯತ್ನಿಸಿದ್ದು ಎಲ್ಲ ಸಮಸ್ಯೆಗೂ ಮೂಲ. ಮುಂದೆ ಪ್ರಪಂಚದ ರಾಜಕೀಯರಂಗವೇ ಹಲವು ಬದಲಾವಣೆಗಳನ್ನು ಕಂಡು ಕಾಶ್ಮೀರ ಸಮಸ್ಯೆಯೇ ಈಗ ಕಗ್ಗಂಟಾಗಿದ್ದು ಪರಿಹಾರವೇ ಕಾಣದಂತಾಗಿದೆ.

ಪ್ರಜಾತಂತ್ರದ ಕಗ್ಗೊಲೆ


ಭಾರತದೊಂದಿಗೆ ತನ್ನ ರಾಜ್ಯವನ್ನು ವಿಲೀನಗೊಳಿಸಲು ರಾಜಾ ಹರಿ ಸಿಂಗ್ ಸಿದ್ಧನಾದರೂ ಷೇಕ್ ಅಬ್ದುಲ್ಲಾ ಜೊತೆ ಅಧಿಕಾರವನ್ನು ಹಂಚಿಕೊಳ್ಳಲು ಆತನಿಗೆ ಒಂದಿಷ್ಟೂ ಇಷ್ಟವಿರಲಿಲ್ಲ, ಆದರೆ ಪರಿಸ್ಥಿತಿ ಆತನಿಗೆ ಅನುಕೂಲಕರವಾಗಿರಲಿಲ್ಲವಾದ್ದರಿಂದ ಆತ ಅದಕ್ಕೆ ಅನಿವಾರ್ಯವಾಗಿ ಒಪ್ಪಿದ. ಅಂದಿನ ಪ್ರಧಾನಿ ನೆಹರೂರವರ ಬೆಂಬಲ ಅಬ್ದುಲ್ಲಾ ಅವರಿಗೆ ಇತ್ತಾದ್ದರಿಂದ ಅವರು ಕಾಶ್ಮೀರ ಮತ್ತು ಭಾರತದ ನಡುವೆ ಕೊಂಡಿಯಾಗುತ್ತಾರೆಂದು ಭಾವಿಸಲಾಗಿತ್ತು.

ಷೇಕ್ ಅಬ್ದುಲ್ಲಾ ರಾಜ್ಯದ ಪ್ರಧಾನಮಂತ್ರಿಯಾದ ನಂತರ ಅವರು ಕೆಲವು ಆಡಳಿತಾತ್ಮಕ ನಿರ್ಧಾರಗಳನ್ನು ತೆಗೆದುಕೊಂಡರು. ಆದರೆ ಆ ನಿರ್ಧಾರಗಳು ಅಲ್ಲಿಯತನಕ ಅಧಿಕಾರವನ್ನು ಮತ್ತು ಸಂಪತ್ತನ್ನು ಅನುಭವಿಸುತ್ತಾ ಬಂದಿದ್ದ ಅಲ್ಪಸಂಖ್ಯಾತ ಹಿಂದೂಗಳ ಹಿತಾಸಕ್ತಿಯ ವಿರುದ್ಧವಿದ್ದವು. ಅಬ್ದುಲ್ಲಾರವರ ಉದ್ದೇಶ ಹಿಂದೂಗಳನ್ನು ಬಗ್ಗುಬಡಿಯುವುದಾಗಿರಲಿಲ್ಲ. ಬದಲಾಗಿ ಸಾಮಾಜಿಕ ನ್ಯಾಯದ ಗುರಿಯನ್ನು ಹೊಂದುವ ಉದ್ದೇಶ ಅವರಿಗಿತ್ತು. ದುರದೃಷ್ಟವಶಾತ್ ಅವರ ನಿರ್ಧಾರಗಳಿಂದಾಗಿ ಹಿಂದೂಗಳು ಮತ್ತು ಮುಸ್ಲಿಮರ ನಡುವಿನ ಅಂತರ ಹೆಚ್ಚಾಯಿತು.

ಈ ಮಧ್ಯೆ ಭಾರತದ ಸಂವಿಧಾನದ 370 ವಿಧಿಯ ಪ್ರಕಾರ ಕಾಶ್ಮೀರಕ್ಕೆ ಸ್ವಾಯತ್ತತೆಯನ್ನು ನೀಡುವ ವಿಚಾರ ಪ್ರಸ್ತಾಪವಾಗಿತ್ತಾದರೂ ಆ ಸ್ವಾಯತ್ತತೆಯನ್ನು ತೊಲಗಿಸುವ ವಿಧಿಗಳೂ ಸಂವಿಧಾನದಲ್ಲಿಯೇ ಅಡಕವಾಗಿದ್ದವು. ಅದರ ಬಗ್ಗೆ ಷೇಕ್ ಅಬ್ದುಲ್ಲಾ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದರು.

ಆದರೆ ಅಷ್ಟೊತ್ತಿಗಾಗಲೇ ಮಹಾತ್ಮಾ ಗಾಂಧಿಯವರನ್ನು ಹತ್ಯೆಗೈದಿದ್ದ ಮತ್ತು ದೇಶದೆಲ್ಲೆಡೆ ಕೋಮುಗಲಭೆಗಳನ್ನು ಸೃಷ್ಟಿಸಿದ್ದ ಹಿಂದೂ ಕೋಮುವಾದಿ ಶಕ್ತಿಗಳು ಕಾಶ್ಮೀರಕ್ಕೆ ಸಂಬಂಧಿಸಿದ 370 ವಿಧಿಯನ್ನು ಮತ್ತು ಷೇಖ್ ಅಬ್ದುಲ್ಲಾರವರನ್ನು ವಿರೋಧಿಸಲಾರಂಭಿಸಿದ್ದವು. ಆ ವಿರೋಧದ ಭಾಗವಾಗಿಯೇ ಬಲ್‌ರಾಜ್ ಮೊಧೋಕ್ ಎಂಬ ರಾಷ್ಟ್ರೀಯ ಸ್ವಯಂ ಸೇವಕ್ ಸಂಘದ ಸಕ್ರಿಯ ಕಾರ್ಯಕರ್ತ ಜಮ್ಮುವಿನಲ್ಲಿ ಜಮ್ಮು ಪ್ರಜಾ ಪರಿಷತ್ ಎಂಬ ಹಿಂದೂ ಸಂಘಟನೆಯನ್ನು ಸ್ಥಾಪಿಸಿದ್ದ.

ಷೇಕ್ ಅಬ್ದುಲ್ಲಾ ಮತ್ತು 370 ವಿಧಿಯ ವಿರುದ್ಧ ಜಮ್ಮು ಪ್ರಜಾ ಪರಿಷತ್ ಚಳವಳಿಯನ್ನು ನಡೆಸುತ್ತಿದ್ದ ಸಂದರ್ಭದಲ್ಲೇ ಆಗ ಭಾರತೀಯ ಜನತಾ ಪಕ್ಷದ ಮೊದಲ ರೂಪವಾದ ಭಾರತೀಯ ಜನಸಂಘಕ್ಕೆ ಜನ್ಮ ನೀಡಿದ್ದ ಶ್ಯಾಮ ಪ್ರಸಾದ್ ಮುಖರ್ಜಿ ಕಾಶ್ಮೀರವನ್ನು ಪ್ರವೇಶಿಸಿದ. ಆಗ ಅಬ್ದುಲ್ಲಾರವರ ಸರ್ಕಾರ ಮುಖರ್ಜಿಯನ್ನು ಬಂಧಿಸಿತು. ಜೂನ್ 23 ರಂದು ಮುಖರ್ಜಿ ಬಂಧನದಲ್ಲಿದ್ದಾಗಲೇ ಹೃದಯಾ ಘಾತದಿಂದ ತೀರಿಕೊಂಡ. ಆದರೆ ಆತನ ಮರಣಕ್ಕೆ ಸಂಬಂಧಪಟ್ಟಂತೆ



ಶೇಕ್ ಅಬ್ದುಲ್ಲಾ ವಿರುದ್ಧ ಕೆಲವು ಆಪಾದನೆಗಳು ಕೇಳಿಬಂದಿದ್ದವು.

ಮುಖರ್ಜಿಯ ಸಾವಿನ ನಂತರ ಕಾಶ್ಮೀರದ ಅಂದಿನ ರಾಜ್ಯಪಾಲ ಕರಣ್ ಸಿಂಗ್ ಅಬ್ದುಲ್ಲಾರನ್ನು ಅಧಿಕಾರದಿಂದ ತೆಗೆದು ಹಾಕಿ ಅವರನ್ನು ಬಂಧಿಸುವ ಆಜ್ಞೆಯನ್ನು ಹೊರಡಿಸಿದರು. ಆ ಹೊತ್ತಿಗೆ ಶೇಕ್ ಅಬ್ದುಲ್ಲಾ ಬಗ್ಗೆ ನೆಹರೂಗಿದ್ದ ವಿಶ್ವಾಸವೂ ಕಡಿಮೆಯಾಗಿದ್ದರಿಂದಲೇ ಅವರ ಬಂಧನ ಸಾಧ್ಯವಾಯಿತೆಂದೂ ಹೇಳಲಾಗಿದೆ. ನಂತರದ ವರ್ಷಗಳಲ್ಲಿ ಶೇಕ್ ಅಬ್ದುಲ್ಲಾರವರ ಜೀವನ ಜೈಲಿನ ಒಳಗೆ ಮತ್ತು ಹೊರಗೆಯೇ ಸಾಗಿತು.

ಆನಂತರ ಭಾರತ ಸರ್ಕಾರಕ್ಕೆ ಯಾರು ಅಡಿಯಾಳಾಗಿರಲು ಒಪ್ಪುತ್ತಾರೋ ಅವರೇ ಕಾಶ್ಮೀರದಲ್ಲಿ ಆಳ್ವಿಕೆ ನಡೆಸುವ ಪರಿಪಾಠ ಪ್ರಾರಂಭವಾಯಿತು. ಗುಲಾಂ ಮಹಮದ್ ಮತ್ತು ಗುಲಾಂ ಮಹಮದ್ ಸಾದಿಕ್ ಅಂತಹ ಅಡಿಯಾಳು ನಾಯಕರಲ್ಲಿ ಪ್ರಮುಖರು. ಅಧಿಕಾರ ಮತ್ತು ಹಣದ ಆಸೆಗಾಗಿ ಇವರಿಬ್ಬರು ತಮ್ಮ ರಾಜಕೀಯ ನಿಲುವುಗಳನ್ನು ಹಲವಾರು ಬಾರಿ ಬದಲಾಯಿಸಿದರಲ್ಲದೆ, ಆ ರಾಜ್ಯದಲ್ಲಿ ಅನಾಹುತಕಾರಿ ರಾಜಕೀಯಕ್ಕೆ ನಾಂದಿ ಹಾಡಿದರು. ದೆಹಲಿ ಸರ್ಕಾರ ಕೂಡ ಯಾರು ತನಗೆ ಸಹಕಾರಿಯಾಗಿರುತ್ತಾರೋ ಅಂಥವರಿಗೆ ಮಾತ್ರ ತನ್ನ ಬೆಂಬಲವನ್ನು ಕೊಡುತ್ತಾ ಜನರ ನಿಜವಾದ ಆಶೋತ್ತರಗಳತ್ತ ಗಮನ ಹರಿಸುವುದನ್ನೇ ಕೈಬಿಟ್ಟಿತು.

1957 ರಿಂದ 1977 ರವರೆಗೂ ಕಾಶ್ಮೀರದಲ್ಲಿ ನಡೆದ ಎಲ್ಲ ಚುನಾವಣೆಗಳು ಪ್ರಜಾತಂತ್ರ ವಿರೋಧಿ ರೀತಿಯಲ್ಲಿಯೇ ನಡೆದು ರಾಜ್ಯದ ಜನತೆಯ ಅಸಮಾಧಾನವನ್ನು ಹೆಚ್ಚಿಸಿದವು. ಇಂತಹ ಸ್ಥಿತಿಯಲ್ಲಿ ಶೇಖ್ ಅಬ್ದುಲ್ಲಾರವರು 1971 ರಲ್ಲಿ ಪ್ಲೆಬಿಸೈಟ್ ಫ್ರಂಟ್‌ನ ಹೆಸರಿನಲ್ಲಿ ಚುನಾವಣೆಗಳಲ್ಲಿ ಭಾಗವಹಿಸಲು ಯತ್ನಿಸಿದಾಗ ಅವರನ್ನು ಮೋಸದಿಂದ ದೆಹಲಿಯಲ್ಲಿಯೇ ಇರುವಂತೆ ಮಾಡಿ, ನಂತರ ಅವರನ್ನು ಬಂಧಿಸಲಾಯಿತು.

ಕಾಶ್ಮೀರದಲ್ಲಿದ್ದ ಸಂಕ್ಷೋಭ ಪರಿಸ್ಥಿತಿಯನ್ನು ಗಮನಿಸಿದ ಪಾಕಿಸ್ತಾನ ಆ ಪ್ರದೇಶವನ್ನು ತನ್ನದಾಗಿಸಿಕೊಳ್ಳಬೇಕೆಂಬ ಉದ್ದೇಶದಿಂದ 1965 ರಲ್ಲಿ ಭಾರತದ ವಿರುದ್ಧ ಯುದ್ಧ ಸಾರಿತು ಮತ್ತು ಆ ಯುದ್ಧದಲ್ಲಿ ಸೋತಿತು. ನಂತರ 1971 ರಲ್ಲಿ ಬಾಂಗ್ಲಾ ದೇಶದ ವಿಷಯದಲ್ಲಿ ನಡೆದ ಯುದ್ಧದಲ್ಲಿಯೂ ಪಾಕಿಸ್ತಾನ ಮತ್ತೊಂದು ಬಾರಿ ಸೋತಿತು.

ಆನಂತರ ದೇಶದೆಲ್ಲೆಡೆ ಮೂಲಭೂತ ಹಕ್ಕುಗಳನ್ನು ನಿರಾಕರಿಸುವ ತುರ್ತು ಪರಿಸ್ಥಿತಿಯನ್ನು ಹೇರಿದ ಇಂದಿರಾ ಗಾಂಧಿ ಕಾಶ್ಮೀರಕ್ಕೆ ಸಂಬಂಧಪಟ್ಟಂತೆ ಶೇಕ್ ಅಬ್ದುಲ್ಲಾರೊಂದಿಗೆ ಒಂದು ಒಪ್ಪಂದ ಮಾಡಿಕೊಂಡರು. ಅಲ್ಲಿಯತನಕ 'ಕಾಶ್ಮೀರದ ಹುಲಿ' ಎಂದೇ ಪ್ರಖ್ಯಾತರಾಗಿದ್ದ ಶೇಕ್ ಅಬ್ದುಲ್ಲಾರವರು ಆ ಒಪ್ಪಂದಕ್ಕೆ ಸಹಿ ಹಾಕಿದ್ದರಿಂದ ಆ ರಾಜ್ಯದಲ್ಲಿನ ಅವರ ಜನಪ್ರಿಯತೆ ಕುಗ್ಗಿತು. ಅದರಲ್ಲೂ 1953 ರ ಹಿಂದಿನ ಪರಿಸ್ಥಿತಿಯನ್ನು ಕಾಶ್ಮೀರದಲ್ಲಿ ರಾಜಕೀಯವಾಗಿ ನಿರ್ಮಿಸಬೇಕೆಂದು ಹೇಳುತ್ತಿದ್ದ ಅಬ್ದುಲ್ಲಾ ಇಂದಿರಾ ಗಾಂಧಿಯ ಜೊತೆಗಿನ ಒಪ್ಪಂದದಲ್ಲಿ ಅದರ ಪ್ರಸ್ತಾಪವನ್ನೂ ಮಾಡದಿದ್ದದು ಜನರ ನಿರಾಶೆಗೆ ಕಾರಣವಾಗಿತ್ತು. ಇಂದಿರಾ ಗಾಂಧಿಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದರಿಂದ ಜೈಲಿನಿಂದ ಬಿಡುಗಡೆಗೊಂಡ ಶೇಕ್ ಅಬ್ದುಲ್ಲಾರವರ ಕಾಶ್ಮೀರಕ್ಕೆ ಹಿಂದಿರುಗಿ 1975 ಫೆಬ್ರುವರಿಯಲ್ಲಿ ಮತ್ತೆ ಆ ರಾಜ್ಯದ ಮುಖ್ಯಮಂತ್ರಿಯಾದರು. ಆ ಸಂದರ್ಭದಲ್ಲಿ ಅವರು ಕಾಶ್ಮೀರಿ ಜನರ ಹೋರಾಟಕ್ಕೆ ಹೊಸ ದಿಕ್ಕು ನೀಡಲು ನ್ಯಾಷನಲ್ ಕಾನ್ಫರೆನ್ಸ್ ಪಕ್ಷವನ್ನು ಪುನರ್‌ಸ್ಥಾಪಿಸಿದರು.

ರಾಜ್ಯದ ಚರಿತ್ರೆಯಲ್ಲೇ 1977 ರಲ್ಲಿ ಮೊದಲ ಬಾರಿಗೆ ನ್ಯಾಯಯುತವಾದ ಚುನಾವಣೆಗಳು ನಡೆದು ಮತ್ತೆ ಮುಖ್ಯಮಂತ್ರಿಯಾದ ಶೇಕ್ ಅಬ್ದುಲ್ಲಾ 1982 ರ ಸೆಪ್ಟೆಂಬರ್ 8 ರಂದು ನಿಧನ ಹೊಂದಿದರು. ಅವರ ನಂತರ ಅವರ ಮಗ ಫರೂಕ್ ಅಬ್ದುಲ್ಲಾ ಮುಖ್ಯಮಂತ್ರಿಯಾದರು. ಆದರೆ ಫರೂಕ್ ಅಬ್ದುಲ್ಲಾರವರನ್ನೂ ಭಾರತ ಸರ್ಕಾರ ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ, 1984 ರ ಏಪ್ರಿಲ್‌ನಲ್ಲಿ ರಾಜ್ಯಪಾಲ ಜಗ್‌ಮೋಹನ್‌ರವರು ಫರೂಕ್ ಅಬ್ದುಲ್ಲಾರ ಸರ್ಕಾರವನ್ನೂ ವಜಾಗೊಳಿಸಿ ರಾಷ್ಟ್ರಪತಿ ಆಳ್ವಿಕೆಯನ್ನು ರಾಜ್ಯದ ಮೇಲೆ ಹೇರಿದರು.

1987 ರಲ್ಲಿ ನಡೆದ ಚುನಾವಣೆಗಳಲ್ಲಿ ಮತ್ತೆ ದೊಡ್ಡ ಮಟ್ಟದಲ್ಲಿ ಮೋಸ ನಡೆದು ಕಾಶ್ಮೀರಿಗಳ ಸಹನೆಯ ಕಟ್ಟೆ ಒಡೆಯಿತು. ಆ ಚುನಾವಣೆಗಳಲ್ಲಿ ಭಾಗವಹಿಸಿದ್ದ ಹಲವಾರು ಕಾಶ್ಮೀರದ ರಾಜಕೀಯ ನಾಯಕರು ಗೆದ್ದಿದ್ದರೂ ಅವರು ಸೋತಿದ್ದಾರೆಂದು ಪ್ರಕಟಿಸಲಾಯಿತು. ಇದೆಲ್ಲದರಿಂದ ರೋಸತ್ತ ಅವರಲ್ಲಿ ಹಲವರು ತಮ್ಮ ಉದ್ದೇಶಗಳನ್ನು ಚುನಾವಣೆಯ ಮೂಲಕ ಸಾಧಿಸಲಾಗುವುದಿಲ್ಲ, ಬದಲಾಗಿ ಅದಕ್ಕೆ ಸಶಸ್ತ್ರ ಹೋರಾಟವೇ ಮಾರ್ಗವೆಂದು ನಿರ್ಧರಿಸಿ ಅಂತಹ ಹೋರಾಟಗಳ ನಾಯಕತ್ವವನ್ನು ವಹಿಸಿಕೊಂಡರು.

ಅಲ್ಲಿಯತನಕ ಅಹಿಂಸಾತ್ಮಕವಾಗಿಯೇ ನಡೆದುಕೊಂಡು ಬಂದಿದ್ದ ಕಾಶ್ಮೀರದ ಚಳವಳಿ ಹಿಂಸಾತ್ಮಕ ಚಳವಳಿಯಾಗಿ ಪರಿವರ್ತನೆಗೊಳ್ಳುವಂತೆ 1987ರ ಚುನಾವಣೆ ಮುನ್ನುಡಿ ಬರೆಯಿತು.

ಜೀವ ಪ್ರೀತಿಯನ್ನು ಗಟ್ಟಿಗೊಳಿಸುವ 'ತತ್ರಾಣಿ'

ಸಾಮಾಜಿಕ ಸ್ವಾಸ್ಥ್ಯ ನಮ್ಮ ಇಂದಿನ ಜರೂರತ್ತು. ರಾಜಕೀಯ ಸ್ವಾರ್ಥದ ದಾಹಕ್ಕಾಗಿ ಸಮಾಜದ ರಕ್ತ ಮಾಂಸವನ್ನು ಹರಿದು ತಿನ್ನುತ್ತಿರುವ, ವಿಕೃತ ಮನಸ್ಸಿನ ರಂಜನೆಗಾಗಿಯೇ ತ್ರಿಶೂಲ ಹಂಚಿ ಕಾದಾಟ ನೋಡುವ ಕೊಳ್ಳಿದೆವ್ವಗಳ ನಡುವೆ ಉತ್ತರ ಕರ್ನಾಟಕದ ಸೌಹಾರ್ದ ಪರಂಪರೆಯ ಜೀವಂತಿಕೆಯನ್ನು ಹರಡುತ್ತ ಒಮ್ಮೆ ಸೂಫಿಯಾಗಿ, ಮತ್ತೊಮ್ಮೆ ಪರೀಘನಾಗಿ, ಮಣ್ಣ ಎದೆಯಾಳದಿಂದ ಹಾಡು ಹೇಳಿಸುವ ಸಾಂಸ್ಕೃತಿಕ ಅನನ್ಯತೆಯಾಗಿ 'ತತ್ರಾಣಿ' ನಮ್ಮೆದುರು ತೆರೆದುಕೊಳ್ಳುತ್ತದೆ.



ತತ್ರಾಣಿ

ಲಡಾಯಿ ಪ್ರಕಾಶನ

ಗದಗ

ಬೆಲೆ : ರೂ. 30/-

ಸೌಹಾರ್ದ ಈ ಸಂಕಲನದ ಅಸ್ಥಿಪಂಜರ. 'ಓಂ' 'ರಾಮ' ಎನ್ನುತ್ತಲೇ ರೊಚ್ಚಿಗೆಬ್ಬಿಸುವ ಬಾಯಿಗಳಿಂದ ಪರೀಘನ ಹಾಡುಗಳ ಹೇಳಬಯಸುತ್ತದೆ. ಮೂಲಭೂತ ಧರ್ಮದ ಕೊಲೆಪಾತಕತನವನ್ನು ಕೇಳುತ್ತಿರುವ ಕಿವಿಗಳಿಗೆ, ಬರಗಾಲದಲ್ಲಿಯೂ ಬರುವ ವಸಂತವನ್ನು ನೆನೆದು ನೆತ್ತಿ ಸುಡುವ ಬಿಸಿಲಲ್ಲಿ ನಟ್ಟು ಕಡಿಯುವ ರೈತನ ಬೆವರುಹನಿಗಳಿಂದ ಬಸವರಾಜ ಹೂಗಾರರು ಸಾತ್ವಿಕ ಧರ್ಮದ ಪಾಠ ಹೇಳಿಸುತ್ತಾರೆ. ತತ್ರಾಣಿ ಮನುಷ್ಯ ಕ್ರೂರತೆಯ ಪ್ರತಿಮೆಗಳನ್ನು ನಮ್ಮೆದುರಿಗಿಡುತ್ತ, ಅಂತಃಕರಣವನ್ನು ಬಡಿದೆಬ್ಬಿಸಿ ಮಾನವೀಯತೆಯನ್ನು ಹುಟ್ಟಿಸುತ್ತದೆ. ಯಾವುದೇ ಧರ್ಮ ನೈತಿಕ ಮೌಲ್ಯಗಳನ್ನು ಪ್ರತಿಪಾದಿಸುತ್ತಾ ಸಾಮಾನ್ಯನಲ್ಲಿ ಮನುಷ್ಯತ್ವವನ್ನು ಜಾಗೃತಗೊಳಿಸಬೇಕಾದದ್ದು, ಬದಲಾಗಿ ತ್ರಿಶೂಲ ಹಂಚುವ ಮೂಲಭೂತವಾದರೆ, ಗನ್ನು, ಬಾಂಬುಗಳನ್ನು ಹಡೆಯುವ ವಿಕೃತಿಯಾದರೆ ಸಹಿಸಲಾಗದು. ಆಗ ಈ ಕೆಳಗಿನ ವಿಡಂಬನೆ ವಾಸ್ತವವೂ ಸಾಂದರ್ಭಿಕವೂ ಆಗಿದೆ. "ಜೀವ ತೆಗೆದು/ಚಟ್ಟ ಕಟ್ಟಿ/ ಹೊತ್ತರು ನಾಲ್ಕು ಜನ/ ಧರ್ಮದ ಹೆಣ."



ನಮ್ಮೆದುರಿನ ವಾಸ್ತವ ವಿಭಿನ್ನವೂ, ಸಂಕೀರ್ಣವೂ ಆಗಿದೆ. ಅರ್ಥ ಮಾಡಿಕೊಳ್ಳುವ ಧಾವಂತದಲ್ಲಿ ಎಡವಿಬಿಡುವ ಸಾಧ್ಯತೆಗಳ ಮಧ್ಯೆ ಹೂಗಾರರು ಸಾಮಾನ್ಯನಿಗೂ ಬದುಕನ್ನು ಅರ್ಥೈಸುವ ಬಗೆ ಸೃಜಿತವಾಗಿದೆ. 'ಮಂದಿರ ಮಸೀದೆಯ ಮೇಲೆ ಒಂದೊಂದು ಧ್ವಜ' ಹಾರುತ್ತಿರುವಾಗ ಎದೆಯಿಂದೆದೆಗೆ ಹರಿಯಬೇಕಿದ್ದ ಸೌಹಾರ್ದದ ಜೀವಪ್ರೀತಿಯ ರಸ ಇಂದು ವಿರಸವಾಗಿದೆ. "ಮಸೀದಿಯಲಿ ಬಂದೂಕು/ಧರ್ಮದ ಪಹರೆ ಕಾಯುವ ದಿನ/ ಶಿವಲಿಂಗದ ಗುಡಿಯಲ್ಲಿ ತ್ರಿಶೂಲ/ ರಕ್ತ ಕೇಳುವ ದಿನ/ ದೇವರುಗಳು ಪ್ರಾಣ ಬಿಟ್ಟವು/ ಮನಸ್ಸುಗಳು ಸಮಾಧಿಯಾದವು/" ಈ ರೀತಿಯ ಸತ್ಯಚಿತ್ರಗಳು ನಮ್ಮ ಕಣ್ಮುಂದಿರುವ ದುರಂತಗಳು. ಸ್ವಾರ್ಥದ ವ್ಯಷ್ಟಿಪ್ರಜ್ಞೆ ಹೆಚ್ಚಾಗಿ ಸಮಷ್ಟಿ ಪ್ರಜ್ಞೆಯ ಅಗತ್ಯತೆಯನ್ನು ಮರೆಯುತ್ತಿರುವ ನಮ್ಮವರಿಗೆ, ನಡೆಯುತ್ತಿರುವ ಸಾಮಾಜಿಕ ಸಂದರ್ಭಗಳ ಭೀಕರತೆಯನ್ನು ಅರಿಯುವಂತೆ ಚಿತ್ರಿಸುವ ಕುಸುರಿಯಲ್ಲಿ ವೈಚಾರಿಕ ಪ್ರಜ್ಞೆಯನ್ನು ವಿಸ್ತರಿಸುವ ಉತ್ಸಾಹವಿದೆ. "ದೇವರು ಧರ್ಮದ ಹಂಗು ತೊರೆದು/ ಹೆಗಲಪ್ರೀತಿಯ ನಂಬಿ/ ಕರಿಯಣ್ಣ ಸಾಬಣ್ಣ ಮೊಹರಂದ ಹೆಜ್ಜೆ ಮೇಳದಲಿ/ ಪ್ರೀತಿಯ ಗೆಜ್ಜೆ ಕುಣಿಸುತ್ತಿರುವ/" ಆರೋಗ್ಯವಂತ ಮನಸ್ಸುಗಳು ಲೋಕಕ್ಕೆ ಸೌಹಾರ್ದತೆಯನ್ನು ಅನವರತ ಪ್ರತಿಧ್ವನಿಸುತ್ತವೆ. ಅಲಾಯ್ ಹಬ್ಬದಲ್ಲಿ ಹೆಜ್ಜೆ ಹಾಕುವ ಕರಿಯಣ್ಣ ಸಾಬಣ್ಣ, ಮೈಲಾರ ಜಾತ್ರೆಯಲ್ಲಿ ಏಳುಕೋಟಿ ಕೂಗುತ್ತ ಕುದುರೆಕುಣಿಯುವ ಹಾಲೇಸಾಬ ಕೋಟೆಪ್ಪ ನಮ್ಮ ನಡುವಿನ ನಿಜ ಮನುಷ್ಯರು. ಇದೇ ನಮ್ಮ ನಿಜ ಸೌಹಾರ್ದ ಜಗತ್ತು, ಈ ಗಂಭೀರ ವಾಸ್ತವ ಸತ್ಯಗಳನ್ನು ಲೋಕಪ್ರಚುರಗೊಳಿಸುವ 'ತತ್ರಾಣಿ' ನಮ್ಮ ಸಂದರ್ಭದ ಸೌಹಾರ್ದದ ಅನನ್ಯತೆ. ಈ ಕಾರಣಕ್ಕಾಗಿಯೇ ಹೂಗಾರರು ಮನುಷ್ಯತ್ವದ ಹೂಗಳನ್ನು ಬೆಳೆಯುವ ತೋಟಗಾರನಾಗಿ ನಮ್ಮ ಪ್ರಾಮಾಣಿಕ ಪ್ರೀತಿಯನ್ನು ಪಡೆಯುವ ಸಂವೇದನಾಶೀಲ ಸಾಹಿತಿಯಾಗುತ್ತಾರೆ.

ಮನುಷ್ಯ ಇತಿಹಾಸದ ಹಿಂದೆಂದಿಗಿಂತಲೂ ನಮ್ಮ ಸಂದರ್ಭದ ಮೊದಲು ಅಗತ್ಯ ಸೌಹಾರ್ದತೆ. ಜಾತಿಗೋಡೆಗಳ ಒಡೆದು ಮನುಷ್ಯತ್ವದ ಪರಂಪರೆ ಹುಟ್ಟುಹಾಕಿದ ವಚನ ಬಂಡಾಯ 12 ನೆಯ ಶತಮಾನಕ್ಕಿಂತಲೂ ಇಂದಿಗೆ ಪ್ರಸ್ತುತವೆನಿಸುವ ಹೊತ್ತಲ್ಲಿ ತೀವ್ರತರವಾಗಿ ನಾವೆಲ್ಲ ಯೋಚಿಸಬೇಕಿದೆ, ಕಾರ್ಯಪ್ರವೃತ್ತರಾಗಬೇಕಿದೆ. ಇಂಥ ಅರಿವನ್ನು ಜಾಗೃತಗೊಳಿಸುವ ಬಸವರಾಜರು ವಚನಗಳ ಮದ್ದುಗುಂಡುಗಳನ್ನಿಟ್ಟುಕೊಂಡು ನಮಗೆ ಸೇನೆ ಬೇಕಿಲ್ಲ ಎನ್ನುತ್ತಾರೆ. "ನ್ಯಾಯ ನಿಷ್ಠುರಿ/ ಶರಣನಾರಿಗೂ ಅಂಜುವವನಲ್ಲ/ ಬಂಡಾಯವೇ ಭಕ್ತನ ಮೊದಲ ನಿಲುವು." ಭಕ್ತನಿಗಿಂತ ಬಂಡಾಯ ಮುಖ್ಯವೆನ್ನುತ್ತಾ ಪಕ್ಕದಲ್ಲಿ ಕೂತು ಕಿವಿಯಲ್ಲಿ ಪಿಸುಗುಡುತ್ತಾರೆನಿಸುತ್ತದೆ. ಇದು ಕವಿಯೊಬ್ಬ ಓದುಗನೊಂದಿಗೆ ಸಾಧಿಸುವ ಆತ್ಮೀಯತೆಯ ಉತ್ತುಂಗ. ಸೇದಿಗೆಂದೇ ರಾಮನ ಭಜಿಸುವ ಹಾದಿ ತಪ್ಪಿದ ಗೆಳೆಯ ತತ್ರಾಣಿಯಲ್ಲಿ ತ್ರಿಶೂಲಧಾರಿ ಶಿವನಾಗಿ, ದಾಸಪಂಥದ ಗಿಳಿ ಮನುಷ್ಯತ್ವದ ಹಾಡು ಹೇಳುತ್ತಿರುವಾಗ, ಗದ್ದೆ ಓಣಿಗಳಲ್ಲಿ ದುಡಿವ ರಟ್ಟೆಗಳ ಕರಕೊಂಡು ಉಣ್ಣುವ ಹಾಡು ಮೊಳಗುತ್ತಿರುವಾಗ, ಸೌಹಾರ್ದದ ಹಸಿವಿನಿಂದ ಪಂಕ್ತಿಯಲ್ಲಿ ಕೂತು ಉಣ್ಣುತ್ತಾನೆ. ಇದೇ ಈ ಸಂಕಲನದ ಪರಮಸಾರ್ಥಕತೆ.

ಪ್ರತಿಯೊಬ್ಬರನ್ನು ಕಾಡುವ, ಕನವರಿಸುವಂತೆ ಮಾಡುವ ಜೀವಭಾವ 'ಅವ್ವ' 'ಒತ್ತಿ ಕಟ್ಟಿದ ಸೆರಗಿನಲ್ಲಿ ಲೋಕ ಮೀರುವ ಛಲ'ವುಳ್ಳ ಹೂಗಾರರ ಅವ್ವ ನಮ್ಮೆಲ್ಲರವ್ವನನ್ನು ಪ್ರತಿಬಿಂಬಿಸುತ್ತಾಳೆ. ಮನೆಯಲ್ಲಿ ಮನದಲ್ಲಿ ಬೆಳದಿಂಗಳಾಗುತ್ತಾಳೆ. ಬದುಕಿನ ಬರ್ಬರತೆ ತೀರಾ ಕ್ರೂರಿಯಾದುದು. ಅದು ಪ್ರತಿಯೊಬ್ಬರನ್ನೂ ಕಂಗೆಡಿಸುವ ದಾವಾಗ್ನಿ. ಈ ವ್ಯತಿರಿಕ್ತತೆಯಲ್ಲಿ ಮನುಷ್ಯ ತನ್ನ ನೈಜ ಸಾಮರ್ಥ್ಯದ ಕುರಿತು ಅಪನಂಬಿಕೆ ತಾಳಿದಾಗ 'ನನಗೂ ಬದುಕಲು ಇಷ್ಟವಿಲ್ಲ' ಎಂಬ ಮಾತುಗಳು ದುರ್ಬಲತೆಯ ಪ್ರತೀಕಗಳಾಗುತ್ತವೆ. ದಗ್ಧತೆಗಳನ್ನು ಇಲ್ಲವಾಗಿಸಿ ದೋಣಿ ಸಾಗಿಸುಪ ಜಗತ್ತಿನ ಹಳೆಯ ಮನುಷ್ಯನ ನೆನಪ ಚಿತ್ರಕ ಶಾಲೆಯಿಂದ 'ಜೀವ ಕಾಯುವ ತಾಯಿ' ಚೇತನವನ್ನುಳಿಸಿ ಬದುಕಿಸುತ್ತಾಳೆ.

ಸಾಂಸ್ಕೃತಿಕ ಪರಂಪರೆಯ ಉಳಿವು ಮತ್ತು ಅನನ್ಯತೆಯನ್ನು ಹುಡುಕುವ ನಮ್ಮ ಆಲೋಚನೆಗಳಿಗೆ ಈ ಕವಿಯ ದೇಸೀತನ ಇಂಬುಗೊಡುತ್ತದೆ. ನೆಲದವ್ವನ ರೂಪದಲ್ಲಿ ಹಸಿರಾಗಿ ಹೂವಾಗಿ ಹಬ್ಬವಾಗಿ ಜೀವದಾಯಿಯಾಗಿ ಬರುವ ಯುಗಾದಿ ಸ್ವಾಗತಗೊಂಡರೆ, ಕಣ್ಣಲ್ಲಿ ಜೀವ ಹಿಡಿದು ಗುಳೆ ಹೊರಟ, ಬದುಕಿನ ನಿಟ್ಟುಸಿರು ನೆಲಕ್ಕೆ ತಾಗುತ್ತಿರುವಾಗ ಈ ಸಲದ ಯುಗಾದಿಯೇ ನಿನ್ನ ಬರಮಾಡಿಕೊಳ್ಳುವುದು ಹೇಗೆಂದು ಬದುಕಿನ ಪ್ರಶ್ನೆಯನ್ನೆತ್ತುತ್ತಾರೆ. ಉತ್ತರದ ಅಪೇಕ್ಷೆ ಇಲ್ಲದೆ ಉತ್ತರ ಕರ್ನಾಟಕದ ಆಡುಮಾತಿನ ಜವಾರಿತನವನ್ನು, ಜೀವಭಾಗದ ಸನ್ನಿವೇಶಗಳನ್ನು ಅವ್ವ ಕೌದಿ ಹೆಣೆಯುವ ಹಾಗೆ ಕವಿತೆಗಳನ್ನು ಕಟ್ಟುವ ಹೂಗಾರರು ಕಾವ್ಯಶಿಲ್ಪಿ.

ಪುಸ್ತಕ ವಿಮರ್ಶೆ

ಕೋಮುವಾದದ ಕ್ರೌರ್ಯ, ಜಾಗತೀಕರಣದ ಆಕ್ರಮಣದಿಂದ ಬೇಸತ್ತಿರುವ ಸಮಾಜಕ್ಕೆ ಬಸವರಾಜ ಹೂಗಾರರು 'ತತ್ರಾಣಿ'ಯ ಜೀವಜಲವನ್ನು ನೀಡಿದ್ದಾರೆ. ನಮ್ಮ ನಡುವಿನ ಗಂಭೀರ ಪ್ರಜ್ಞೆಯ, ಸರಳ ವ್ಯಕ್ತಿತ್ವದ ಪ್ರೀತಿಯ ಕವಿ 'ನೀರೆಯ ನೀರಾಟ'ದಲ್ಲಿ ಜೊತೆಗಾತಿಯನ್ನು ನೆನೆದುದ ಬಟ್ಟರೆ ಕೆಲವು ಸಾಲುಗಳಲ್ಲಿ ಮಾತ್ರ 'ಅವಳು' ಇಣುಕುತ್ತಾಳೆ. ಓದುಗರ ಪ್ರಜ್ಞೆಯನ್ನು ಜಾಗೃತಗೊಳಿಸುವ, ವಿಸ್ತರಿಸುವ, ಮನಸ್ಸುಗಳನ್ನು ಕಟ್ಟುವುದರ ಜೊತೆಗೆ 'ಅವಳ' ಬಗೆಗಿನ ತಹತಹ, ಕುತೂಹಲ, ಸಹಜ ಪ್ರೇಮದ ಪರಿಭಾಷೆಯೂ ಅಷ್ಟೇ ಪ್ರಾಮಾಣಿಕವಾಗಿ ವ್ಯಕ್ತವಾಗಬೇಕು. ಕೊನೆಯಲ್ಲಿ 'ಲಡಾಯಿ' ಪ್ರಕಾಶನದ ಅಂದದ 'ತತ್ರಾಣಿ'ಯಲ್ಲೂ 'ಬಾವಿ' 'ಭಾವಿ'ಯಾಗಿರುವುದು ವಿಷಾದ

■ ವೀರಣ್ಣ ಮಡಿವಾಳರ

ಎಡೂರಪ್ಪ ಈಗ ಡೀಸೆಂಟಾಗಿ ನ್ಯಡಕಬೇಕು ಕಣೊ

ಸೀರ ಪಕಾರೆಂದು ನಗಾಡಿದ.

"ಇದ್ಕೆಳ್ಳಿ ಚನಾಗ್ಯದೆ ಕಂಡ್ಯ ಉಗ್ರಿ. ಎಡೂರಪ್ಪ ರೈತನೆಸರಲ್ಲಿ ಪ್ರಮಾಣ ಮಾಡಿದನಂತೆ. ಆದ್ರೆ ರೈತರಿಗೆ ಗ್ವಬ್ಬರ ಬೀಜ ಒಂದೂ ಸಿಗಾಯಿಲವಂತೆ" ಎಂದ.

"ಸಿಗಾಯಿಲ್ಲ ಅಂದ್ರೆ ಅವುನೇನು ಮಾಡ್ತನೊ? ರಾಜ್ಯಪಾಲ ಆಡಳತ ನ್ಯಡುಸ್ತಾಯಿದ್ವ. ಅಧಿಕಾರಿಗಳು ನೋದಿಕಬೇಕಾಗಿತ್ತು."

ಬಯಲು ಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಅಧಿಕಾರಿಗಳು ಯಾವತ್ತು ಸ್ವಯಿಚ್ಛೆಯಿಂದ ಕ್ಯಲಸ ಮಾಡಿದ್ದರೂ? ಆ ಮುಂಡೆ ಮಕ್ಳು ಒಂಥರಾ ಎತ್ತಿದ್ದಂಗೆ. ನ್ವಗ ಹೂಡಿ ಸುಮ್ಮನಿದ್ರೆ ಅವು ಸುಮ್ಮನಿರತವೆ. ಹಿಂದಗಡಿಂದ ನಪ್ಪುರುದ್ರೆ ಚಾವುಟಕೋಲಲ್ಲಿ ಆಗಾಗ್ಗೆ ಬಾರಿಸಿದ್ರೆ ಅವು ಹ್ಯಜ್ಜೆ ಹಾಕದು" ಎಂದ ಕಾಳಮಾವ.

"ನಿಜ ಕಣ ಮಾವ. ನೀನು ಏನೇ ಕೇಳಿದ್ರು ಮಸ ಸರ್ಕಾರ ಬರ್ಲಿ ಅಂತಿದ್ರು. ಈಗ ನೋಡು ಮಸ ಸರ್ಕಾರ ಬಂದದೆ. ಆ ಮುಂಡೆ ಮಕ್ಳೂ ಮಸುಬ್ರು. ಅದ್ಕೆ ಏನು ಮಾಡಬೇಕು ಅಂತ ಗೊತ್ತಾಯ್ತುಯಿಲ್ಲ, ಈ ಅಧಿಕಾರಿ ಸನಮಕ್ಕಳು ಹೇಳಿಕೊಡ್ತಯಿಲ್ಲ, ಅದ್ಕೆ ರೈತರ್‍ಕಲ್ಲ ಬೀದಿಗಿಳದವ್ರುರೆ" ಎಂದ ಉಗ್ರಿ.

"ಸರ್ಕಾರನೆ ಪೂರ ನಚ್ಚಗಬಾರ್ದು ಅಂತ ಇವತ್ತು ಗೊತ್ತಾಯ್ತು" ಎಂದ ಕಾಳಮಾವ.

"ಕಾಲನೆ ಬದ್ಲಾಗ್ಯದಲ್ಲ ಮಾವ? ನಿಮ್ಮ ಕಾಲ್ದಲ್ಲೇನೊ ಸರ್ಕಾರದ ಪಾಡಿಗೆ ಸರ್ಕಾರ ಇರದು, ನಿಮ್ಮ ಪಾಡಿಗೆ ನೀವಿದ್ರಿ."

"ಇದ್ಕೊ ಅಂದ್ರೆ ಯಂಗಿದ್ಕೊ ಅಂತಿ? ಸೀಮೆಯಣ್ಣೆಗೆ ಮಾತ್ರ ನಾವು ಸರಕಾರ ನಂಬಿದ್ಕೊ ಕಂಡ್ಯ. ಇನ್ನ ಸಕಲಿಸ್ಸನೂ ಬ್ಯಳಕತಿದ್ಕೊ. ಇದೇ ಮುಂಗಾರು ಮಳಲಿ ಕಳಸಗೆ ವಳಗಿದ್ದ ಬೀಜ ತುಗುದು ಕೊಡೋಳು ನಿಮ್ಮತ್ತೆ ಬಿತ್ನೆ ಮಾಡತಿದ್ಕೊ ಬ್ಯಳಿತಿದ್ಕೊ, ಇವತ್ನಂಗೆ ಸೊಸೆಟ್ಟಿ ಮುಂದಕೋಗಿ ನಿಂತಗುತಿದ್ವೆ?" ಎಂದ ಕಾಳಮಾವ.

"ನಿಜ ಕಣ ಮಾವ. ನಮ್ಮಪ್ಪನೂ ನಿನ್ನಂಗೆ ಮಾಡೋನು. ಒಂದು ದಪ್ಪ ಈರೇಕಾಯಿ ಬುಟ್ರೆ ತಂದು ನ್ಯಾತಾಕೋನು, ಬದ್ನೆಕಾಯಿ ನ್ಯಾತಾಕಿ ಬೀಜ ಮಾಡೋನು, ವಗರುಜ್ವಾಳ, ತಡ್ನಿಕಾಳು, ಸಕಲಿಸ್ಸನೂ ತಂದು ಬೀಜ ಮಾಡಿ ತಗುಂಡೋಗಿ ನೆಡನು. ಇವತ್ತು ಅಂತ ಜನವೆಯಿಲ್ಲ, ಹೋಗತ್ತಗೆ" ಎಂದಳು ಜುಮ್ಮಿ.

"ನಿಮ್ಮಪ್ಪನೆಸರ ನೀನು ಉಳಸಬೇಕು ಕಣೆ" ಎಂದ ಉಗ್ರಿ.

"ಅಪ್ಪನೆಸರ ಗಂಡುಮಕ್ಕಳು ಉಳುಸಬೇಕು ಕಂಡ್ಯ, ಹೆಣ್ಣು ಮಕ್ಕಳಲ್ಲ."

"ಇವತ್ತು ಕಾಲ ಬದ್ಲಾಗ್ಯದೆ ಕಣೆ. ಮದ್ನೆ ಹೇಳಿಲ್ವೆ ಪುರುಸುನ ಪುಣ್ಯ, ನಾರಿ ಭಾಗ್ಯ ಅಂತ? ಹೆಣ್ಣು ಭಾಗ್ಯವಂತೆ ಆದ್ರೆ ಗಂಡು ಪುಣ್ಯವಂತನಾಗಿ ಬದುಕ್ತನೆ. ಇಲ್ಲ ಅಂದ್ರೆ ಕಷ್ಟ" ಎಂದು ಉಗ್ರಿ ನಕ್ಕ.

"ಎಡೂರಪ್ಪನಿಗೆ ಹೆಡ್ತಿನೆ ಯಿಲ್ಲ, ಆದ್ರು ಪುಣ್ಯವಂತನಾಗಿ ಬದುಕ್ತಯಿಲವೇ?" ಎಂದ ಸೀರ.

"ಕೆಲವ್ರುರ ಹೆಸರ ಬಲದಲ್ಲಿ ಹೆಡ್ತಿ ಸತ್ತಮ್ಯಾಲೆ ಯೇಗ ಇರತದೆ. ಎಡೂರಪ್ಪನಿಗೆ ಅಂಗಾಗಿರಬೇಕು" ಎಂದ ಉಗ್ರಿ.

"ನಿಜ ಬುಡು. ಎಡೂರಪ್ಪ ಹೆಡ್ತಿಯಿರವರಿಗೂ ಸಿಡಿ-ಸಿಡೀ ಅಂತಿದ್ದ. ಅವುನು ಮಕದಲ್ಲಿ ನಗುವೇ ಕಾಣ್ತಿರಲಿಲ್ಲ, ಅದೆ ಈಗನೋಡು ಯಾವಾಗ್ಲು ನಗ್ತನೆ" ಎಂದಳು ಜುಮ್ಮಿ.

"ಅವುನಿಗಾಗಿರೊ ಖುಷಿಲಿ ಏನು ಮಾಡ್ತ ಅವುನೆ ಗೊತ್ತೇನೆ?"

"ಏನು ಮಾಡಿದ?"

"ದ್ಯಾವೇಗೌಡನ ಮನಿಗೆ ನುಗ್ಗಿ 'ಚನಾಗಿದ್ದೀರ ಗೌಡ್ರೆ?' ಅಂದನಂತೆ. ಕುಮಾರಸ್ವಾಮಿ ಮನಿಗೋಗಿ ಅವುನ್ನ ತಬ್ಬಕೊಂಡನಂತೆ. ಅಮ್ಯಾಲೆ ಬಂಗಾರಪ್ಪನ ಮನಿಗೋಗಿ...."

"ಬಂಗಾರಪ್ಪನ ಮನಿಗೂ ಹೋಗಿದ್ನೆ?" ಎಂದ ಸೀರ.

"ಊ ಕಣೊ ಮಾವ. ಅವುನ ಮನಿಗೂ ಹೋಗಿ ಸಾಕಾರಕೊಡು ಅಂದನಂತೆ. ಬಂಗಾರಪ್ಪನಿಗೆ ಭಾಳ ಖುಷಿ ಯಾಯ್ತಂತೆ."

"ಅಂಗೆ ಮಾಡದು ವಳ್ಳೆದು ಕಂಡ್ಯ" ಎಂದ ಕಾಳಮಾವ.

"ವಳ್ಳೆದೆಯ. ಚುನಾವಣೆಗೆ ನಿಂತೋರೆ ವಬ್ಬರಿಗೊಬ್ಬರು ತಬ್ಬಕಂಡ್ರೆ ಎದರಬದರಾ ನಿಂತು ಕ್ಯಲಸ ಮಾಡಿದವ್ರಲ್ಲ? ಸುಮ್ಮನಾಯ್ತವೆ. ಮಸಮೆ ಮಾಡಕ್ಯೋಗದಿಲ್ಲ, ಅಂತೂ ಎಡೂರಪ್ಪ ಇದೊಂದು ವಳ್ಳೆ ಕ್ಯಲಸ ಮಾಡಿದ ಅತ್ಲಾಗೆ."

"ಅದನ್ನ ವಳ್ಳೆ ಕ್ಯಲಸ ಅನ್ನಬಾರ್ದು ಕಣೊ ಉಗ್ರಿ" ಎಂದುಕೊಂಡು ವಾಟಿಸ್ಸೆ ಹಾಜರಾದ.

"ಅದ್ಯಾಕನ್ನಬಾರ್ದಪ್ಪ?"



"ನೀನು ಯತ್ತ ಮುಂದಾಗಿ ಯೇಚನೆ ಮಾಡಿದ್ರು ಇದೊಂತರ ಆತ್ಮವಂಚನೆ ಬೇಟಿ. ಇದರಲ್ಲಿ ಪ್ರಾಮಾಣಿಕತೆಯಿರಲಿಲ್ಲ."

"ಅಂಗಂತಿಯಾ?"

"ಊ ಕಣೊ. ಎಡೂರಪ್ಪ ಕುಮಾರಸ್ವಾಮಿ ಬೇಟಿಯಾದಾಗ, ಆ ಕುಮಾರಸ್ವಾಮಿಗೆ ಏನು ಮಾಡಬೇಕು ಅಂತ್ಲೆ ಗೊತ್ತಾಗದೆ ಸುಮಾರೊತ್ತು ಮಕ ಗಂಟಕ್ಯಂಡಿದ್ನಂತೆ."

"ಗಂಟಕ್ಯದೆ ಅವುನು ದ್ಯಾವೇಗೌಡನ ಮಗಲ್ಲವೇನೊ? ವಳಗೊಂದು, ವರಗೊಂದು ತೋರಕ್ಯಾದತೆ? ವಳಗೇನದೆ ಅದೇ ಮಕದಲ್ಲೂ ಇರತದೆ."

"ಅಂಗಲ್ಲ ಕಣೊ. ಕುಮಾರಸ್ವಾಮಿ ನೋಡಿದ್ರೆ ಉಷಾರಾಗಿರಬೇಕು ಡೇಂಜರ್ ಮನ್ಸ ಅನ್ನಂಗವ್ರುನೆ. ಅದು ನಿಜನೂ ಆಗ್ಯದೆ. ಅಂತ ಮನುಸುನ್ನ ಯಿಡೂರಪ್ಪ ಬೇಟಿ ಮಾಡಿರೋದು ಒಂಥರಾ ಆತ್ಮವಂಚನೆ ಕ್ಯಲ್ಸ ಕಣೊ ಉಗ್ರಿ. ಈ ಬಿಜೆಪಿಗಳು ಕೆಲವು ಸಾಬರ ಮಾತಾಡ್ಸಿ ತಬ್ಬಕತ್ತರಲ್ಲ, ಅಂಗೆ ಕಾಣುಸ್ತು ನನಿಗೆ."

"ನಿನಿಗ್ಯಾವುದು ನ್ಯಟ್ಟಿಕ್ಯಂಡತ್ನ?" ಎಂದಳು ಜುಮ್ಮಿ.

"ನನಿಗೆ ಸಹಜವಾಗಿರದು ಸರಿಯಾಗಿ ಕಾಣ್ತದೆ ಕಣಕ್ಕ. ಈ ಎಡೂರಪ್ಪ ಮುಖ್ಯಮಂತ್ರಿಯಾದ ಮ್ಯಾಲೆ ಡೀಸೆಂಟಾಗಿ ಇರಬೇಕಾಗಿತ್ತು. ಅದುಬುಟ್ಟು ತಿಕ್ಲದದೊನಂಗೆ ದ್ಯಾವೇಗೌಡನ ಮನೆತದಿಂದ ಬಂಗಾರಿ ಮನಿಗಂಟ ಓಡಬಾರದಿತ್ತು."

"ಹೋಗಿ ಸಾಕಾರ ಕೇಳದು ತಪ್ಪೇನೊ?"

"ಸಾಕಾರ ಕೇಳದು ಖರ್ಗೆ ಅತ್ರ. ದ್ಯಾವೇಗೌಡನತ್ರ ಅಲ್ಲ."

"ಅದೇ ಕಣೊ ನೀನು ತೆಪ್ಪು ತಿಳಕಂಡಿರದು. ದ್ಯಾವೇಗೌಡ ಯಾವತ್ತೂ ಸುಮ್ಮನೆ ಕೂತೋನಲ್ಲ. ಅಧಿಕಾರದಲ್ಲಿರೋರಿಗೆ ತೊಂದ್ರೆ ಕೊಡಬೇಕು ಅಂತ ಏನಾರ ಮಾಡ್ತಯಿರತನೆ."

"ಈಗ ಎಡೂರಪ್ಪ ಬಂದು ಬೇಟಿಯಾದ ಅಂತ ಸುಮ್ಮನಿರತನೆ ಅಂತಿಯಾ?"

"ಅದೇಳಕ್ಕೆ ಬರದಿಲ್ಲ."

ಇದು ನಂಬಿಕೆಯ ಪ್ರಶ್ನೆ!

ಬದುಕು ನಿಂತಿರುವುದೇ ನಂಬಿಕೆಯ ಮೇಲೆ.

ತಾಯಿ ಎಂಬುದು ವಾಸ್ತವ. ತಂದೆ ಎನ್ನುವುದು ನಂಬಿಕೆ.

ಕೆಲವು ಮಹಾನುಭಾವರು ಇರುತ್ತಾರೆ. ಹೆತ್ತ ತಾಯಿಯ ಶೀಲದ ಬಗ್ಗೆಯೇ ಸಂಶಯ. ಅಂತಹವರ ಕಣ್ಣಿಗೆ ಬಿದ್ದ ಪುರುಷಪುಂಗವರೆಲ್ಲ 'ಇವನು ನನ್ನ ತಂದೆ ಇರಬಹುದಾ' ಎನ್ನುವ ಸಂಶಯ ಪಿಶಾಚಿಗಳಾಗಿ ಕಾಡ್ತಾರೆ. ಮಹತ್ವಾಕಾಂಕ್ಷಿ ಆಗಿದ್ದರಂತೂ ಮುಗಿದೇಹೋಯಿತು. ಪರಿಚಿತ ಅಧಿಕಾರಸ್ಥ ಪುರುಷರಲ್ಲೆಲ್ಲ ತಂದೆಯ ಸಾಕ್ಷಾತ್ಕಾರ ಗೋಚರಿಸುತ್ತೆ!

ಇದು ಮಕ್ಕಳ ಗೋಳಾಯಿತು. ಇನ್ನು ಗೌರವಾನ್ವಿತ ಸಮಾಜ ಹೇಗೆ ನೋಡುತ್ತೆ?

ಅತ್ಯಂತ ಕೆಳವರ್ಗದಿಂದ ಮೂಡಿಬಂತು ಶ್ರೇಷ್ಠ ಪ್ರತಿಭೆ.

ಕೆಲವು ಮಹಾನುಭಾವರಿಗೆ ಸಂಶಯ–ಇದು ಹೇಗೆ ಸಾಧ್ಯ?

ಪ್ರತಿಭೆ ಮೇಲ್ವರ್ಗಕ್ಕೆ ಮೀಸಲು!

ಇದು ಅವರ ನಂಬಿಕೆ!

ಆದರೂ ಈ ಕುಡಿ ಹೇಗೆ ಬಂತು? ಈ ತಳಿ ಯಾರದಿರಬಹುದು? ಕುಂತಲ್ಲಿ ನಿಂತಲ್ಲಿ ಇದೇ ಜಿಜ್ಞಾಸೆ!

ಮೇಲ್ವರ್ಗದಲ್ಲಿ ದಢ್ಢರಿದ್ದರೆ?

ಈ ಪ್ರಶ್ನೆ ಉದ್ಭವಿಸುವುದಿಲ್ಲ, ಇಂತಹ ಪ್ರಭೃತಿಗಳು ಅನೇಕ ಇರುವುದರಿಂದ ಅವರೆಲ್ಲರ ತಾಯಂದಿರ ಶೀಲ ಸಂಶಯಿಸುವುದು ವಿವೇಕ ಅಲ್ಲ! ಇದು ನಂಬಿಕೆಯ ಪ್ರಶ್ನೆ!

ವಶೀಕರಣ ಪರಿಣಿತರಿಗೆ 'ನಂಬಿಕೆ' ಅನ್ನುವುದರ ಪ್ರಾಮುಖ್ಯತೆ ಅರ್ಥ ಆಗಿದೆ. ಅದಕ್ಕೆ ಒಳಗಾಗಬೇಕಾದರೆ ಅದರಲ್ಲಿ ನಂಬಿಕೆ ಇರಬೇಕು. ಅದು ಇಲ್ಲದವರ ಮುಂದೆ ಇವರೇನು ಪುಂಗಿ ಊದಿದರೂ ಅವರು ಮಾತ್ರ ಯಥಾಸ್ಥಿತಿಯಲ್ಲೇ ಇರುತ್ತಾರೆ.

ಕೆಲವರು ಇರುತ್ತಾರೆ. ಮೋಸ ಮಾಡುವುದೇ ಅವರ ಕುಲ ಕಸುಬು. ಅವರು ಮೋಸ ಮಾಡುವುದು ಯಾರನ್ನ? ಅವರಲ್ಲಿ ನಂಬಿಕೆ ಇರುವವರನ್ನ! ನಂಬದವರನ್ನ ಮೋಸ ಮಾಡಲು ಸಾಧ್ಯವೇ ಇಲ್ಲ!

ಮಕರ ವೆಳಕ್ಕು ಕಥೆ ನೋಡಿ. ಶಬರಿಮಲೈ ದೇವಸ್ಥಾನ ಮಂಡಳಿಯ ಕಂಟರಾರು ಕುಟುಂಬದ ಸದಸ್ಯ ಇದು 'ದೈವಲೀಲೆ' ಅಲ್ಲ, 'ಮಾನವ ಲೀಲೆ' ಎಂದು ಸಾರಿದ್ದಾನೆ. ಇದಕ್ಕೆ ಸರ್ಕಾರವೂ ಸಚಿವರ ಮೂಲಕ ಅಧಿಕೃತ ಮುದ್ರೆ ಒತ್ತಿದೆ. ಬಹಳ ಹಿಂದೆಯೇ ಕೇರಳದ ವಿಚಾರವಾದಿಗಳ ಸಂಘ ಇದು ಮಾನವರ ಸಂಚು, ಮಣಗಟ್ಟಲೆ ಕರ್ಪೂರ ಉರಿಸಿ ದೇವರ ಪವಾಡ ಎನ್ನುವ ಭ್ರಮೆ ಮೂಡಿಸಲಾಗುತ್ತಿದೆ ಎಂದು ಸಾರಿದ್ದರು. ಇದರ ಪ್ರತಿಫಲವೋ ಎಂಬಂತೆ 'ಮಕರ ವೆಳಕ್ಕು' ಸತ್ಯಾಸತ್ಯತೆಯ ಕುರಿತು ತನಿಖೆ ನಡೆಸಲು ಹೋಗಿದ್ದ ವಿಚಾರವಾದಿಗಳನ್ನು ಅಲ್ಲಿನ ಜನ ತದುಕಿ ಕಳುಹಿಸಿದ್ದರು! ಯಾಕೆಂದರೆ ಇದು ನಂಬಿಕೆಯ ಪ್ರಶ್ನೆ! ಅಧಿಕೃತವಾಗಿ ಇದು 'ಮಾನವ ನಿರ್ಮಿತ' ಅಂತ ಸಾರಿದ ಮೇಲಾದರೂ ಜನರ ಭ್ರಮೆ ಹೋಗುತ್ತಾ ಎಂದರೆ... ಇದು ನಂಬಿಕೆಯ ಪ್ರಶ್ನೆ!



ಸುಳ್ಳೇ ಸತ್ಯ!

ಮಹಿಷಾಸುರನ ಕಾಟ ನೀಗಿಸಲು ಮಹಿಷಾಸುರ ಮರ್ದಿನಿಯಾಗಿ ತಾಯಿ ಚಾಮುಂಡಿಯೇ ಬರಬೇಕಾಯಿತು. ಭಸ್ಮಾಸುರನನ್ನು ಇಲ್ಲವಾಗಿಸಲು ಶ್ರೀ ವಿಷ್ಣು ಮೋಹಿನಿ ರೂಪ ತಾಳಬೇಕಾಯಿತು. ಸುಂದ-ಉಪಸುಂದರನ್ನು ನಿಗ್ರಹಿಸಲು ತಿಲೋತ್ತಮೆಯೇ ರೂಪ ತಾಳಬೇಕಾಯಿತು. ದುಷ್ಟ ಶಕ್ತಿಗಳ ಸಂಹಾರಕ್ಕೆ ಸ್ತ್ರೀ ಶಕ್ತಿಗಳೇ ಎಂದು ಅರಿತ ಜ್ಯೋತಿಷಿಗಳು ದೇವವಂಶ ನಾಶಕ್ಕೆ ಮಹಿಳೆಯರೇ ಸೂಕ್ತ ಎಂಬುದಾಗಿ ಸೂಚಿಸಿದ್ದರು.

ಎಲಎಲಾ ಇಷ್ಟು ಸಣ್ಣ ವಿಷಯವೂ ನಮಗೆ ಹೊಳೆಯಲಿಲ್ಲವಲ್ಲ ಅಂತ ಕಾಂಗ್ರೆಸ್ಸಿನೋವ್ರ ಪೆಕರು ಪೆಕರಾಗಿ ಹೊಳೆನರಸೀಪುರಕ್ಕೂ, ರಾಮನಗರಕ್ಕೂ ಎರಡು ಹೆಂಗಸರನ್ನು ಎಳೆದು ತಂದರಂತೆ. ಆದರೂ ಕಾಂಗ್ರೆಸ್ಸು ಅನ್ನೋದು ಅಡ್ರೆಸ್ಸೇ ಇಲ್ಲದಂಗಾಗಿದೆ. ದೃಶ್ಯ ಮಾಧ್ಯಮದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದವರು 'ಇದರಿಂದ ಜ್ಯೋತಿಷ್ಯ ಸುಳ್ಳು ಎನ್ನುವುದು ಸಾಬೀತಾಗಿದೆ' ಅಂತ ಸಾರಿದರು. 'ಅದು ಹೇಗ್ರಿ ಸಾಬೀತಾಗಿದೆ ಸುಳ್ಳು ಅಂತಾವ' ಅಂತ ದಬಾಯಿಸಿದವರಿಗೆ 'ಚುನಾವಣಾ ಫಲಿತಾಂಶ ಹಾಗೆ ಸಾರ್‍ತಿದೆ' ಅನ್ನೊ ಸಮಜಾಯಿಷಿ ನೀಡಿದರಂತೆ. 'ಘಟಾನುಘಟಿ ಕುಳ ದೇವೇಗೌಡರನ್ನೇ ಹೆಸರೇ ಇಲ್ಲದ ಪಡ್ಡೆ ಹುಡುಗಿ ನುಂಗಿ ನೀರು ಕುಡೀಲಿಲ್ವಾ' ಅಂತ ಜೋಕು ಮಾಡಿದ್ದಕ್ಕೆ ಅವರು ತಮ್ಮೆಲ್ಲ ರಂಧ್ರಗಳನ್ನು ಮುಚ್ಚಿಕೊಂಡರಂತೆ. ಇದರಿಂದ ಉತ್ತೇಜಿತರಾದ ವಚಾವಣೆಗಾರರು 'ಕನಕಪುರ ಲೋಕಸಭಾ ಚುನಾವಣೇಲಿ ನು ಡಿ.ಕೆ.ಎಸ್ ವಿನ್ ಮಾಡಿದ್ರು ಗೊತ್ತೇನ್ರಿ' ಅಂತ ಮರುಪ್ರಶ್ನೆ ಹಾಕಿದರಂತೆ. ಚುನಾವಣಾ ಫಲಿತಾಂಶ ಕುರಿತು ಕೊರೆಯಲು ಬಂದಿದ್ದ ಬೆಂಗಳೂರಿನ ಟಿವಿ ರಾಜಕೀಯ ತಜ್ಞರು ಪೆದ್ದುಪೆದ್ದಾಗಿ ಅವರನ್ನು ನೋಡಿದರಂತೆ. ಅವರಿಂದ ಯಾವುದೇ ವಿರೋಧ ಬಾರದಿರಲಾಗಿ ಕೈ ಕೈ ಮಿಲಾಯಿಸಲು ಬಂದಿದ್ದ ದಾಂಡಿಗರಿಗೆ ಬಲೇ ನೋವಾಗಿ, ಹತ್ತನ್ನೆರಡು ಹೆಂಗಸರ ಜಾತಕಾನ ಜ್ಯೋತಿಷಿಗಳಿಗೆ ತೋರಿಸಿದ್ರು. ಅದರಲ್ಲಿ ಈ ಒಬ್ಬರೇ ಆ ವಯ್ಯನ ಕಚ್ಚೆ ಕೀಳೋಕೆ ಲಾಯಕ್ಕಾದೋಳು ಅಂತ ಅವರು ಹೇಳಿದ ಮೇಲೆ ಈ ಒಮ್ಮನ್ನ ನಿಲ್ಸಿದ್ರು. ಜಾತಕ ತೋರುಸ್ದೆ ಯಾರಾರ್‍ನೋ ನಿಲ್ಸಿ ಸೋತುದ್ಕೆ ಜ್ಯೋತಿಷ್ಯಾನೇ ಸುಳ್ಳು ಅಂದರೆ ಹೆಂಗ್ರಿ' ಅಂತಾ ಬಾಯಿಮಾತಿನಲ್ಲಿಯೇ ತಮ್ಮ ತೀಟೆ ತೀರಿಸಿಕೊಳ್ಳಬೇಕಾಯಿತಂತೆ. ಇದು ನಂಬಿಕೆ ಅಂದ್ರೆ!

ಯಡಿಯೂರಪ್ಪನವರು ಮುಖ್ಯಮಂತ್ರಿ ಪದವಿ ಅನ್ನೋದು ರಾಜನ ಅಧಿಕಾರ ಅಲ್ಲ, ಜನರ ಸೇವೆಗೆ ಸಿಕ್ಕ ಅವಕಾಶ ಅಂತ ಹೇಳಿದಾಗ ಎಂತಹ ವಿನಯ ಇತ್ತು; ಅದೇ ಮುಖ್ಯಮಂತ್ರಿ ಕುರ್ಚಿಯಲ್ಲಿ ಕುಳಿತುಕೊಳ್ಳುವ ಸಮಯದಲ್ಲಿ ಮಂತ್ರ ಘೋಷಣೆ ಆಗ್ತಿತ್ತು; ಕುರ್ಚಿ ಅಲಂಕರಿಸುವುದಕ್ಕೆ ಮುಂಚೆ ಅಕ್ಷತೆಯನ್ನು ಹಾಕಿ ಅದರ ಮೇಲೆ ಕುಳಿತದ್ದು ಥೇಟ್ ರಾಜಪಟ್ಟಾಭಿಷೇಕ ನೆನಪಿಗೆ ತರುತ್ತಿತ್ತಲ್ಲ ಅಂದರೆ ಇದು ನಂಬಿಕೆಯ ಪ್ರಶ್ನೆ, ಅಧಿಕಾರದ ಪ್ರಶ್ನೆ ಅಲ್ಲ!

ಇನ್ನು ಮಾನ್ಯ ಮುಖ್ಯಮಂತ್ರಿಯವರು ಮಧ್ಯರಾತ್ರಿ ಸುಮಾರು ಆರೇಳು ಗಂಟೆ ಕಾಲ ಹೋಮಹವನ ಮಾಡಿದ್ದು. ಮಾನ್ಯರು ಇಂತಹ ಪೂಜೆಗಳನ್ನು ಕೇರಳದಲ್ಲೂ ಒಂದೆರಡು ತಿಂಗಳಿಂದ ಮಾಡಿಸುತ್ತಿದ್ದರು; ಹರಿಹರಪುರದಲ್ಲೂ ನಡೀತಾ ಇತ್ತು. ಇದೆಲ್ಲ ಯಾವುದಕ್ಕಾಗಿ; ದೇವೇಗೌಡರು ಮಾಟಮಂತ್ರ ಮಾಡಿ ನನ್ನನ್ನ ಮುಗಿಸಲು ಪ್ರಯತ್ನಿಸುತ್ತಿದ್ದಾರೆ ಅಂತ ಸಾರಿಕೊಂಡು ಬಂದ ಯಡ್ಡಿ ಇದನ್ನೆಲ್ಲ ಮಾಡುತ್ತಿರುವುದು ಯಾರಿಗಾಗಿ ಎಂಬುದನ್ನು ಸ್ಪಷ್ಟಪಡಿಸಲಿ ಎಂದು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಆರೋಪಿಸಿದ್ದಾರೆ. ಈ ಮಾಟ, ತಿರುಗು ಮಾಟ ಅದು ಅವರ ಮೇಲಿನ ನಂಬಿಕೆ! ವಾಮಾಚಾರ, ಪಾಮಾಚಾರ ಇಂತಹವಕ್ಕೆಲ್ಲ ಇದರಲ್ಲಿ ಪಳಗಿರುವ ಈ ಇಬ್ಬರೇ ಉತ್ತರಿಸಬೇಕು! ಒಟ್ಟನಲ್ಲಿ ನಂಬಿಕೆ ಮುಖ್ಯ!

ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪಟ್ಟಾಭಿಷೇಕ ಆದ ಮಾರನೆ ದಿನ ಸಿದ್ದಗಂಗಾಮಠ, ಸುತ್ತೂರು ಮಠಗಳಿಗೆ ಭೇಟಿ ನೀಡಿ ಅಲ್ಲಿನ ಮಠಾಧೀಶರುಗಳ ಆಶೀರ್ವಾದ

ಅಣಾಕ್

ಎಚ್.ಎಲ್. ಕೇಶವಮೂರ್ತಿ

ಬೇಡಿದರಂತೆ. ಇದೇನು ಬರೀ ಲಿಂಗಾಯತರ ಮಠಗಳಿಗೆ ಹೋಗ್ತಾ ಇದಾನೆ ಇವ ಅನ್ನುವ ಅಪವಾದದಿಂದ ತಪ್ಪಿಸಿಕೊಳ್ಳಲು ಆದಿಚುಂಚನಗಿರಿ ಮಠಕ್ಕೂ ಭೇಟಿ ನೀಡಿ ಸ್ವಾಮಿಗಳಿಂದ ಆಶೀರ್ವಾದ ಪಡೆದರಂತೆ. ಇನ್ನೂ ಯಾಕೋ ಒಕ್ಕಲಿಗ, ಲಿಂಗಾಯತ ಮಠಗಳಿಗಿಂತ ಶ್ರೇಷ್ಠವೆನಿಸಿರುವ ವಿಪ್ರಮಠಗಳಿಗೆ ಆಶೀರ್ವಾದ ಪಡೆಯಲು ತೆರಳಿಲ್ಲ! ಅವರನ್ನೇ ಅಲ್ಲದೆ ಇನ್ನೂ ಕೀಳುಮಠದ ಸ್ವಾಮಿಗಳ ಮಠಗಳಿಗೂ ತಮ್ಮ ಪಾದ ಬೆಳೆಸಲು ಇನ್ನೇನು ಪ್ರಾರಂಭಿಸಬಹುದು! ಯಾಕೆಂದರೆ ಇದು ನಂಬಿಕೆಯ ಪ್ರಶ್ನೆ!

ದೇವಾಲಯಗಳಿಗೆ, ಮಠಗಳಿಗೆ, ಹೋಮಹವನಗಳಿಗೆ ಕಾಲ ಮೀಸಲು ಇಡುವ ಬದಲು ರಾಜ್ಯದ ಆಡಳಿತದ ಕಡೆ ಗಮನ ಕೊಡಲಿ ಎಂದು ಕೆಲವರು ಸೂಚಿಸುತ್ತಿದ್ದಾರೆ. ಶಾಸನ ಮಂದಿರವಾಗಬೇಕಾಗಿದ್ದ ವಿಧಾನ ಸೌಧವನ್ನು ಪೂಜಾ ಮಂದಿರ ಮಾಡುತ್ತಿದ್ದಾರೆ ಎಂದೂ ಆಕ್ಷೇಪಿಸುತ್ತಾರೆ. ಇದು ಇವರ ತರ್ಕ ಇರಬಹುದು. ಆದರೆ ಅವರ ನಂಬಿಕೆ ಅವರಿಗೆ!

"ಮುತ್ತಾಕಪ್ಪ ಹೋಗಬೇಕು? ನಮ್ಮ ಬಂಗಾರಿ ...ಯಾಗ್ಯವ್ನನೆ ಹೋಗಿ. ಎಡೂರಪ್ಪ ಬಂದು ಹೂಕೊಟ್ಟ ...ತ ಬಂಗಾರಿ ಬದ್ನಾದನೆ?"

"ನೋಡೋ ವಾಟಿಸ್ನೆ, ಎಡೂರಪ್ಪ ನಾಕು ಜನ ...ರಕ್ಕೆ ದುಮ್ಮ ಮದಕೆ ಇದಕಂದು ಮುಂದೋಗಕ್ಕೆ ... ಲ್ಯಕ್ಯಾಬಾರದಲ್ಲಿ ಐದು ಜನ ಇಂಡಿಪೆಂಡೆಂಟ್ ... ಮ್ಯಾಲೆ ನಿಂತವ್ರುನೆ. ಅಂಗಾಗಿ ಯಾರ್ಯಾರು ಅವ್ರುನಿಗೆ ...ಬದ್ರು ಅಂತ ಕಂಡವ್ರುರೊ ಅವ್ರುರನ್ನಲ್ಲ ಹೋಗಿ ...ಮಾಡಿಸಿ, ಹೂ ಕೊಟ್ಟು ಬಂದವ್ರುನೆ. ಅವ್ರುನ ಕಷ್ಟ ...ನಿಗೆ, ನಿನ್ನ ತಮಾಸಿ ನಿನಿಗೆ" ಎಂದ ಉಗ್ರಿ.

"ಅಂಗಾದ್ರೆ ನಿನ್ನ ಮಾತನ್ನು ಅಕ್ಸೇಪ್ಟ್ ಮಾಡಿಕಬೇಕಾ ...ದೆ ಕಣೊ ಉಗ್ರಿ" ಎಂದು ವಾಟಿಸ್ನೆ ಹೇಳುವಾಗ ...ಮೂವ,

"ಅದಿರ್ಲಿ, ಈ ಕಾಂಗ್ರೆಸ್ಸಿನವು ಏನು ಮಾಡ್ತ ಅವೆ ...ಳ್?" ಎಂದ.

"ಅವು ತಾವೆ ಬಿದ್ದು ಮಾಡಿಕಂಡಿರೊ ಗಾಯ ನೆಕ್ಕತ ...ತವೆ ದ್ವಡಪ್ಪ"

"ಅದ್ಯಾರ್ಲ ಅಂಗೆ ಬಿದ್ದೋರು?" ಎಂದಳು ಜುಮ್ಮಿ.

"ಸೋತವ್ನಲ್ಲ ಬಿದ್ದಂಗೆ ಅಲವೇನಕ್ಕ? ಅದರಲ್ಲೂ ...ಬಗೆತಾವೆ ಎರಗಿ ಬಿದ್ರೆ ಯಾರೇನು ಮಾಡಕ್ಯಾಯ್ತದೆ? ...ಯಲ್ಲ ಕುತಗಂಡು ಸೋಲಿನ ಪರಾಮರ್ಶೆ ನ್ಯಡುಸ್ತ ...ತವಂತೆ."

"ನ್ಯಡಸದೇನು? ಮಾಡಬಾರದ್ದ ಮಾಡಿದ್ರೆ ಆಗಬಾರು ...ಯ್ತದೆ. ನ್ಯಟ್ಟಗಿರೋರಿಗೆ ತಿಕೇಟು ಕೊಟ್ಟಿದ್ರೆ ಇನ್ನು ...ತ್ತಾರು ಸೀಟು ಬರವು. ಆ ಅಂಬರೀಸನಿಗೆ ಅವ್ರುನ ...ನೆ ಇರೊ ಜಾಗದಲ್ಲಿ ತಿಕೇಟು ಕೊಟ್ಟಿದ್ರೆ ಗೆದ್ದು ...ದಿರೋನು. ಅದೂ ವಳಿಯದಿಲವಲ್ಲ ಈ ಕಾಂಗ್ರೆಸ್ ...ತ್ತೆತ್ತವುಕೆ" ಎಂದ ಉಗ್ರಿ.

"ಅಂಗರಂಬುರೀಸು ಮನೆತವುಲೆ ನಿಂತಗಬೇಕಾಗಿತ್ತು ...ತಿಯಾ?" ಎಂದಳು ಜುಮ್ಮಿ.

"ಊ ಕಣಕ್ಕ. ಬೆಂಗಳೂರಲ್ಲಿ ಅವ್ರುನಿರೊ ಜಾಗದಲ್ಲಿ ...ತು ಒಂದು ಸುತ್ತು ಹೋಗಿ ಹ್ಯಾಂಡಬಿಲ್ಲು ಕೊಟದ್ರು ...ಯ್ತಿತ್ತು. ಇಲ್ಲಿಯಂಗೆ ಹಳ್ಳಿಸ್ಯಲ್ಲ ಸುತ್ತಿ ಸೋಲೊ ಅಗತ್ಯನೆ ...ಲಿಲ್ಲ. ಯಾರ ಮಾತ ಕೇಳ್ತನವ್ರುನು? ಇತ್ತಗೆ ಎಂಪಿನೂ ... ಮಂತ್ರಿನೂ ಅಲ್ಲ, ಶಾಸಕನೂ ಆಗಲಿಲ್ಲ, ಅಂಗಾದ ...ವ್ರುನು."

"ಅದ್ರು ಸಿನುಮ ಆಗುಟ್ರು ಬಿಡ್ಡ." ■

ಮಂತ್ರಿಮಂಡಲ ರಚನೆಯಾಯಿತು.

ಯಾರು ರಚಿಸಿದ್ದು?

ಕೇಂದ್ರದ ನಾಯಕರು!

ಇದು ಯಡಿಯೂರಪ್ಪನವರೇ ಹೇಳಿದ್ದು!

ತಮ್ಮ ಅಧಿಕಾರವನ್ನು ಅವರಿಗೇಕೆ ಬಿಟ್ಟು ಕೊಟ್ಟರು?

ಮಂತ್ರಿಗಳಾಗಿರುವವರಿಗೆ ಒಂದು ರೀತಿಯ ವಾಸ್ತು ...ಟ. ವಾಸ್ತು ಸರಿ ಇರುವ ಮನೆ ಬೇಕು; ವಾಸ್ತು ಸರಿ ...ವ ಕೊಠಡಿ ಬೇಕು. ಉತ್ತರಕ್ಕೆ ಬಾಗಿಲಿದ್ದರೆ ನಾಶ ...ದಿತ! ಪಶ್ಚಿಮಕ್ಕೆ ಇದ್ದರೆ ಉತ್ತಮ. ಪೂರ್ವ ದಕ್ಷಿಣ ...ವಾಗಿಲ್ಲ, ಅಂತಹ ಮನೆ ಕೊಠಡಿಗಳಿಗಾಗಿ ...ಪೋಟಿಯಂತೆ. ಯಾಕೆ ಅಂದರೆ ಇದು ನಂಬಿಕೆಯ ...!

ಭಾಜಪ ಪ್ರಕಾಶ್ ಯಾರು?

ಎಂ.ಪಿ. ಪ್ರಕಾಶ್ ಗೊತ್ತಲ್ಲ? ಅದೇ ಜೆಡಿಎಸ್ ಮಾಡಿದ ...ಪದ ಕೆಲಸಗಳಿಗೆಲ್ಲ ತೇಪೆ ಹಾಕುತ್ತಿದ್ದೋರು. ಈಗಿನ ...ರದಲ್ಲಿ ಯಾರಿಗೆ ಈ ಸ್ಥಾನ?

ಸುರೇಶ್‌ಕುಮಾರ್‌ಗೆ!

ಯಾಕೆ ಅಂದಿರಾ?

ಮಂತ್ರಿಗಳ ಆಯ್ಕೆಯೇ ತಲೆ ನೋವು ತಂದಿದೆ. ... ಅವರ ಖಾತೆನೂ ಹಂಚಿದರೆ ಕೊಬ್ಬಿದ ಹೋರಿಗಳು ... ಕಿತ್ತು ದೌಡಾಯಿಸುತ್ತವೋ ಅನ್ನೋದು ಯಡ್ಡಿ ...ತೆ. ರೈತ, ಭಗವಂತನ ಹೆಸರಿನಲ್ಲಿ ಪ್ರಮಾಣವಚನ ...ರಿಸಿದ್ದು; ಆಗ ಹಸಿರುಶಾಲೆ ಒದೆರಿದ್ದು ಎಲ್ಲ ನಿಜವೆ. ...ವೇಷದಿಂದ ಇದು ರೈತರ ಸರ್ಕಾರ ಅಂತ ಭ್ರಮೆ ...ಡಿಸಬಹುದು. ಆದರೆ ಈ ಹಾಳಾದ ಮಂತ್ರಿಗಳನ್ನ ...ಗೆ ವಂಚಿಸಲು ಸಾಧ್ಯ ಇಲ್ಲವಲ್ಲ, ವಿಧಾನಸಭೆಯಲ್ಲಿ ...ಮತ ಸಿಗುತ್ತೋ ಇಲ್ಲವೋ ಅನ್ನೊ ಅನುಮಾನ. ... ಅದು ಆಗುವವರೆಗೆ ಖಾತೆ ಹಂಚಿಕೆ ತಂಟೇನೆ ... ಅಂತ ಅದನ್ನ ಮುಂದಕ್ಕೆ ಹಾಕಿದರು. ಆದರೆ ...ಗಿಂಗೆ ಅಂತ ಹೇಳಿದರೆ ಜನ ನಗ್ತಾರೆ ಅನ್ನೊ ಭಯ.

ಅದಕ್ಕೇನು ಮಾಡಬೇಕು?

ಪಾಪ ಸುರೇಶ್‌ಕುಮಾರ್ ಬಿಟ್ಟರು!

'ಖಾತೆ ಹಂಚಿಕೆ ... ಕಾರ್ಯಕ್ರಮದಿಂದಾಗಿ ...' ಉತ್ತರಿಸಿದರು ಸುರೇಶ್‌ಕುಮಾರ್!

ಈ ಸರ್ಕಾರದ ಎಂ.ಪಿ. ಪ್ರಕಾಶ್ ಆಗುವ ಎಲ್ಲ ...ಗಳೂ ಕಂಡುಬರುತ್ತಿದೆಯಲ್ವಾ.... ■



ಮರೆಯುವ ಮುನ್ನ



■ ಪಿ. ಲಂಕೇಶ್

-ಆಗಸ್ಟ್ 26, 1990

ಬಿಳಿಯನ ಬೂಟ್

'ಜನಾಬ್! ಒಬ್ಬ ಕರೀ ಬಂಗಾಳಿಯನ್ನು ತಂದು ನಮ್ಮ ಜಿಲ್ಲೆಗೆ ಅಧಿಕಾರಿಯನ್ನಾಗಿ ಮಾಡೋದು ಅಂದ್ರೇನು! ಸುತಾರಾಮ್ ಸಾಧ್ಯವಿಲ್ಲ, ಅದರಲ್ಲೂ ನಮ್ಮ ಜಿಲ್ಲೆಯಂಥ ಗದಿ ಜಿಲ್ಲೆಯಲ್ಲಿ ಇದು ನಡೆಯುವುದೇ ಇಲ್ಲ ಜನಾಬ್! ತಮ್ಮಂಥ ದಣಿಗಳು ಈ ಕರೀ ಬಂಗಾಳಿಯ ಕೈಕೆಳಗೆ ಕೆಲಸ ಮಾಡೋದನ್ನ ನೋಡೋದು ನಮ್ಮಿಂದ ಸಾಧ್ಯವೇ ಇಲ್ಲ ಜನಾಬ್!"

-ಇದು ಕ್ಲಿಪ್ಲಿಂಗ್ ಎಂಬ ಪ್ರಖ್ಯಾತ ಬರಹಗಾರ ಒಂದು ಶತಮಾನದ ಹಿಂದೆ ಸಣ್ಣಕತೆಯೊಂದರಲ್ಲಿ ಬರೆದದ್ದು, ಕತೆಯ ಹೆಸರು "ಜಿಲ್ಲೆಯ ಮುಖ್ಯಸ್ಥ". ಭಾರತೀಯನೊಬ್ಬನನ್ನು ಡೆಪ್ಯೂಟಿ ಕಮಿಷನರನ್ನಾಗಿ ನೇಮಿಸಿದೊಡನೆ ಗದಿ ಪ್ರದೇಶದ ಮುಸ್ಲಿಮರು, ಠಾಕೂರರು, ಗಿರಿಜನರು ದಂಗೆ ಏಳುತ್ತಾರೆ; ತಮ್ಮನ್ನು ಬಿಳಿಯರೇ ಆಳಬೇಕೆಂದು ಪ್ರತಿಭಟಿಸುತ್ತಾರೆ. ಈ ರಂಪ ನೋಡಿದ ಗಿರೀಶ್ ಡೇ ಎಂಬ ಅಧಿಕಾರಿ ಕೆಲಸಕ್ಕೆ ಹಾಜರು ಕೂಡ ಆಗದೆ ಓಡಿಹೋಗುತ್ತಾನೆ. ಇದೇ ಸಮಯವೆಂದು ಕುರುಡನಾದ ಮುಸ್ಲಿಂ ಧರ್ಮಾಧಿಕಾರಿಯೊಬ್ಬ ಇತರರನ್ನು ಕೊಲ್ಲಲು, ಲೂಟಿ ಮಾಡಲು ತನ್ನವರನ್ನು ಪ್ರೇರೇಪಿಸುತ್ತಾನೆ; ಈತನ ಎದುರು ಗುಂಪಿನ ಮುಸ್ಲಿಮನೊಬ್ಬ ತನ್ನವರೊಂದಿಗೆ ಬಂದು ಕುರುಡು ಮುಲ್ಲಾನನ್ನು ಕೊಂದು ಹಾಕುತ್ತಾನೆ.


ಇವತ್ತಿಗೂ ಭಾರತೀಯರಲ್ಲಿ ಉಚ್ಚ ಜಾತಿ ಮತ್ತು ದಮನ ಮಾಡಬಲ್ಲ ಗಟ್ಟಿಗನ ಬಗ್ಗೆ ಆಳದಲ್ಲಿ ಗೌರವವಿದೆ; ತನ್ನಂಥವನೇ ಇನ್ನೊಬ್ಬ ತನ್ನನ್ನು ಆಳುವುದನ್ನು ಸಹಿಸದ ಮತ್ಸರವಿದೆ. ಆದ್ದರಿಂದಲೇ ಇಲ್ಲಿ ಜನಸಾಮಾನ್ಯರಿಂದ ಹುಟ್ಟಿಕೊಂಡ ನಾಯಕನಲ್ಲಿ ಕೀಳರಿಮೆ ಮತ್ತು ಆತನನ್ನು ತೊಲಗಿಸಲು ಜನಸಾಮಾನ್ಯರಲ್ಲಿ ಕುತಂತ್ರ ಇದ್ದೇ ಇರುತ್ತದೆ. ಮನುಷ್ಯನ ಆಳದಿಂದ ಬರುವ ಜ್ಞಾನವಾಗಲಿ, ಮನುಷ್ಯನ ಶಿಕ್ಷಣದಿಂದ ಬರುವ ಶಿಸ್ತಾಗಲಿ, ಇದೆಲ್ಲದಕ್ಕೆ ಅಗತ್ಯವಾದ ಆತ್ಮಗೌರವವಾಗಲಿ ಇಲ್ಲದ ಜನತೆ ಒಂದು ರೀತಿಯ ಗುಲಾಮಗಿರಿಯಲ್ಲಿ ಬದುಕುತ್ತದೆ.

ಮಾತಿಗೆ ಮೀರಿದ್ದು



ಭಾರತಕ್ಕೀಗ ಏನಾಗಿದೆ ಎಂಬುದು ಈ ಪ್ರಧಾನಿ ಮತ್ತು ಅವರ ಚೇಲರಿಗೆ ಗೊತ್ತಾಗುವುದಿಲ್ಲ. ಕಳೆದ ಒಂಭತ್ತು ತಿಂಗಳಲ್ಲಿ ಆಮದು ಶೇಕಡ ಐದು ಭಾಗ ಜಾಸ್ತಿಯಾಗಿ ರಫ್ತು ಇಳಿಮುಖವಾಗಿದೆ. ಇದರ ಅರ್ಥ ನಮ್ಮ ಸಾಮಾನುಗಳನ್ನು ಯಾರೂ ಕೊಳ್ಳುತ್ತಿಲ್ಲ; ನಮಗೆ ಬೇಕಿರಲಿ, ಬೇಡವಿರಲಿ ಅವರ ಸಾಮಾನುಗಳನ್ನು ಇಲ್ಲಿ ತಂದು ಸುರಿಯುತ್ತಿದ್ದಾರೆ. ಇದರಿಂದ ಭಾರತದ ಸಾಲ ಒಂದು ಲಕ್ಷ ಸಾವಿರ ಕೋಟಿ ದಾಟಿದೆ; ಇದರ ಬಡ್ಡಿಯೇ ಹದಿನೈದು ಸಾವಿರ ಕೋಟಿಯಾಗುತ್ತಿದೆ. ಪ್ರಧಾನಿಯಾದವನಿಗೆ ಸರಳ ಸಂಗತಿಗಳಾದರೂ ಗೊತ್ತಾಗಬೇಕು. ಪೆಟ್ರೋಲ್ ನೋಡಿ. ಭಾರತಕ್ಕೆ ಬರುವ ಮಿಲಿಯನ್‌ಗಟ್ಟಲೆ ಗ್ಯಾಲನ್ ಪೆಟ್ರೋಲ್, ಡೀಸೆಲ್‌ನ ಬಹುಪಾಲನ್ನು ಬಳಸುತ್ತಿರುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು.

ಕೇಂದ್ರ ಸರ್ಕಾರ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಲೀಟರ್‌ಗೆ ಐದು ರೂಪಾಯಿಯಂತೆ ಪೆಟ್ರೋಲ್ ಕೊಂಡು ಭಾರತದಲ್ಲಿ ಹನ್ನೊಂದು ರೂಪಾಯಿಯಂತೆ ಮಾರುತ್ತಿದೆ. ಅಂದರೆ ಸರ್ಕಾರವೇ ಬಹುಪಾಲು ಪೆಟ್ರೋಲ್ ಬಳಸುವುದರಿಂದ ತನಗೇ ಮಾರಿಕೊಳ್ಳುತ್ತಿದೆ; ಅಂದರೆ ಲಂಚಕೋರ ರಾಜಕಾರಣಿಗಳು, ಅಧಿಕಾರಿಗಳ ಮೇಲೆ ಈ ಹಣ ಖರ್ಚು ಮಾಡುತ್ತಿದೆ. ಸಾರ್ವಜನಿಕರು ಕೊಂಡ ಪೆಟ್ರೋಲ್‌ನಿಂದ ಬರುವ ಲಾಭ ಈ ಸರ್ಕಾರಕ್ಕೆ ಬೇಕೇಬೇಕು. ಸರಳಗೊಳಿಸಿ ನೋಡಿ. ಭಾರತದಲ್ಲಿ ಉತ್ಪತ್ತಿಯಾಗುವ ರೇಷ್ಮೆಗಿಂತ ಬೇರೆ ದೇಶಗಳ ರೇಷ್ಮೆ ಅಗ್ಗ; ಹಾಗೆಯೇ ಸಕ್ಕರೆ, ಕಾಫಿ, ಆಮದು ಮಾಡಿಕೊಂಡರೇ ಲಾಭ, ಅಂದರೆ ಇಲ್ಲಿಂದ ಹೊರಗೆ ಮಾರಾಟವಾಗಬೇಕಾದ ಯಾವ ವಸ್ತುವೂ ಮಾರಾಟವಾಗುತ್ತಿಲ್ಲ.



ಬೆಂಕಿ ಮತ್ತು ಭೂಮಿತಾಯಿ

ನಮ್ಮ ಮಿತ್ರರೊಬ್ಬರು ಅರಸು. ಅರಸರ ಸಂಪ್ರದಾಯದಲ್ಲಿ ಮುಖ್ಯವಾದವು ಸಸ್ಯಾಹಾರ, ಶವ ಹೂಳುವುದು, ಚಿಕ್ಕಂದಿನಲ್ಲಿ ಎಮ್ಮೆ ಹಾಲು ಕುಡಿಯುವುದು ಇತ್ಯಾದಿ. ನಮ್ಮ ಅರಸು ಸಂಬಂಧಿಯೊಬ್ಬರು ತೀರಿಕೊಂಡಿದ್ದರಿಂದ ಅವರ ಶವಸಂಸ್ಕಾರಕ್ಕಾಗಿ ಅರಸು ತಮ್ಮ ಹಳ್ಳಿಗೆ ಹೋದರು. ಈ ಸಲ ಶವವನ್ನು ಚಿತೆಗೆ ಅರ್ಪಿಸಲು ಸಿದ್ಧವಾಗುತ್ತಿರುವುದನ್ನು ನೋಡಿ ಅರಸುವಿಗೆ ಆಶ್ಚರ್ಯವಾಯಿತು. ಚಿತೆಗೆ ಸಾಕಷ್ಟು ಸೌದೆ ದೊರೆಯದ ಬಯಲುಸೀಮೆ. ಆದರೂ ಶವವನ್ನು ಅಗ್ನಿಗರ್ಪಿಸಬೇಕೆಂದು ಈ ಸಂಬಂಧಿಗಳು ಹಟ ಹಿಡಿದರು. ಊರಿನ ಹತ್ತಿರ ಇದ್ದ ದೊಡ್ಡ ಗಂಧದ ಮರವನ್ನು ಕಡಿದು ತಂದು ಕಟ್ಟಿಗೆಯಾಗಿ ಒಟ್ಟಿದರು. ಮಳೆ ಜಿನುಗತೊಡಗಿತು; ಹಸಿ ಮರ ಬೇರೆ. ಶವ ಸುಡದೆ ರಂಪವಾಯಿತು.

"ಏಕೆ ಹೀಗೆ ಮಾಡಿದರು?" ಎಂದು ಕೇಳಿದೆ.

"ಇದು ಇಂಡಿಯಾದಲ್ಲಿ ಹೆಚ್ಚುತ್ತಿರುವ ಕಂದಾಚಾರದ ಒಂದು ಭಾಗ ಇರಬಹುದು; ಬ್ರಾಹ್ಮಣರು ಚಿತೆಗರ್ಪಿಸಿದರೆ ಇವರೂ ಹಾಗೇ ಮಾಡುವ ಹುಮ್ಮಸ್ಸು. ಒಮ್ಮೆ ತೊನ್ನು ಬಂದು ಸತ್ತಿದ್ದವನೊಬ್ಬನನ್ನು ಸುಟ್ಟರು; ತೊನ್ನಾದವನು ಕೊಳೆಯುವುದಿಲ್ಲ ಎಂಬ ಮೂಢನಂಬಿಕೆ. ಅದನ್ನೇ ಈಸಲ ಕ್ಯಾನ್ಸರ್‌ನಿಂದ ಸತ್ತ ಸಂಬಂಧಿಗೆ ಅನ್ವಯಿಸಿದರು," ಅಂದರು.


ಈ ಕಂದಾಚಾರದಲ್ಲೂ ಜನಕ್ಕೆ ಸ್ವಲ್ಪವಾದರೂ ವಿವೇಕವಿದ್ದರೆ ಶವವನ್ನು ಹೂಳುವುದು ಅತ್ಯಂತ ಅಗ್ಗದ, ಸರಳ ಸಂಸ್ಕಾರವೆಂಬುದು ಇವರಿಗೆ ಗೊತ್ತಾಗುತ್ತದೆ. ಒಂದು ವರ್ಷದಲ್ಲಿ ಲಕ್ಷ ಜನ ಸತ್ತರೆ ಸುಡಲು ಲಕ್ಷಲಕ್ಷ ಟನ್ ಸೌದೆ ಬೇಕಾಗುತ್ತದೆ; ಅನೇಕ ಕಿಲೊವ್ಯಾಟ್ ವಿದ್ಯುತ್ ಬೇಕಾಗುತ್ತದೆ. ಭೂಮಿತಾಯಿ ಶವವನ್ನು ಸ್ವೀಕರಿಸಿ ಹುಲುಸುಗೊಳ್ಳುತ್ತಾಳೆ.

ರೂಪಕ

ಕಾಡಲ್ಲಿ
ಘನೀಭವಿಸಿತ್ತು ರೂಪಕ
ಕೇಸರಿಯ ಗಂಭೀರ ನಡಿಗೆಗೆ
ಪ್ರೀತಿಯ ಪಲ್ಲಂಗವಾಗಿದ್ದವು
ಹಸಿರು ಗರಿಕೆಗಳು
ತಿಳಿನೀರ ಕೊಳದಲ್ಲಿ
ಬಿಳಿಯ ಹಂಸಗಳ ವಿಹಾರ
ನೆತ್ತಿಯ ಮೇಲೆ
ಬಾನಬಂಡಿಯ ಚಕ್ರ
ಹೊಳೆವ ಸೂರ್ಯ
ನಾಡಲ್ಲಿ

ಕರಗಿತ್ತು ಕೇಸರಿ
ಕೋಮುವಾದದ ಬಿಸಿಗೆ
ಬ್ರಹ್ಮಾಂಡ ಭ್ರಷ್ಟತೆ
ಬಿಳಿಯ ದಿರಿಸಿನ ಒಳಗೆ
ಅಭಿವೃದ್ಧಿಯ ನೆಪಕ್ಕೆ
ಧರೆಗುರುಳಿದ ಹಸಿರು
ದಟ್ಟ ಹೊಗೆಯಲ್ಲಿ
ಮಂಕಾದ ಸೂರ್ಯ
ಮನದ ರೂಪಕ
ಛಿದ್ರವಾಗಿತ್ತು.

■ ಡಾ. ಸಿ. ರವೀಂದ್ರನಾಥ್



ಗುಜ್ಜಾರ್ ಪ್ರತಿಭಟನೆ: ವಚನಭ್ರಷ್ಟ ಬಿಜೆಪಿ!

ಈ ಶೀರ್ಷಿಕೆಯೇ ಒಂದು ರೀತಿಯಲ್ಲಿ ಆಶ್ಚರ್ಯಕರವಾಗಿದೆ. ಆದರೂ ಅದರಲ್ಲಿ ತಪ್ಪಿಲ್ಲ. ಕರ್ನಾಟಕದಲ್ಲಿ ತನಗೆ ಸಲ್ಲಬೇಕಾದ ಮುಖ್ಯಮಂತ್ರಿ ಪಟ್ಟವನ್ನು ಜೆಡಿಎಸ್ ಹಸ್ತಾಂತರಿಸಲಿಲ್ಲ ಎಂಬ ಕಾರಣಕ್ಕೆ ಜೆಡಿಎಸ್‌ನವರು ವಚನಭ್ರಷ್ಟರು ಎಂದು ರಾಷ್ಟ್ರದಾದ್ಯಂತ ಈ ಬಿಜೆಪಿಗಳು ಬೊಂಬಡಾ ಹೊಡೆದಿದ್ದರು. ಆದರೆ ತಾವೆಂಥಾ ಮಹಾನ್ ವಚನಪಾಲಕರೆಂಬುದನ್ನು ಅತ್ತ ರಾಜಸ್ಥಾನದಲ್ಲಿ ತೋರಿಸಿಕೊಟ್ಟಿದ್ದಾರೆ.

ಕಳೆದ ಚುನಾವಣಾ ಸಂದರ್ಭದಲ್ಲಿ ಅಲ್ಲಿನ ಗುಜ್ಜಾರ್ ಸಮುದಾಯಕ್ಕೆ ಎಸ್‌ಟಿ ಸ್ಥಾನಮಾನ ಕೊಡುವುದಾಗಿ ವಚನಕೊಟ್ಟು ಅಧಿಕಾರಕ್ಕೆ ಏರಿದ್ದ ಬಿಜೆಪಿ ಇನ್ನು ಕೆಲ ತಿಂಗಳಲ್ಲೇ ಮತ್ತೆ ಚುನಾವಣೆಯನ್ನು ಎದುರಿಸಬೇಕಿದೆ. ಆದರೆ ಅಂದು ಗುಜ್ಜಾರ್ ಸಮುದಾಯಕ್ಕೆ ಕೊಟ್ಟಿದ್ದ ಮಾತನ್ನು ಬಿಜೆಪಿ ಪಾಲಿಸಲಿ ಎಂದು ಪಟ್ಟು ಹಿಡಿದಿರುವ ಗುಜ್ಜಾರ್ ಸಮುದಾಯದ ಜನರ ಮೇಲೆ ಅಲ್ಲಿನ ವಸುಂಧರಾ ರಾಜೇ ನೇತೃತ್ವದ ಬಿಜೆಪಿ ಸರ್ಕಾರ ತನ್ನ ಪೊಲೀಸ್ ಪಡೆಗಳನ್ನು ಛೂಬಿಟ್ಟು ಈಗಾಗಲೇ ಸುಮಾರು ನಲವತ್ತು ಜನರನ್ನು ಕೊಂದುಹಾಕಿದೆ.

ಕಳೆದ ವರ್ಷವೂ ಇದೇ ಸಮಯದಲ್ಲಿ ಗುಜ್ಜಾರರು ಇದೇ ಬೇಡಿಕೆಯನ್ನಿಟ್ಟು ವಿರೋಚಿತವಾಗಿ ಹೋರಾಡಿದ್ದರು. ಅವರ ನ್ಯಾಯಸಮ್ಮತವಾದ ಬೇಡಿಕೆಯನ್ನು ಈಡೇರಿಸುವ ಕಡೆಗೆ ಗಮನ ಹರಿಸದ ರಾಜಸ್ಥಾನದ ಸರ್ಕಾರ ಅವರ ಪ್ರತಿಭಟನೆಯನ್ನು ದಮನಿಸುವ ಕಡೆಗೇ ಹೆಚ್ಚಿನ ಒತ್ತು ನೀಡಿತ್ತು. ಅಂದು ಗುಜ್ಜಾರ್ ಸಮುದಾಯದ ಮೇಲೆ ನಡೆಸಿದ ಪೊಲೀಸ್ ಫೈರಿಂಗ್‌ನಿಂದಾಗಿ ಸುಮಾರು 20 ಜನ ಸತ್ತಿದ್ದರು.

ಈಗ ಮತ್ತದೇ ಚರಿತ್ರೆ ಪುನರಾವರ್ತನೆಗೊಳ್ಳುತ್ತಿದೆ. ಆದರೆ ಈಗಲೂ ಲಾಠಿ, ಬೂಟು, ಗುಂಡೇಟನಿಂದ ಜನಹೋರಾಟವನ್ನು ಬಗ್ಗು ಬಡಿಯಬಹುದೆಂಬ ನಿಲುವಿನ ವಸುಂಧರ ರಾಜೆ ಸರ್ಕಾರ ಈ ಒಂದು ವರ್ಷದ ಅವಧಿಯಲ್ಲಿ ಮತ್ತಷ್ಟು ಕ್ರೂರಿಯಾಗಿದೆ. ಇಂತಹ ದಮನದಿಂದ, ಸಾವು-ನೋವುಗಳಿಂದ ಗುಜ್ಜಾರರ ಹೋರಾಟ ತಣ್ಣಗಾಗುವುದರ ಬದಲಿಗೆ ಮತ್ತಷ್ಟು ಗಟ್ಟಿಗೊಂಡಿದೆ; ಗುಜ್ಜಾರರು ತಮ್ಮ ಹೋರಾಟದಲ್ಲಿ ಮಡಿದವರ ಶವಗಳನ್ನು ರಾಷ್ಟ್ರೀಯ ಹೆದ್ದಾರಿ 11ರಲ್ಲಿ ಸಾಲಾಗಿಟ್ಟು ಪ್ರತಿಭಟನೆಯನ್ನು ಮುಂದುವರೆಸಿದ್ದಾರೆ; ಕೇವಲ ಎರಡು ಮೂರು ಪ್ರದೇಶಗಳಿಗೆ ಮಾತ್ರ ಸೀಮಿತವಾಗಿದ್ದ ಹೋರಾಟ ಈಗ ರಾಜ್ಯವ್ಯಾಪಿ ಮಾತ್ರವಲ್ಲ ಗುಜ್ಜಾರ್ ಸಮುದಾಯ ವಾಸಿಸುತ್ತಿರುವ ಇತರೆ ರಾಜ್ಯಗಳಿಗೂ ಹರಡಿದೆ.

ವಚನಭ್ರಷ್ಟ ಬಿಜೆಪಿ!

ಗುಜ್ಜಾರರ ಈ ಬೇಡಿಕೆ ನಿನ್ನೆ ಮೊನ್ನೆಯದಲ್ಲ. 1978ರಲ್ಲಿ ಅಸ್ತಿತ್ವಕ್ಕೆ ಬಂದ ಮಂಡಲ್ ಆಯೋಗ ಈ ಸಮುದಾಯವನ್ನು ಓಬಿಸಿ ಕೆಟಗರಿಯಲ್ಲಿಡಬೇಕೆಂಬ ಪ್ರಸ್ತಾವವನ್ನು ಮುಂದಿಟ್ಟಿತ್ತು. 1994ರಲ್ಲಿ ಬೈರೋನ್ ಸಿಂಗ್ ಶೇಖಾವತ್ ನೇತೃತ್ವದ ರಾಜಸ್ತಾನ್ ಸರ್ಕಾರ ಗುಜ್ಜಾರರನ್ನು ಓಬಿಸಿಯಲ್ಲಿಡಬೇಕೆಂಬ ಪ್ರಸ್ತಾವವನ್ನು ಕೇಂದ್ರಕ್ಕೆ ಕಳಿಸಿಕೊಟ್ಟಿತ್ತು. ನಂತರ ಅಶೋಕ್ ಗೆಹ್ಲೋಟ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಈ ಸಮುದಾಯವನ್ನು ಎಸ್‌ಟಿ ಕೆಟಗರಿಯಲ್ಲಿ ಸೇರಿಸಬೇಕೆಂಬ ಆಗ್ರಹ ಹೆಚ್ಚಾಗುತ್ತಾ ಹೋಯಿತು. 2003ರ ನವೆಂಬರ್‌ನಲ್ಲಿ ಚುನಾವಣೆಯ ಪ್ರಚಾರಕ್ಕಾಗಿ ರಾಜಸ್ತಾನಕ್ಕೆ ಬಂದಿದ್ದ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಬಹಿರಂಗ ಸಭೆಯೊಂದರಲ್ಲಿ ಜಾಟ್ ಸಮುದಾಯವನ್ನು ಓಬಿಸಿ ಕೆಟಗರಿಗೆ ಸೇರಿಸುವುದಾಗಿ ಆಶ್ವಾಸನೆ ಕೊಟ್ಟರಲ್ಲದೇ ಅದನ್ನು 2004ರ ಲೋಕಸಭಾ ಚುನಾವಣೆಯ ಮುಂಚೆಯೇ ಜಾರಿಗೆ ತಂದುಬಿಟ್ಟರು. ವಾಸ್ತವದಲ್ಲಿ ಇದು ಆ ಚುನಾವಣೆಯಲ್ಲಿ ಬಿಜೆಪಿಗೆ ಭಾರಿ ಲಾಭವನ್ನು ತಂದುಕೊಟ್ಟಿತು.

ತಮ್ಮ ಚುನಾವಣಾ ಲಾಭಕ್ಕೆ ಜಾತಿ ರಾಜಕೀಯವನ್ನು ಮಾಡಿದ ಬಿಜೆಪಿ ಮುಂದುವರೆದ ಜಾತಿಯಾದ ಜಾಟರನ್ನು ಓಬಿಸಿಗೆ ಸೇರಿಸಿದ್ದರಿಂದ ಗುಜ್ಜಾರರಿಗೆ ಅನ್ಯಾಯ ಮಾಡಿದಂತಾಯಿತು. ಕೇವಲ ಶೇಕಡಾ 27ರಷ್ಟು ಮೀಸಲಾತಿಯನ್ನು ಈಗ ಅವರೆಲ್ಲರೂ ಹಂಚಿಕೊಳ್ಳಬೇಕಾಗಿದ್ದರಿಂದ ಅದರ ಪ್ರಧಾನ ಲಾಭ ಹೋಗುವುದು ಪ್ರಬಲರಾಗಿರುವ ಜಾಟ್ ಸಮುದಾಯಕ್ಕೆ ವಿನಃ ಹಿಂದುಳಿದ ಸಮುದಾಯದ ಗುಜ್ಜಾರರಿಗಲ್ಲ. ಇದನ್ನು ಪ್ರತಿಭಟಿಸಿ ಗುಜ್ಜಾರರು ತಮ್ಮ ಸಮುದಾಯವನ್ನು ಎಸ್‌ಟಿ ಕೆಟಗರಿಯಲ್ಲಿ ಸೇರಿಸಬೇಕೆಂಬ ಹಕ್ಕೊತ್ತಾಯವನ್ನಿಟ್ಟು ಹೋರಾಟ ಮಾಡಲಾರಂಭಿಸಿದರು. ಯಾವಾಗ ಈ ಹೋರಾಟ ರಾಜ್ಯವ್ಯಾಪಿ ಜನಪ್ರಿಯತೆ ಪಡೆಯಿತೋ ತಕ್ಷಣ ಅದನ್ನೂ ಬಂಡವಾಳ ಮಾಡಿಕೊಳ್ಳುವ ಉದ್ದೇಶದಿಂದ ಬಿಜೆಪಿ ಸರ್ಕಾರ ಈ ಬೇಡಿಕೆಯನ್ನು ಈಡೇರಿಸುವದಾಗಿ ಆಶ್ವಾಸನೆ ಕೊಟ್ಟಿತು.

ಆದರೆ ಆ ಆಶ್ವಾಸನೆ ಆಶ್ವಾಸನೆಯಾಗಿಯೇ ಉಳಿಯಿತು. ಸರ್ಕಾರ ತಾನೇ ಕೊಟ್ಟಿರುವ ಆಶ್ವಾಸನೆಯನ್ನು ಮರೆತಿರುವುದರಿಂದ ಅದನ್ನು ಪುನಃ ಜ್ಞಾಪಿಸುವುದಕ್ಕಾಗಿ ಗುಜ್ಜಾರರು ಚಳವಳಿಯ ಹಾದಿ ಹಿಡಿದಿದ್ದಾರೆ. ಆದರೆ ವಸುಂಧರಾ ರಾಜೆ ಮಾತ್ರ ಕಿವುಡಿಯಂತೆ ಕುಳಿತಿದ್ದಾರೆ.

ಗುಜ್ಜಾರರ ಹೋರಾಟದ ಹಾದಿ!

ವಸುಂಧರಾ ರಾಜೆಗಾಗಲೀ, ಬಿಜೆಪಿಗಾಗಲೀ ಅಥವಾ ಸಂಘಪರಿವಾರಕ್ಕಾಗಲೀ ಈ ಸಮಸ್ಯೆಯನ್ನು ಶಾಂತಿಯುತವಾಗಿ ಬಗೆಹರಿಸಬೇಕೆಂಬ ಆಕಾಂಕ್ಷೆಯಿದ್ದಿದ್ದರೆ ಇಂತಹ ಒಂದು ಮಾರಣಹೋಮವನ್ನು ತಪ್ಪಿಸಬಹುದಿತ್ತು.



ವಾಸ್ತವದಲ್ಲಿ ಅವರಿಗೆ ಇಂತಹದ್ದೊಂದು ಆಕಾಂಕ್ಷೆಯೇ ಇರಲಿಲ್ಲ.

ಈ ವರ್ಷದ ಮೇ ಮೊದಲನೇ ವಾರದಲ್ಲಿಯೇ ಗುಜ್ಜಾರರ ಪ್ರತಿಭಟನೆಯ ನೇತೃತ್ವ ವಹಿಸಿರುವ ಗುಜ್ಜಾರ್ ಆರಕ್ಷಣ ಸಂಘರ್ಷ್ ಸಮಿತಿಯ (ಗುಜ್ಜಾರ್ ಮೀಸಲಾತಿ ಸಂಘರ್ಷ ಸಮಿತಿ) ನಾಯಕ ಕಿರೋರಿ ಸಿಂಗ್ ಬೈನ್ಸ್ಲಾ ಅವರು ಕಳೆದ ವರ್ಷ ಹೋರಾಟದಲ್ಲಿ ಮಡಿದವರ ನೆನಪಿನಲ್ಲಿ ಮೇ 29ನ್ನು ಮೊದಲ ವಾರ್ಷಿಕೋತ್ಸವ ಆಚರಿಸುವುದಾಗಿ ಘೋಷಿಸಿದರು. ವಾಸ್ತವದಲ್ಲಿ ಇದು ತಮ್ಮ ಬೇಡಿಕೆಗಳಿಗಾಗಿನ ಹೋರಾಟ ಕಳೆದ ವರ್ಷವೇ ನಿಂತಿಲ್ಲ, ಅದು ಈಡೇರುವ ತನಕ ಮುಂದುವರೆಯುತ್ತದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸುವಂತಿತ್ತು. ಆಗಲೂ ವಸುಂಧರಾ ರಾಜೆ ಗುಜ್ಜಾರರ ಬೇಡಿಕೆಗಳ ಬಗ್ಗೆ ಅವರೊಂದಿಗೆ ಮಾತುಕತೆ ನಡೆಸುವುದಕ್ಕೆ ಮುಂದಾಗಲಿಲ್ಲ. ಬದಲಿಗೆ ಮೇ 17ರಂದು ಸರ್ಕಾರ ನೇಮಕ ಮಾಡಿದ್ದ ರಾಮ್ ದಾಸ್ ಅಗರ್‌ವಾಲ್ ಸಮಿತಿಯು ಗುಜ್ಜಾರ್ ಸಮುದಾಯ ವಾಸಿಸುವ ಹಿಂದುಳಿದ ಪ್ರದೇಶಗಳ (ಪ್ರಧಾನವಾಗಿ ಅಲ್ವಾರ್, ಜಾಲ್ವಾರ್, ಕರೌಲಿ, ಧೋಲ್ಪುರ್ ಮತ್ತು ಸವಾಯಿ ಪ್ರದೇಶಗಳು) ಅಭಿವೃದ್ಧಿಗೆ 282 ಕೋಟಿ ರೂ.ಗಳ ಪ್ಯಾಕೇಜ್‌ಅನ್ನು ಪ್ರಕಟಿಸಿತು. ವಾಸ್ತವದಲ್ಲಿ ಇದು ಆ ಸಮುದಾಯದ ಮೂಲ ಬೇಡಿಕೆಯನ್ನು ಚಾಣಾಕ್ಷತನದಿಂದ ಮರೆಮಾಚುವ ತಂತ್ರವಾಗಿತ್ತಷ್ಟೇ.

ಈ ಕುತಂತ್ರವನ್ನು ಚೆನ್ನಾಗಿಯೇ ಬಲ್ಲ ಗುಜ್ಜಾರ್ ಸಮುದಾಯದ ನಾಯಕರು ತಾವು ಕೇಳಿದ್ದು ತಮ್ಮ ಸಮುದಾಯವನ್ನು ಎಸ್‌ಟಿ ಕ್ಯಾಟಗರಿಯಲ್ಲಿಡಬೇಕೆಂದೇ ಹೊರತು ಈ ಪ್ಯಾಕೇಜನ್ನಲ್ಲ ಎಂದು ತಮ್ಮ ನಿಲುವನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದರು. ಆದರೆ ವಸುಂಧರಾ ಮೌನವಾಗಿಯೇ ಇದ್ದರು. ಅವರ ಮೌನಕ್ಕೂ ಒಂದು ಕಾರಣವಿದೆ.

ರಾಜಸ್ಥಾನದಲ್ಲಿ ಇನ್ನೇನು ಕೆಲವೇ ತಿಂಗಳುಗಳಲ್ಲಿ ಚುನಾವಣೆ ಎದುರಾಗಲಿದೆ. ಈ ಸಂದರ್ಭದಲ್ಲಿ ಗುಜ್ಜಾರ್ ಸಮುದಾಯಕ್ಕೆ ಎಸ್‌ಟಿ ಕೆಟಗರಿಯ ಸ್ಥಾನ ಕೊಟ್ಟುಬಿಟ್ಟರೆ ಈ ಕೆಟಗರಿಯಿಂದ ಪ್ರಧಾನವಾಗಿ ಪ್ರಯೋಜನ ಪಡೆದುಕೊಳ್ಳುತ್ತಿರುವ ಮೀನಾ ಸಮುದಾಯದಕ್ಕೆ ಪೆಟ್ಟುಬೀಳುತ್ತದೆ. ಆಗ ಸಂಖ್ಯಾಬಲದಿಂದ ಪ್ರಭಾವಶಾಲಿಯಾಗಿರುವ ಮೀನಾ ಸಮುದಾಯ ಚುನಾವಣೆಯಲ್ಲಿ ರಾಜೆಯ ವಿರುದ್ಧ ತಿರುಗಿಬೀಳುತ್ತದೆ. ಈ ಚುನಾವಣಾ ಲೆಕ್ಕಾಚಾರವೇ ವಸುಂಧರಾ ರಾಜೆಯ ಬಾಯಿ ಕಟ್ಟಿಸಿದ್ದು ಎಂಬುದರಲ್ಲಿ ಎರಡು ಮಾತಿಲ್ಲ.

ಅಂದು ಜಾಟರನ್ನು ಓಬಿಸಿಗೆ ಸೇರಿಸುವುದರಿಂದ ಬಿಜೆಪಿಗೆ ಚುನಾವಣೆಯಲ್ಲಿ ಲಾಭವಾಗುವಂತಿತ್ತು, ಆದ್ದರಿಂದ ಹಿಂದು ಮುಂದು ನೋಡದೇ ಸೇರಿಸಿಬಿಟ್ಟರು. ಆದರೆ ಇಂದು ಗುಜ್ಜಾರರನ್ನು ಎಸ್‌ಟಿಗೆ ಸೇರಿಸುವುದರಿಂದ ಮುಂಬರುವ ಚುನಾವಣೆಯಲ್ಲಿ ತಮ್ಮ ಪಕ್ಷಕ್ಕೆ ನಷ್ಟವಾಗುತ್ತದೆ. ಹಾಗಾಗಿ ಹಿಂದುಳಿದ ಸಮುದಾಯದ ಗುಜ್ಜಾರರು ಎಷ್ಟೇ ಬೊಂಬಡ ಹೊಡೆದರೂ, ಎಷ್ಟೇ ರಕ್ತ ಹರಿಸಿದರೂ ಅವರನ್ನು ಆ ಪಟ್ಟಿಯಲ್ಲಿ ಬಿಜೆಪಿ ಸೇರಿಸುವುದಿಲ್ಲ.

ಇದು ಬಿಜೆಪಿಯ ವಚನ ಭ್ರಷ್ಟತೆಗೆ, ತನಗೆ ಮತ ನೀಡುವವರಿಗೆ ಕೊಟ್ಟ ಮಾತನ್ನ ಉಳಿಸಿಕೊಳ್ಳಲಾಗದ್ದಕ್ಕೆ, ಹಿಂದುಳಿದ ವರ್ಗಗಳ ಬಗ್ಗೆ ಆ ಪಕ್ಷಕ್ಕೆ ಇರುವ ನಿರ್ಲಕ್ಷ್ಯ ಧೋರಣೆಗೆ ಒಂದು ಜ್ವಲಂತ ಉದಾಹರಣೆ.

ಇಷ್ಟೆಲ್ಲ ಆದ ನಂತರವೂ ಈ ದೇಶದ ಹಿಂದುಳಿದ ಜನ ಬಿಜೆಪಿ ಪಕ್ಷವನ್ನು ನಂಬಬೇಕೆ? ■

ಬಿಜೆಪಿಯ ಹಿಡನ್ ಅಜೆಂಡಾ ವಿರೋಧಿಸಬೇಕು

ಹತ್ತು ವರ್ಷಗಳ ಹಿಂದಿನ ಮಾತು. ದೇವೇಗೌಡರಿಂದ ತೆರವಾಗಿದ್ದ ರಾಮನಗರ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಜನತಾದಳದ ಅಭ್ಯರ್ಥಿಯಾಗಿ ಅಂಬರೀಷ್ ಸ್ಪರ್ಧಿಸಿದ್ದರು. ನಾಡಿನ ಹೆಮ್ಮೆಯ ಜಿಲ್ಲೆಯ, ಜನಾಂಗದ ಪ್ರತೀಕವಾಗಿದ್ದ ನಟ ಅಂಬಿ ಚುನಾವಣೆಯಲ್ಲಿ ಸೋತಿದ್ದು ಸಹಜವಾಗಿ ಮಂಡ್ಯದ ಜನತೆಯ ಸ್ವಾಭಿಮಾನ ಕೆಣಕಿದಂತಾಗಿತ್ತು.

ಮುಂದೆ ಬಂದ ಲೋಕಸಭಾ ಚುನಾವಣೆಯಲ್ಲಿ ಜನತಾದಳದ ಅಭ್ಯರ್ಥಿಯಾಗಿ ಅಂಬಿ ಸ್ಪರ್ಧಿಸಿದಾಗ ನಾನಿನ್ನು ವಿದ್ಯಾರ್ಥಿ. ನಾನೂ ಅಣ್ಣನ ಅಭಿಮಾನಿ ಎಂದ ಮೇಲೆ ಕೇಳಬೇಕೆ...?! ಮೊದಲೇ ಅಪರೂಪಕ್ಕೆ ಕಾಲೇಜಿಗೆ ಹೋಗುತ್ತಿದ್ದ ನಾನು, ಚುನಾವಣೆ ಮುಗಿಯುವವರೆಗೂ ಕಾಲೇಜಿಗೆ ಹೋಗಬಾರದೆಂದು ತೀರ್ಮಾನಿಸಿ ಅಂಬಿ ಅಣ್ಣನ ಪರ ಪ್ರಚಾರಕ್ಕೆ ಮೀಸಲಿದ್ದ ವಾಹನವೇರಿದೆ.

ರಾಮನಗರದ ಜನತೆಯಿಂದಾಗಿ 'ಗೆಲುವಿನ ಬೆಲೆ' ಅರಿತಿದ್ದ ಅಂಬಿ ಹಗಲು-ರಾತ್ರಿ ಎನ್ನದೆ, ಊಟ-ವಿಶ್ರಾಂತಿ ಇಲ್ಲದೆ ಊರೂರು ತಿರುಗಿದರು. ಅವರ ಹಿಂದೆ ಸಾಗರೋಪಾದಿಯಲ್ಲಿ ಅಭಿಮಾನಿಗಳು ಮತ್ತು ದಳದ ಕಾರ್ಯಕರ್ತರ ಅಪಾರ ಬೆಂಬಲ. ಪ್ರತಿ ಊರಿನಲ್ಲೂ 10-15 ನಿಮಿಷದ ಪ್ರಚಾರ, ಮನವಿ- ಹೀಗೆ ಸಾಗಿತ್ತು ಅವರ ಪ್ರಚಾರದ ವೈಖರಿ.

ಒಂದು ಊರಿಗೆ ಅಂಬಿ ಭೇಟಿ ಕೊಡುತ್ತಿದ್ದಂತೆ ಸುದ್ದಿ ಕಾಳ್ಗಿಚ್ಚಿನಂತೆ ಹರಡಿ ಅಕ್ಕ-ಪಕ್ಕದ ಊರಿನ ಜನತೆ ತಮ್ಮ ಮೆಚ್ಚಿನ ತಾರೆಯನ್ನು ಕಾಣುವ ಸಲುವಾಗಿ 'ದೇವರ ದರ್ಶನಕ್ಕಾಗಿ ಕಾಯುವ ಭಕ್ತರಂತೆ'... ಊರೂರಿನಲ್ಲಿ ಕಾದಿರುತ್ತಿದ್ದರು. ಪ್ರತಿ ಹಳ್ಳಿಯಲ್ಲೂ ಬೆಲ್ಲದಾರತಿಯ ಸ್ವಾಗತ. ಕೆಲವು ಗ್ರಾಮಗಳಲ್ಲಿ ಮಧ್ಯರಾತ್ರಿಯಾಗಿದ್ದರೂ ಹೆಂಗಸರು-ಮಕ್ಕಳು ತಂಬಿಟ್ಟು, ಹೂವು, ಹಣ್ಣು-ಕಾಯಿಯನ್ನಿಟ್ಟು ಪೂಜೆ ಸಲ್ಲಿಸಲು, ಆಶೀರ್ವದಿಸಲು ಕಾದಿರುತ್ತಿದ್ದರು.

ಪರಿಣಾಮವಾಗಿ ದೊಡ್ಡ ದೊಡ್ಡ ಗ್ರಾಮಗಳಿಗೆ ಮಾತ್ರ ಭೇಟಿ ನೀಡಲು ಅಂಬಿ ತೀರ್ಮಾನಿಸಿದರು. ಆದರೆ ಕೆರಗೋಡಿನ ಪಕ್ಕದ ಊರಿನ ಹುಡುಗ ತನ್ನ ಪುಟ್ಟ ಗ್ರಾಮಕ್ಕೆ ತನ್ನ ಮೆಚ್ಚಿನ ನಾಯಕ ಬರದಿರುವುದನ್ನು ಪ್ರತಿಭಟಿಸಿ, ಮನ ನೊಂದು ವಿಷ ಕುಡಿಯುವುದಾಗಿ ಬೆದರಿಕೆ ಹಾಕಿದ. ಅಂಬಿ ವಿಧಿ ಇಲ್ಲದೆ ಅವನೊಂದಿಗೆ ಸ್ಕೂಟರಿನಲ್ಲಿ ಅವನೂರಿಗೆ ಹೋಗಿ ಬಂದಿದ್ದರು!

ಅಭಿಮಾನಿಗಳ ಪಾಡು ಹೀಗಾದರೆ ಕಾಂಗ್ರೆಸ್ ನಾಯಕರ ಬಾಳು ಹೇಳತೀರದಾಗಿತ್ತು, ಅವರು ಬೇರೆಯವರಿಂದ ತಮ್ಮ ಪಕ್ಷಕ್ಕೆ ಓಟು ಹಾಕಿಸುವುದಿರಲಿ, ತಮ್ಮ ಹೆಂಡತಿಯರ ಓಟು ಹಾಕಿಸಲೂ ವಿಫಲರಾಗಿದ್ದರು! ಕೆಲವರಂತೂ ಆಣೆ, ಪ್ರಮಾಣ ಮಾಡಿಸಿದ್ದರೂ ಪ್ರಯೋಜನವಾಗದೆ, ಅವರ ಪತ್ನಿಯರೆ ಸಾರ್ವಜನಿಕವಾಗಿ 'ಅಂಬಿಗೆ ಮತ, ಅಂಬ್ರಿಷಣ್ಣಂಗೆ ನಾನು ಓಟು ಹಾಕೂದು' ಎಂದು ಹೇಳಿ ತೀವ್ರ ಮುಜುಗರ ಉಂಟುಮಾಡಿದ್ದರು. ಪರಿಣಾಮ ಮುಖಂಡರು ಊರ ಜನರ ಮುಂದೆ ನಗೆಪಾಟಲಿಗೆ ಈಡಾಗಿದ್ದರು.

ನನ್ನ ಮನೆ ದೇವರ ಉತ್ಸವದಲ್ಲಿ ನಾನು ಸ್ವಇಚ್ಛೆಯಿಂದ ನಿದ್ದೆಗೆಟ್ಟಿದ್ದು ಬಿಟ್ಟರೆ ಮತ್ತೆ ಇಡೀ ರಾತ್ರಿ ನಾನು ಜಾಗರಣೆ ಮಾಡಿದ್ದು ಅಂಬಿಯ ಮೊದಲ ಲೋಕಸಭಾ ಚುನಾವಣಾ ಪ್ರಚಾರದಲ್ಲಿ ಮಾತ್ರ-ಎಂದು ಹೇಳಲು ನನಗೆ ಹೆಮ್ಮೆ ಎನಿಸುತ್ತದೆ.

ಇಂತಹ ಪ್ರೀತಿ, ಅಭಿಮಾನಿಗಳಿಂದಲೇ ಅಂಬಿ ಸತತವಾಗಿ ಗೆದ್ದಿದ್ದು.

ಈಗ ಅದೆಲ್ಲಾ ಇತಿಹಾಸ. ಅಂಬಿ ತನ್ನ ತವರು ಜಿಲ್ಲೆಯಲ್ಲಿಯೇ ಸೋತಿದ್ದಾರೆ. ಅಂಬಿಯ ಜನಪ್ರಿಯತೆ, ಹುಚ್ಚು-ಇವೆಲ್ಲವನ್ನೆ ಪ್ರಶ್ನಿಸಿದ್ದ ಪಕ್ಷದ ವರಿಷ್ಠ ದೇವೇಗೌಡರಿಗೆ, ಕಿರುಗಾವಲಿನ ಶಾಸಕ ಮತ್ತು ಮಂತ್ರಿಯಾಗಿದ್ದ ಕೆ.ಎನ್. ನಾಗೇಗೌಡರು "ಇನ್ನೂ ಮೂರ್ ಎಲೆಕ್ಷನ್ ಇವ್ನ ಮುಂಧೆ ಯಾರ್ ನಿಂತ್ರೂ ಗೆಲ್ಲಕ್ಕಾಗಲ್ಲ ಸಾರ್" ಎಂದು ಲೋಕಾಭಿರಾಮವಾಗಿ ಮಾತನಾಡುತ್ತಾ ಅಂದಿನ ದಳದ ಮುಖಂಡ ಬಿ.ಸಿ. ಶಿವಾನಂದರ ಮನೆಯಲ್ಲಿ ಹೇಳಿದ ಮಾತು ನಿಜವಾಗಿದೆ. ಸತತ ಮೂರು ಬಾರಿ ಗೆದ್ದ ಅಂಬಿ ಕಾವೇರಿ ವಿಚಾರವಾಗಿ, ಕಾಂಗ್ರೆಸ್ ತಂತ್ರದಿಂದಾಗಿ, ಕುಮಾರಣ್ಣನ ಜನಪ್ರಿಯತೆಯಿಂದಾಗಿ ಸೋತು ಮೂಲೆಗುಂಪಾಗಿದ್ದಾರೆ.

ರಾಜನಾಗಬೇಕಿದ್ದ ರಾಮ ವನವಾಸಿಯಾದ; ಧರ್ಮ ರಾಜ್ಯ ಭ್ರಷ್ಟನಾದ. ಹಳ್ಳಿಗರ ನಂಬಿಕೆಯಂತೆ ಹರಿಶ್ಚಂದ್ರನ ಪಾತ್ರ ಮಾಡಿದ ಶಾಪದಿಂದಾಗಿ ರಾಜ್ ಅಪಹರಣಕ್ಕೊಳಗಾಗಿ ಕಾಡು-ಮೇಡು ಅಲೆದರು. ಯಾವ ಜನ ಅಣ್ಣನ ಮೊದಲ ಪಾದ ದರ್ಶನದಿಂದಲೇ ಪುಳಕಿತರಾಗಿ ಮುಗಿಲುಮುಟ್ಟುವಂತೆ, ಚಿತ್ರಮಂದಿರವೇ ನಡುಗುವಂತೆ ಶಿಳ್ಳೆ, ಚಪ್ಪಾಳೆ, ಹರ್ಷೋದ್ಗಾರ ಪಡೆಯುತ್ತಿದ್ದರೋ ಅಂತಹ ಜನರಿಂದಲೇ ಅಂಬಿ ತಿರಸ್ಕೃತರಾಗಿದ್ದಾರೆ.

ಶ್ರೀರಂಗಪಟ್ಟಣದ ಫಲಿತಾಂಶ ನೆನೆಸಿಕೊಂಡರೆ ಕನಕದಾಸರು ಹೇಳಿದ 'ಕಾಲವಾವನ ಕೀಳುಮಾಡದು....?' ಎಂಬ ಸಾಲು ನೆನಪಾಗಿ ಜೀವ ಹಿಂಡುತ್ತಿದೆ.

ಬೂದನೂರು ರಾಜ, ಕನಕಪುರ

ನರಹಂತಕ ನರೇಂದ್ರ ಮೋದಿಯನ್ನು ಆರಾಧ್ಯದೈವವನ್ನಾಗಿಸಿಕೊಂಡಿರುವ ಕೇಸರಿ ಪಡೆ ಕರ್ನಾಟಕದಲ್ಲಿ ಅಧಿಕಾರದ ಗದ್ದುಗೆಯನ್ನೇರುವಲ್ಲಿ ಯಶಸ್ವಿಯಾಗಿದೆ. ಕೋಮುವಾದಿಗಳ ಈ ಯಶಸ್ಸಿಗೆ ಕಾಂಗ್ರೆಸ್ಸಿಗರ ನಿಷ್ಕ್ರಿಯತೆ ಮತ್ತು ದೇವೇಗೌಡ ಮತ್ತವರ ಮಕ್ಕಳ ದುರಾಸೆಯ ರಾಜಕಾರಣವೇ ಕಾರಣ. ಕರ್ನಾಟಕದಲ್ಲಿ ಸ್ವಂತ ಬಲದಿಂದ ಅಧಿಕಾರಕ್ಕೇರುವುದು ಸಾಧ್ಯವೇ ಇಲ್ಲ ಎಂದು ಹತಾಶೆಗೊಂಡಿದ್ದ ಭಾಜಪದವರು, ಬಾಬಾಬುಡನ್‌ಗಿರಿಯನ್ನು ಅಯೋಧ್ಯೆ ಮಾಡುತ್ತೇವೆ ಮತ್ತು ಕರ್ನಾಟಕವನ್ನು ಗುಜರಾತ್ ಮಾಡುತ್ತೇವೆ ಎಂದು ಘಂಟಾಘೋಷವಾಗಿ ಹೇಳಿಕೊಂಡು, ಭೂ ಮತ್ತು ಗಣಿ ಮಾಫಿಯಾದ ಜೊತೆ ಕೈಜೋಡಿಸಿ ಅಧಿಕಾರವನ್ನು ಹಿಡಿದಿದ್ದಾರೆ. ಬೆಂಗಳೂರಿನ ಭೂಗಳ್ಳರು ಮತ್ತು ಬಳ್ಳಾರಿಯ ಗಣಿಚೋರರ ಹಂಗಿನಲ್ಲಿರುವ ಯಡಿಯೂರಪ್ಪ ಮತ್ತವರ ಗ್ಯಾಂಗ್ ಇನ್ನು ಮುಂದೆ ಕರ್ನಾಟಕದಲ್ಲಿ ಮಾಡಬಹುದಾದ ಅನಾಹುತಗಳನ್ನೆದುರಿಸಲು ಕನ್ನಡನಾಡಿನ ಎಲ್ಲಾ ಪ್ರಜ್ಞಾವಂತ ಜನರು ತಮ್ಮ ಸ್ವಪ್ರತಿಷ್ಠೆಗಳನ್ನು ಬದಿಗೊತ್ತಿ, ಒಗ್ಗಟ್ಟಿನಿಂದ ಕಾರ್ಯತಂತ್ರವನ್ನು ರೂಪಿಸಬೇಕಿದೆ.

ಕೋಮುವಾದಿ ಶಕ್ತಿಗಳು ಎಲ್ಲೇ ಅಧಿಕಾರಕ್ಕೆ ಬಂದರೂ, ಅಲ್ಲಿ ಅವರು ಮೊದಲು ಮಾಡುವ ಕೆಲಸ ಅವರ 'ಹಿಡನ್ ಅಜೆಂಡಾ'ದಲ್ಲಿರುವ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಯತ್ನಿಸುವುದು. ಇಂತಹ ವಿಷಮ ಪರಿಸ್ಥಿತಿಯಲ್ಲಿ 'ಪತ್ರಿಕೆ'ಯ ಜವಾಬ್ದಾರಿಯೂ ಹೆಚ್ಚಾಗಿದೆ. ಈ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸುವ ಶಕ್ತಿ ತಮಗಿದೆ ಎಂದು ನಂಬಿದ್ದೇನೆ.

-ಎಸ್.ಎಸ್. ವೆಂಕಟೇಶ್,
ಜನಜಾಗೃತಿ ವೇದಿಕೆ, ಬೆಂಗಳೂರು



ಖ್ಯಾತ ನಿರ್ದೇಶಕ ಮಣಿರತ್ನಮ್ ಮತ್ತೆ ಮೈಕೊಡವಿ ಎದ್ದುನಿಂತಿದ್ದಾರೆ. ಸುಮಾರು ಎರಡು ವರ್ಷಗಳ ಹಿಂದೆ ಬಿಡುಗಡೆಗೊಂಡ ಅವರ ನಿರ್ದೇಶನದ ಹಿಂದಿ ಸಿನಿಮಾ 'ಗುರು' ಬಾಕ್ಸಾಫೀಸಿನಲ್ಲಿ ಠುಸ್ ಪಟಾಕಿಯಂತೆ ಸೋತಿತ್ತು, ಅದರಲ್ಲಿ ಅಭಿಷೇಕ್ ಬಚ್ಚನ್, ಐಶ್ವರ್ಯಾ ರೈ, ಮಾಧವನ್, ವಿದ್ಯಾ ಬಾಲನ್, ಮಲ್ಲಿಕಾ ಶೆರಾವತ್, ಮಿಥುನ್ ಚಕ್ರವರ್ತಿ ತರಹದ ದೊಡ್ಡ ಸ್ಟಾರ್‌ಗಳೇ ಇದ್ದರೂ ಚಿತ್ರ ಮುಗ್ಗರಿಸಿತ್ತು, ಅದೇ ಸಮಯಕ್ಕೆ ಮಣಿರತ್ನಮ್‌ರ ಸಹೋದರ ಅಕಾಲಿಕ ಮರಣಕ್ಕೀಡಾಗಿದ್ದರು. ಜೊತೆಗೆ ಮಣಿರತ್ನಮ್‌ರವರನ್ನು ಅನಾರೋಗ್ಯ ಬೆಂಬಿಡದೆ ಕಾಡಿತ್ತು.

ಈ ಎಲ್ಲ ಬೇಸರಗಳಿಂದ ಒಂದೂವರೆ ವರ್ಷದಿಂದ ಸೈಲೆಂಟಾಗಿದ್ದ ಮಣಿರತ್ನಮ್ ಈಗ ಹಿಂದಿ ಮತ್ತು ತಮಿಳು ಎರಡೂ ಭಾಷೆಯಲ್ಲಿ ಏಕಕಾಲದಲ್ಲಿ ನಿರ್ಮಾಣವಾಗುತ್ತಿರುವ ಚಿತ್ರವೊಂದನ್ನು ಆರಂಭಿಸುತ್ತಿದ್ದಾರೆ. ಎರಡೂ ಭಾಷೆಗಳ ನಾಯಕಿ ಪಾತ್ರವನ್ನು ಐಶ್ವರ್ಯಾ ರೈ ನಿರ್ವಹಿಸುತ್ತಿದ್ದು, ನಾಯಕರು ಮಾತ್ರ ಬದಲಾಗಿದ್ದಾರೆ. ಹಿಂದಿಯಲ್ಲಿ ಅಭಿಷೇಕ್ ಬಚ್ಚನ್ ಹೀರೋ ಆದರೆ ತಮಿಳಿನಲ್ಲಿ ಆ ಪಾತ್ರವನ್ನು ವಿಕ್ರಮ್ ನಿಭಾಯಿಸಲಿದ್ದಾರಂತೆ.


ಒಟ್ಟನಲ್ಲಿ ಮಣಿ ಮ್ಯಾಜಿಕ್ ಈ ಬಾರಿ ಏನಾಗುತ್ತೋ ಕಾದುನೋಡಬೇಕಿದೆ.

ಕರಿಬಸವಯ್ಯನ ಕೆರಿಯರ್

ಕಲ್ಲಿದ್ದಲಿನಷ್ಟೇ ಕರ್‍ರಗಿರುವ ಕರಿಬಸವಯ್ಯ ಎಂಬ ...ಪೋಷಕ ನಟನ ಬೆಳ್ಳಿತೆರೆ ಜೀವನದಲ್ಲಿ ಹೊಸ ಬೆಳಕು ...ಮೂಡಿದೆ.

ಕಳೆದ ಮೂವತ್ತೈದು ವರ್ಷಗಳಿಂದ ಬೆಂಗಳೂರಿನ ...ಶೇಷಾದ್ರಿಪುರಂ ಕಾಲೇಜಿನಲ್ಲಿ ಕರಿಬಸವಯ್ಯ ಕೆಲಸ ...ಮಾಡುತ್ತಿದ್ದರು. ಆ ಕೆಲಸದ ಜೊತೆಜೊತೆಗೆ ಅವರ ಸಿನಿಮಾ ...ಜೀವನವೂ ಸಾಗುತ್ತಿತ್ತು. ಆದರೆ ಈಗ ಕಾಲೇಜಿನ ಕೆಲಸಕ್ಕೆ ...ಗುಡ್‌ಬೈ ಹೇಳಿರುವ ಕರಿಬಸವಯ್ಯ ಫುಲ್‌ಟೈಂ ...ಕಲಾವಿದನಾಗಲು ಹೊರಟಿದ್ದಾರೆ.

ಈಗಾಗಲೇ ಸುಮಾರು **148** ಚಿತ್ರಗಳಲ್ಲಿ ಸಣ್ಣಪುಟ್ಟ ...ಪಾತ್ರಗಳಲ್ಲಿ ನಟಿಸಿರುವ ಕರಿಬಸವಯ್ಯ ಉದ್ಯಮದಲ್ಲಿ ಒಳ್ಳೆಯ ...ನಟ, ಸ್ನೇಹಜೀವಿ ಎಂಬ ಹೆಸರನ್ನು ಪಡೆದಿದ್ದಾರೆ. ಆದರೆ ...ಸುಮಾರು ನೂರು ಚಿತ್ರಗಳಲ್ಲಿ ನಟಿಸಿದ ನಂತರವೇ ಅವರಿಗೆ ...ಕಾರ್ ಒಂದನ್ನು ಖರೀದಿಸಲು ಸಾಧ್ಯವಾಯಿತಂತೆ. ಆದರೆ ತಾವು ಕಾರೊಂದನ್ನು ಖರೀದಿಸಿರುವುದರ ಬಗ್ಗೆ ತಮ್ಮ ಹಳ್ಳಿಯ ಜನ "ನಮ್ಮ ಬಸವಯ್ಯನಿಗೆ ಸೈಕಲ್ ಓಡಿಸಕ್ಕೇ ಬರಲ್ಲ, ಆದರೆ ಕಾರು ತಕ್ಕೊಂಡವ್ನಂತೆ" ಎಂದು ಸಂತೋಷಪಟ್ಟಿದ್ದನ್ನು ನೆನಪಿಸಿಕೊಳ್ಳುತ್ತಾರೆ.



ಒಳ್ಳೆಯ ಮಾತುಗಾರರೂ ಆದ ಕರಿಬಸವಯ್ಯ ಅವರು ...ಸಿನಿಮಾದಲ್ಲಿ ಅವಕಾಶ ಕಡಿಮೆಯಾದರೆ ನಾಟಕಗಳಲ್ಲಿ ...ನಟಿಸುತ್ತಾರೆ. ನಾಟಕಗಳಲ್ಲೂ ಅವಕಾಶ ಇಲ್ಲವೆಂದಾದರೆ ...ಕೈಯಲ್ಲಿ ತಾಳ ಹಿಡಿದುಕೊಂಡು ಹರಿಕಥೆಯನ್ನು ನಡೆಸುತ್ತಾರೆ. ...ಶನಿಮಹಾತ್ಮೆ ಹರಿಕಥೆಗೆ ಉಪಕತೆ ಮತ್ತು ತಮಾಷೆಗಳನ್ನು ...ಸೇರಿಸುವ ಕರಿಬಸವಯ್ಯ ಅದನ್ನು ನಾಲ್ಕು ಗಂಟೆಗಳ ...ಕಾಲ ವಿಸ್ತರಿಸಿ ಜನರನ್ನು ರಂಜಿಸುತ್ತಾರೆ.

ಅವರ ಮೈಬಣ್ಣದಿಂದಾಗಿ 'ಕರಿ' ಎಂಬ ಪದ ಅವರ ...ಹೆಸರೊಂದಿಗೆ ಬೆಸೆದುಕೊಂಡಿದೆಯಲ್ಲದೆ ಇವತ್ತು ಅದೇ ...ಅವರ ಟ್ರೇಡ್‌ಮಾರ್ಕ್ ಕೂಡ ಆಗಿದೆ. ವರವೂ ಹೌದು ...ಶಾಪವೂ ಹೌದು ಎಂಬಂತಿರುವ ಈ ಪದದ ಬಗ್ಗೆ ಅವರೇ ...ಗೇಲಿ ಮಾಡಿಕೊಳ್ಳುವುದೂ ಅವರ ಮತ್ತೊಂದು ಸ್ಪೆಷಾಲಿಟಿ. ...ಈಗ ನೂರೈವತ್ತು ಸಿನಿಮಾಗಳ ಆಸುಪಾಸಿನಲ್ಲಿರುವ ...ಕರಿಬಸವಯ್ಯ ಈಗ ಫುಲ್ ಟೈಮ್ ನಟನಾಗಿ ಫುಲ್ ...ಫಾರ್ಮಿನಲ್ಲಿ ಸಾಗಲು ಸಜ್ಜಾಗಿದ್ದಾರೆ. ಅವರ ಚಿತ್ರಗಳ ಸಂಖ್ಯೆ ...ಆದಷ್ಟು ಬೇಗ ಇನ್ನೂರರ ಗಡಿ ದಾಟುವಂತಾಗಲಿ.



ಸುಂದರ ಹಾಡುಗಳ ಚಿಕ್ಕಮಲ್ಲಿಗೆ

'ಚಿಕ್ಕಮಗಳೂರ ಚಿಕ್ಕಮಲ್ಲಿಗೆ' ಚಿತ್ರದ ಹಾಡುಗಳನ್ನು ಮೊನ್ನೆ ನಿರ್ದೇಶಕ ಚೆನ್ನಗಂಗಪ್ಪ ಹೆಮ್ಮೆಯಿಂದ ಪತ್ರಕರ್ತರಿಗೆಲ್ಲಾ ತೋರಿಸಿದರು.


ಅಂದೇ ಆ ಚಿತ್ರಕ್ಕಾಗಿ ಹಿನ್ನೆಲೆ ಗಾಯಕರಾಗಿ ಹಾಡಿದ ಸುಮಾರು ಏಳು ಜನ ಅಪ್ಪಟ ಕನ್ನಡದ ಪ್ರತಿಭೆಗಳನ್ನು ಕೂಡಾ ಪರಿಚಯಿಸಿದರು. ಅವರ ಬಯೋಡಾಟಾಗಳನ್ನು ಸಂಗೀತ ನಿರ್ದೇಶಕ ಕಲ್ಯಾಣ್ ಮನತುಂಬ ಹೇಳಿದರು.

ಈಗಿನ ಕಾಲದಲ್ಲಿ ಬಹುತೇಕ ನಿರ್ದೇಶಕರು ಸೋನು ನಿಗಮ್, ಕುನಾಲ್ ಗಾಂಜಾವಾಲಾ ಮೊದಲಾದ ಹಿಂದಿ ಗಾಯಕರಿಗಾಗಿ ದಿನಗಟ್ಟಲೆ ಕಾಯುತ್ತಿರುವಾಗ ಚೆನ್ನಗಂಗಪ್ಪ ಧೈರ್ಯವಾಗಿ ಕನ್ನಡದ ಕಂಠಗಳನ್ನೇ ನಂಬಿರುವುದು ಮೆಚ್ಚುವ ವಿಷಯವೇ.

ಈ ಚಿತ್ರದಲ್ಲಿ ಪೂಜಾ ಗಾಂಧಿಯ ಸಹೋದರಿ ರಾಧಿಕಾ ಗಾಂಧಿ ಫುಲ್ ಲೆನ್ತ್ ಹೀರೋಯಿನ್ ಆಗಿ ಕಾಣಿಸಿಕೊಂಡಿದ್ದಾರೆ. ಉದಯ ಟೀವಿಯಲ್ಲಿ ನಿರೂಪಕನಾಗಿರುವ ಶ್ರವಂತ್ ಈ ಚಿತ್ರದ ನಾಯಕ. ಆತನಿಗೂ ಇದು ಚೊಚ್ಚಲ ಅನುಭವ. ಹೀಗೆ ಹೊಸಬರೊಂದಿಗೆ ಆಟವಾಡಲು ಹೊರಟಿರುವ ಚೆನ್ನಗಂಗಪ್ಪ ತಮ್ಮನ್ನು ತಾವೇ ಪರೀಕ್ಷೆಗೆ ಒಡ್ಡಿಕೊಂಡಿದ್ದಾರೆ. ಈ ಹಿಂದೆ ಅವರು ರಮೇಶ್ ಮತ್ತು ಜಗ್ಗೇಶ್‌ರಂಥ ಮಹಾನ್ ನಟರನ್ನು ಹಾಕಿಕೊಂಡು ಚಿತ್ರ ಮಾಡಿ ಸಿಕ್ಕಾಪಟ್ಟೆ ಕಳೆದುಕೊಂಡಿದ್ದರು.


ಕೊನೇ ಮಾತು: ಈ ಚಿತ್ರದ ಹಾಡುಗಳನ್ನು ಚಿತ್ರೀಕರಿಸಿರುವ ಹೊರಾಂಗಣ ದೃಶ್ಯಗಳಂತೂ ಚೆನ್ನಾಗಿವೆ. ಚಿತ್ರದ ಕಥೆಯೂ ಚೆನ್ನಾಗಿದ್ದರೇ ಖಂಡಿತವಾಗಿಯೂ ಚೆನ್ನಗಂಗಪ್ಪನವರೂ ಚೆನ್ನಾಗಿರುತ್ತಾರೆ.

ಅರಳೀತೆ ಕೃಷ್ಣಪ್ಪನ ಮೊಗ್ಗು?



ಯಲಹಂಕದಲ್ಲಿ ಚುನಾವಣೆಯಲ್ಲಿ ಸೋತ 'ಮುಂಗಾರು ಮಳೆ'ಯ ನಿರ್ಮಾಪಕ ಈ. ಕೃಷ್ಣಪ್ಪ ಮತ್ತೆ ಗೆಲುವಿನ ಮೂಡ್‌ನಲ್ಲಿದ್ದಾರೆ. ಇದಕ್ಕೆ ಕಾರಣ ಅವರ ನಿರ್ಮಾಣದ 'ಮೊಗ್ಗಿನ ಮನಸ್ಸು' ಚಿತ್ರವನ್ನು ದೆಹಲಿ ಸೆನ್ಸಾರ್ ಟ್ರಿಬ್ಯೂನಲ್ ವೀಕ್ಷಿಸಿ ಯು/ಎ ಸರ್ಟಿಫಿಕೇಟ್ ನೀಡಿದೆಯಂತೆ. ಅಲ್ಲಿಗೆ 'ಮೊಗ್ಗಿನ ಮನಸ್ಸು' ವಿಷಯದಲ್ಲಿ ಕರ್ನಾಟಕದ ಸೆನ್ಸಾರ್ ಆಫೀಸರ್ ಚಂದ್ರಶೇಖರ್ ವಿರುದ್ಧ ಕೃಷ್ಣಪ್ಪ ಅವರಿಗೆ ಮೊದಲ ಸುತ್ತಿನ ಜಯ ದೊರೆತಂತಾಗಿದೆ. ಆದರೂ ಇನ್ನೂ ಸಾಕಷ್ಟು ತಾಂತ್ರಿಕ ಅಡಚಣೆಗಳು ಇರುವುದರಿಂದ ಮತ್ತೆ ತೀರ್ಪು ಚಂದ್ರಶೇಖರ್ ಪರ ಆಗಬಹುದಾದ ಸಾಧ್ಯತೆಯನ್ನೂ ಚಿತ್ರ ಬ್ರಹ್ಮರು ತಳ್ಳಿಹಾಕುತ್ತಿಲ್ಲ.

ಹೀಗಾಗಿ ಚುನಾವಣೆಯ ಫಲಿತಾಂಶದ ಮಾದರಿಯಲ್ಲೇ 'ಮೊಗ್ಗಿನ ಮನಸ್ಸು' ಚಿತ್ರಕ್ಕೆ ಯಾವ ಸರ್ಟಿಫಿಕೇಟ್ ಸಿಗುತ್ತದೆ ಎಂಬ ಕುತೂಹಲ ಚಿತ್ರ ಬಿಡುಗಡೆಯಾಗುವತನಕ ಇದ್ದೇ ಇರುತ್ತದೆ.



ಮಾಯವಾದ 'ಮಂದಾಕಿನಿ' ಮಂದಹಾಸ



'ಮೊಗ್ಗಿನ ಮನಸ್ಸು' ಚಿತ್ರದ ನಂತರ ಸೆನ್ಸಾರ್ ಆಫೀಸರ್ ಚಂದ್ರಶೇಖರ್ ಅವರ ಕೆಂಗಣ್ಣಿಗೆ ಗುರಿಯಾಗಿರುವ ಚಿತ್ರ ರಮೇಶ್ ಸುರ್ವೆ ನಿರ್ದೇಶಿಸಿದ 'ಮಂದಾಕಿನಿ'. ಈ ಚಿತ್ರಕ್ಕೆ 'ಎ' ಸರ್ಟಿಫಿಕೇಟ್ ಕೊಡಲು ಸೆನ್ಸಾರ್ ಮಂಡಳಿ ನಿರ್ಧರಿಸಿದೆಯಂತೆ. ಆದರೆ ಆ ನಿರ್ಧಾರದ ವಿರುದ್ಧ ಕೋರ್ಟು ಮೆಟ್ಟಿಲೇರುವ ಹುಮ್ಮಸ್ಸಿನಲ್ಲಿದ್ದಾರೆ ಸುರ್ವೆ. ಇವರಿಬ್ಬರ ಜಗಳದಲ್ಲಿ 'ಬಡ'ವಾಗುತ್ತಿರುವವರು ಮಾತ್ರ ಮೊದಲ ಬಾರಿಗೆ ಚಿತ್ರ ನಿರ್ಮಾಣ ಮಾಡಿರುವ ಶ್ರೀನಿವಾಸ್. 'ಮಂದಾಕಿನಿ' ಅವರ ಮುಖದ ಮೇಲಿದ್ದ ಮಂದಹಾಸವನ್ನು ಈಗಾಗಲೇ ಮಾಯ ಮಾಡಿದೆ. ಇನ್ನು ಕೋರ್ಟು ಮೆಟ್ಟಿಲೇರಿದರೆ ಏನೇನಾಗುತ್ತೋ ಗೊತ್ತಿಲ್ಲ.

ಬಾಬು ಬೊಂಬಾಟ



ಡಿ. ರಾಜೇಂದ್ರ ಬಾಬು ಕನ್ನಡ ಚಿತ್ರರಂಗದಲ್ಲಿ ಹೆಸರು ಮಾಡಿರುವವರು. ಹಾಗೆಂದ ಮಾತ್ರಕ್ಕೆ ಅವರು ಪ್ರತಿಭಾವಂತ ಎಂಬುದು ನಮ್ಮ ಅರ್ಥವಲ್ಲ. ಕಳೆದ ಎರಡು ದಶಕಗಳಿಂದ ಕನ್ನಡದಲ್ಲೇ ನಿರ್ದೇಶಕರಾಗಿ ಕೆಲಸ ಮಾಡಿರುವ ಬಾಬು ಈಗಾಗಲೇ ಐವತ್ತಕ್ಕೂ ಹೆಚ್ಚು ಚಿತ್ರಗಳನ್ನು ಮಾಡಿದ್ದಾರೆ. ಈಗ ರಾಕ್‌ಲೈನ್ ವೆಂಕಟೇಶ್‌ಗಾಗಿ ತಮ್ಮ ವೃತ್ತಿ ಜೀವನದ ಇಪ್ಪತ್ತೈದನೆ ವರ್ಷದಲ್ಲಿ ತಮ್ಮ ಐವತ್ತೈದನೆ ಚಿತ್ರವಾದ 'ಬೊಂಬಾಟ್'ಅನ್ನು ನಿರ್ದೇಶಿಸುತ್ತಿದ್ದಾರೆ.


ಬಾಬು ಚಿತ್ರರಂಗಕ್ಕೆ ಬಂದಿದ್ದು ಹೀರೋ ಆಗುವ ಕನಸ್ಸಿನೊಂದಿಗೆ. ಆದರೆ ಬಣ್ಣದ ಲೋಕ ಅವರನ್ನು ನಿರ್ದೇಶಕನನ್ನಾಗಿ ರೂಪಿಸಿತು. ಹೀರೋ ಆಗಲು ಬಂದವರು ಅನೇಕ ಹೀರೋಗಳನ್ನು ರೂಪಿಸಿದರು. ಅದರಲ್ಲೂ ಮುಖ್ಯವಾಗಿ ಕ್ರೇಜಿ ಸ್ಟಾರ್ ರವಿಚಂದ್ರನ್ ವೃತ್ತಿ ಜೀವನದ ಆರಂಭದ ವರ್ಷಗಳಲ್ಲಿ ಅವರೊಂದಿಗೆ ಬಾಬು ಅನೇಕ ಹಿಟ್ ಚಿತ್ರಗಳನ್ನು ನೀಡಿದರು. ಆ ಸಮಯದಲ್ಲಿ ಬಾಬು-ರವಿಚಂದ್ರನ್ ಜೋಡಿ ಎಂದರೆ ಬಾಕ್ಸಾಫೀಸಿನಲ್ಲಿ ಚಿತ್ರ ಗೆದ್ದೇ ಗೆಲ್ಲುತ್ತದೆ ಎಂಬ ಮಾತು ಚಾಲ್ತಿಯಲ್ಲಿತ್ತು. ಅದಾದನಂತರ ಯಾಕೋ ಏನೋ ಇಬ್ಬರೂ ಮುನಿಸಿಕೊಂಡರು. ಆ ಬಗ್ಗೆ ಕೇಳಿದರೆ "ನಾವಿಬ್ಬರೂ ಟಾಕಿಂಗ್ ಟರ್ಮ್ಸ್‌ನಲ್ಲಿ ಇದ್ದೇವೆ. ಆದರೆ ವರ್ಕಿಂಗ್ ಟರ್ಮ್ಸ್‌ನಲ್ಲಿ ಇನ್ನೂ ಇಲ್ಲ" ಎಂದು ಬಾಬು ಮಾರ್ಮಿಕವಾಗಿ ಹೇಳುತ್ತಾರೆ.

ಹಾಗೆ ನೋಡಿದರೆ ಬಾಬು ಒಂದು ರೀತಿಯಲ್ಲಿ ಇಂಡಸ್ಟ್ರಿ ಇಷ್ಟ ಪಡುವಂತಹ ನಿರ್ದೇಶಕ. ಯಾಕೆಂದರೆ ರಿಮೇಕ್ ಚಿತ್ರಗಳನ್ನು ಅತ್ಯಂತ ಶ್ರದ್ಧೆಯಿಂದ ಸುಂದರವಾಗಿ ಮತ್ತು ನಿಗದಿತ ಸಮಯದಲ್ಲಿ ರೂಪಾಂತರಿಸುವುದರಲ್ಲಿ ಇವರು ಎತ್ತಿದ ಕೈ. ಹೀಗಾಗಿ ಅಂಕಿಅಂಶಗಳ ಆಧಾರದಲ್ಲಿ ಹೇಳುವುದಾದರೆ ಇವರು ನಿರ್ದೇಶಿಸಿದ ಚಿತ್ರಗಳಲ್ಲಿ ಶೇ. **80** ಚಿತ್ರಗಳು ಬಾಕ್ಸಾಫೀಸಿನಲ್ಲಿ ಜಯಭೇರಿ ಬಾರಿಸಿವೆ. ಈ. ಕಾರಣಕ್ಕಾಗಿಯೇ ರಿಮೇಕ್ ಚಿತ್ರ ಎಂದಾಕ್ಷಣ ಉದ್ಯಮದವರಿಗೆ ಬಾಬು ನೆನಪಾಗುತ್ತಿದ್ದರು.

ಬಾಬು ಅವರ ಪತ್ನಿ ಸುಮಿತ್ರಾ ಕೂಡಾ ನಟಿ. ಹಾಗೆಯೇ ಅವರ ಪುತ್ರಿ ಉಮಾ ನಾಯಕಿಯಾಗಿ ಹೆಸರು ಮಾಡಿದವಳು. ಇತ್ತೀಚೆಗೆ ಬಾಬುಗೆ ಅವಕಾಶಗಳು ಕಡಿಮೆಯಾಗುತ್ತಿವೆ. ಅದರ ಬಗ್ಗೆ ಬಾಬುರವರನ್ನು ಪ್ರಶ್ನಿಸಿದರೆ ಅವರು "ನನಗೆ ಅವಕಾಶ ಸಿಗುತ್ತಿಲ್ಲ ಎಂದು ಕೊರಗುತ್ತಿಲ್ಲ. ನನಗೆ ಸಿನಿಮಾಗಳು ದೊರಕುತ್ತಲೇ ಇವೆ. ನಾನು ಸಾಯೋತನಕ ಸಿನಿಮಾ ನಿರ್ದೇಶನ ಮಾತ್ರ ಬಿಡುವುದಿಲ್ಲ" ಎಂದು ಅವರು ಘೋಷಿಸುತ್ತಾರೆ.

ಇಷ್ಟು ವರ್ಷಗಳಾದರೂ ಇವರು ಈಗಲೂ ಯಂಗ್ ಆಗಿ ಥಿಂಕ್ ಮಾಡುತ್ತಿದ್ದಾರೆ ಎಂಬುದಕ್ಕೆ ಅವರೀಗ ನಿರ್ದೇಶಿಸುತ್ತಿರುವ ಗಣೇಶ್ ಅಭಿನಯದ 'ಬೊಂಬಾಟ್' ಚಿತ್ರವೇ ಸಾಕ್ಷಿ. ಬಾಬುರವರ ಸಮಕಾಲೀನರು ಈಗಾಗಲೇ ವಿಶ್ರಾಂತಿ ಪಡೆದು ಮನೆಯಲ್ಲೇ ಜೀವನ ಸಾಗಿಸುತ್ತಿರುವಾಗ ಬಾಬು ಮಾತ್ರ ಇನ್ನೂ ಕ್ರಿಯಾಶೀಲರಾಗಿರುವುದು ಸಂತೋಷದ ವಿಷಯವೇ ಸರಿ. ಅವರ ಮುಂದಿನ ಜೀವನವೂ ಬೊಂಬಾಟಾಗಿರಲಿ.

ನಾಗಣ್ಣನ 'ಬಳಗ' - ಬರಿದಾದ ಕೊಳಗ



ವಿಷ್ಣು ಪಾಳಯದಿಂದ ಸೂರಪ್ಪ ಬಾಬು ಹೊರಬಂದ ನಂತರ ಅವರು ನಿರ್ಮಿಸಿದ ಮೊದಲ ಚಿತ್ರ 'ಬಂಧು-ಬಳಗ' ಈಗ ಬಿಡುಗಡೆಯಾಗಿದೆ. ಶಿವರಾಜ್‌ಕುಮಾರ್ ಈ ಚಿತ್ರದ ನಾಯಕ. ಅದಕ್ಕಿಂತಲೂ ಮುಖ್ಯವಾಗಿ ಇದರ ಕಥೆಯನ್ನು ಸ್ಟಾರ್ ಕಥೆಗಾರ ಜನಾರ್ದನ ಮಹರ್ಷಿ ಬರೆದಿದ್ದಾರೆ ಎಂದೇ ಭಾರೀ ಪ್ರಚಾರ ಪಡೆಯಲಾಗಿತ್ತು. ಯಾಕೆಂದರೆ ಜನಾರ್ದನ ಮಹರ್ಷಿ ಕನ್ನಡದಲ್ಲಿ ಈತನಕ ಮುಟ್ಟಿದ್ದೆಲ್ಲಾ ಚಿನ್ನವಾಗಿದೆ. ಡಾ. ರಾಜ್‌ಕುಮಾರ್ ಮತ್ತು ವರದಪ್ಪ ಈ ಕಥೆಯನ್ನು ಓಕೆ ಮಾಡಿದ್ದರು ಎಂದು ಕೂಡಾ ಅವರಿಬ್ಬರ ಫೋಟೋ ಹಾಕಿ ನಿರ್ಮಾಪಕರು ಪ್ರಚಾರ ಮಾಡಿದ್ದರು. ಹೀಗಾಗಿ ಈ ಕಥೆಯ ಬಗ್ಗೆ ಸಹಜವಾಗಿಯೇ ಎಲ್ಲಿಲ್ಲದ ಕುತೂಹಲ ಹುಟ್ಟಿತ್ತು. ಆದರೆ ಚಿತ್ರ ನೋಡಿದ ನಂತರ ಅನಿಸಿದ್ದಿಷ್ಟೇ: ಇಂತಹ ಕಥೆಗಳು ಕನ್ನಡದಲ್ಲಿ ನೂರಾರು ಬಂದು ಹೋಗಿವೆ. ಇದನ್ನು ಬರೆಯಲು ಜನಾರ್ದನ ಮಹರ್ಷಿ ಅಲ್ಲಿಂದ ಬರುವ ಅಗತ್ಯವಾದರೂ ಏನಿತ್ತು?



...ಮಲತಾಯಿಯ ಹಿಂಸೆ ಮತ್ತು ಕಿರುಕುಳದ ಸುತ್ತ ಹೆಣೆದ ಕಥೆಯಿದು. ಹೀಗೆ ಒನ್‌ಲೈನ್ ಕಥೆ ಹೇಳಿದರೆ ಈ ಚಿತ್ರ ಎಲ್ಲಿಂದ ಆರಂಭವಾಗಿ ...ಎಲ್ಲಿಗೆ ಮುಗಿಯುತ್ತದೆ ಎಂದು ಪ್ರೇಕ್ಷಕ ಮಹಾಪ್ರಭುಗಳಾದ ನೀವು ಸುಲಭವಾಗಿ ಊಹಿಸುತ್ತೀರಿ. ಆದ್ದರಿಂದ ಇಲ್ಲಿ ಆ ಚಿತ್ರದ ಕಥೆಯನ್ನು ...ಹೇಳುವ ಗೋಜಿಗೆ ನಾವು ಹೋಗುತ್ತಿಲ್ಲ. ಈ ಚಿತ್ರ ಶಿವರಾಜ್ ಕುಮಾರ್ ಅಭಿಮಾನಿಗಳಿಗೆ ಇಷ್ಟವಾಗುವ ಸಾಧ್ಯತೆ ಕಡಿಮೆ. ಇದನ್ನೇನಿದ್ದರೂ ...ಹಳ್ಳಿ ಜನ ನೋಡಬೇಕು. ಅವರು ನೋಡಿದರೆ ಮಾತ್ರ ಸೂರಪ್ಪ ಬಾಬು ಗೆದ್ದಂತೆ. ಇಲ್ಲದಿದ್ದರೆ ಸೂರಪ್ಪ ಸೊರಗುವುದು ಗ್ಯಾರಂಟಿ.

...ಇಂತಹ ಪಾತ್ರಗಳನ್ನು ಈಗಾಗಲೇ ನಿರ್ವಹಿಸಿರುವ ಶಿವರಾಜ್‌ಕುಮಾರ್ ಇಲ್ಲೂ ಲೀಲಾಜಾಲವಾಗಿ ನಟಿಸಿದ್ದಾರೆ. ಕ್ಲೈಮ್ಯಾಕ್ಸ್ ...ಆಶಾದಾಯಕಾರಿಯಾಗಿದೆ. ಆದರೆ ಚಿತ್ರಕತೆ ಇನ್ನಷ್ಟು ಬಿಗಿಯಾಗಿರಬೇಕಿತ್ತು. ಆ ನಿಟ್ಟಿನಲ್ಲಿ ನಾಗಣ್ಣ ಸೋತಿದ್ದಾರೆ. ಹಂಸಲೇಖಾ ಅವರ ಸಂಗೀತ ...ಅಣ್ಣ ತಂಗಿ' ಚಿತ್ರದ ಲೆವೆಲ್‌ನಲ್ಲೇ ಇಲ್ಲ. ಪೋಷಕನಟ ಧರ್ಮ ನಿಜಕ್ಕೂ ಗಮನ ಸೆಳೆಯುವಷ್ಟು ಚೆನ್ನಾಗಿ ನಟಿಸಿದ್ದಾರೆ. 'ಬಂಧು ಬಳಗ' ದೊಡ್ಡ ...ತಾರಾಗಣ, ಅದ್ದೂರಿ ಚಿತ್ರವಾದರೂ ಮನಸ್ಸಿಗೆ ಮುದ ನೀಡದೇ ನಿರಾಶೆ ಮೂಡಿಸುತ್ತದೆ.

ಪ್ರೇಮ್ ವಿತರಕ

'ನೆನಪಿರಲಿ' ಖ್ಯಾತಿಯ ಪ್ರೇಮ್ ಯಾವುದೇ ಸದ್ದು ಗದ್ದಲವಿಲ್ಲದೆ ಚಿತ್ರಗಳ ಹಂಚಿಕೆ ಕಾರ್ಯಕ್ಕೆ ಕೈಹಾಕಿದ್ದಾರೆ. ಇವರು ಕೈಗೆತ್ತಿಕೊಂಡಿರುವ ಮೊದಲ ಚಿತ್ರ ಶಿವರಾಜ್ ಕುಮಾರ್ ಅಭಿನಯದ 'ಬಂಧು-ಬಳಗ'. ಈ ಚಿತ್ರದ ಮೈಸೂರು ವಲಯದ ಮಾರಾಟದ ಹಕ್ಕನ್ನು ಪ್ರೇಮ್ ಖರೀದಿಸಿದ್ದಾರೆ.



ಪ್ರೇಮ್‌ಗೆ ಈ ಹೊಸ ವೃತ್ತಿಯಲ್ಲಿ ಲಾಭ, ಯಶಸ್ಸು ಸಿಗುತ್ತದೋ ಇಲ್ಲವೋ ಎಂದು ಈಗಲೇ ಹೇಳುವುದು ಕಷ್ಟ. 'ಬಂಧು ಬಳಗ' ಬಾಕ್ಸಾಫೀಸಿನಲ್ಲಿ ಗದ್ದಲ್ಲಿ ಪ್ರೇಮ್‌ಗೆ ಲಾಟರಿ ಹೊಡೆದಂತೆ...

R B P LANKESH, Kannada Weekly Price Rs. 12/- 18-6-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B...

'ಬೊಂಬಾಟ್' ಗಣೇಶ



'ಇದು ಗಣೇಶನ ಆಟ'. ಈ ವಾಕ್ಯ 'ಬೊಂಬಾಟ್' ಚಿತ್ರದ ಕಿಕ್ಕರ್. ಹಾಗೆ ನೋಡಿದರೆ ಇದು ಅರ್ಥಪೂರ್ಣವಾದ ವಾಕ್ಯ ಯಾಕೆಂದರೆ ಇವತ್ತು ಗಾಂಧಿನಗರದಲ್ಲಿ ನಟ ಗಣೇಶನ ಆಟ ಬಿಟ್ಟರೆ ಇನ್ನಾರ ಆಟ ನಡೆಯುತ್ತಿದೆ?

ಈ ಕಾರಣದಿಂದಲೇ ಗಣೇಶನ ಆಟದ ಶೈಲಿಯನ್ನು 'ಬೊಂಬಾಟ್' ಚಿತ್ರದ ನಿರ್ದೇಶಕ ಡಿ. ರಾಜೇಂದ್ರ ಬಾಬು ಬದಲಾಯಿಸಿದ್ದಾರಂತೆ. ಯಾಕೆಂದರೆ ಈ ತನಕ ಗಣೇಶ್ ನಟಿಸಿದ ಎಲ್ಲಾ ಏಳು ಚಿತ್ರಗಳಲ್ಲಿ ಆತ 'ತ್ಯಾಗರಾಜ'ನ ಪಾತ್ರಗಳಲ್ಲಿ ಕಾಣಿಸಿಕೊಂಡು ರಮೇಶ್ ಅರವಿಂದ್ ಬಿಟ್ಟುಕೊಟ್ಟಿರುವ ಸ್ಥಾನಕ್ಕೆ ಲಗ್ಗೆ ಹಾಕಿದ್ದರು. ಆದರೆ 'ಬೊಂಬಾಟ್' ಚಿತ್ರದಲ್ಲಿ ಆತ ಮೊದಲ ಬಾರಿಗೆ ನಾಯಕಿಯನ್ನು ಮದುವೆಯಾಗುತ್ತಾರಂತೆ, ಚಿತ್ರ ಸುಖಾಂತ್ಯವಾಗುತ್ತದಂತೆ.

ಅಷ್ಟೇ ಅಲ್ಲ 'ಬೊಂಬಾಟ್' ಚಿತ್ರದಲ್ಲಿ ಸ್ವಲ್ಪ ಮಟ್ಟಿಗೆ ಗಣೇಶ್ ಫೈಟಿಂಗ್ ಕೂಡ ಮಾಡಿದ್ದಾರಂತೆ. ಆದರೆ ದರ್ಶನ್ ಅಥವಾ ವಿಜಯ್ ತರಹ ಹತ್ತಾರು ಜನರಿಕ್ಕೆ ಒಮ್ಮೆಲೆ ಕೊಚ್ಚಿ ಹಾಕುವ ಬದಲಾಗಿ ಕೇವಲ ಮೂರು ಜನ ವಿಲನ್‌ಗಳನ್ನು ಡಬಾಡಬಾ ಎಂದು ಚಚ್ಚಿಹಾಕುತ್ತಾರಂತೆ. ಈ ಎರಡು ಅಂಶಗಳಿಂದಾಗಿ ಗಣೇಶ್ ಈ ಹೊಸ ಚಿತ್ರದಲ್ಲಿ ಬೊಂಬಾಟಾಗಲ್ಲದಿದ್ದರೂ ಸ್ವಲ್ಪಮಟ್ಟಿಗೆ ಬದಲಾಗಿದ್ದಾರೆ ಎಂದು ಹೇಳಬಹುದೆನಿಸುತ್ತದೆ.

ಇದೆಲ್ಲದರ ಮಧ್ಯೆ ಗಣೇಶ್‌ಗೆ ಲೈಫ್ ನೀಡಿದ ಸಂಗೀತ ನಿರ್ದೇಶಕ ಮನೋಮೂರ್ತಿ ಎಂದಿನಂತೆ ಮೆಲೋಡಿ ಸಾಂಗ್ ನೀಡಿದ್ದಾರೆ. ಹಾಗೆಯೇ ಗಣೇಶ್ ಡೈಲಾಗ್ ಡೆಲಿವರಿ ಕೂಡ ಎಂದಿನಂತೆಯೇ ಇದೆಯಂತೆ. ಈ ಎಲ್ಲಾ ವಿಷಯಗಳನ್ನು ಹೇಳಿದ ಡಿ. ಬಾಬು 'ಬೊಂಬಾಟ್' ಚಿತ್ರದ ಮುಖಾಂತರ ಗಣೇಶ್ 'ತ್ಯಾಗರಾಜ'ನ ಇಮೇಜಿಗೆ ನಮಸ್ಕಾರ ಹೇಳಿ 'ಭೋಗರಾಜ'ನಾಗುತ್ತಿದ್ದಾರೆ ಎಂದು ಮಾತ್ರ ಹೇಳಲಿಲ್ಲ.


ಕಾಕತಾಳೀಯ ವಿಷಯವೆಂದರೆ ಗಣೇಶ್ ನಿಜಜೀವನದಲ್ಲಿ ಮದುವೆಯಾದ ನಂತರ ಸೆಟ್ಟೇರಿದ ಮೊದಲ ಚಿತ್ರವಿದು. ಇದರರ್ಥ ನಿಜಜೀವನದಲ್ಲೂ ಅವರು ಸಿಕ್ಕಾಪಟ್ಟೆ ತ್ಯಾಗ ಮಾಡಿದ್ದಾರೆ ಎಂದು ಓದುಗರು ಅಪಾರ್ಥ ಮಾಡಿಕೊಳ್ಳಬಾರದು

'ಸರ್ಕಾರ್‌ರಾಜ್'ಗೆ ಠಾಕ್ರೆ ಕಿರಿಕ್!

ಕೋಮುವಾದಿ ಶಿವಸೇನೆಯ ನಾಯಕ ಬಾಳ್ ಠಾಕ್ರೆ ಜೀವನವನ್ನು ಆಧಾರವಾಗಿರಿಸಿಕೊಂಡು ನಿರ್ಮಾಣವಾಗಿರುವ 'ಸರ್ಕಾರ್ ರಾಜ್' ಚಿತ್ರ ಈ ವಾರ ಎಲ್ಲೆಡೆ ಬಿಡುಗಡೆಗೊಂಡು ವಿಮರ್ಶಕರಿಂದ ಭೇಷ್ ಎನಿಸಿಕೊಂಡಿದೆ. ಆದರೆ ಅದರ ಬಗ್ಗೆ ಬಾಳ್ ಠಾಕ್ರೆಯಾಗಲೀ, ಅವರ ಪುತ್ರ ಉಧವ್ ಆಗಲೀ ಅಥವಾ ಇತ್ತೀಚೆಗೆ ಬಾಳ್ ಠಾಕ್ರೆಯಿಂದ ದೂರವಾಗಿರುವ ಅವರ ಸಂಬಂಧಿ ರಾಜ್ ಆಗಲೀ ಇಲ್ಲಿಯತನಕ ಏನನ್ನೂ ಹೇಳಿಲ್ಲ, ಕಾರಣ ಆ ಚಿತ್ರದ ನಿರ್ಮಾಪಕ-ನಿರ್ದೇಶಕ ರಾಮ್ ಗೋಪಾಲ್ ವರ್ಮ ಅದನ್ನು ಠಾಕ್ರೆ ಫ್ಯಾಮಿಲಿಗೆ ತೋರಿಸಿಲ್ಲ!

ಅಂದಹಾಗೆ ಇದೇ ಕಥಾವಸ್ತುವನ್ನು ಹೊಂದಿದ್ದ ವರ್ಮಾರವರೇ ಎರಡು ವರ್ಷಗಳ ಹಿಂದೆ ನಿರ್ಮಿಸಿದ್ದ 'ಸರ್ಕಾರ್' ಸಿನಿಮಾವನ್ನು ಅಂದು ಠಾಕ್ರೆ ಫ್ಯಾಮಿಲಿಗೆ ವಿಶೇಷವಾಗಿ ತೋರಿಸಲಾಗಿತ್ತು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ರಾಜ್ ಠಾಕ್ರೆ 'ಸರ್ಕಾರ್ ರಾಜ್' ಚಿತ್ರದ ನಾಯಕ ನಟ ಅಮಿತಾಬ್ ಬಚ್ಚನ್ ವಿರುದ್ಧ ವಾಗ್ದಾಳಿ ಶುರುಮಾಡಿಕೊಂಡಿದ್ದಾರಲ್ಲದೆ, ಸ್ವತಃ ಬಾಳ್ ಠಾಕ್ರೆ ಮತ್ತವರ ಪುತ್ರ ಉಧವ್ ಠಾಕ್ರೆ ಬಚ್ಚನರ ನೆರವಿಗೆ ಬಂದಿಲ್ಲ. ಮಾತ್ರವಲ್ಲ ಇತ್ತೀಚೆಗೆ ಆ ಚಿತ್ರದಲ್ಲಿ ತನ್ನನ್ನು ಹೋಲುವ ಪಾತ್ರವೊಂದಿದೆ ಎಂದು ಗೊತ್ತಾದಾಗ ರಾಜ್ ಠಾಕ್ರೆ ವರ್ಮಾರವರ ಕಚೇರಿಗೆ ಭೇಟಿ ಕೊಟ್ಟು ಚಿತ್ರದ ಕೆಲ ಭಾಗಗಳನ್ನು ನೋಡಿದ್ದರು. ಹಾಗೆಯೇ ಚಿತ್ರದ ಬಿಡುಗಡೆಯ ಮುನ್ನ ತನಗೆ ಸಂಪೂರ್ಣವಾಗಿ ತೋರಿಸಬೇಕೆಂದು ಶರತ್ತು ಹಾಕಿದ್ದರು.





ಇದು ಗೊತ್ತಾಗುತ್ತಿದ್ದಂತೆ ಎಲ್ಲಿ ಆ ಚಿತ್ರದಲ್ಲಿ ರಾಜ್ ಪರವಾಗಿರುವ ದೃಶ್ಯಗಳಿದ್ದು ತಮ್ಮ ವಿರುದ್ಧವಾದ ಪಾತ್ರಗಳಿವೆಯೋ ಎಂದು ಬೆದರಿದ ಬಾಳ್ ಠಾಕ್ರೆ ಮತ್ತವರ ಪುತ್ರ ತಮಗೂ ಚಿತ್ರದ ಬಿಡುಗಡೆಯ ಮುನ್ನ ವಿಶೇಷ ಪ್ರದರ್ಶನವನ್ನು ಏರ್ಪಡಿಸಬೇಕೆಂದು ವರ್ಮಾಗೆ ಫತ್ವಾ ಹೊರಡಿಸಿದ್ದರು.

ಆದರೆ ಠಾಕ್ರೆ ಕುಟುಂಬದ ಯಾರ ಬೆದರಿಕೆಗೂ ಸೊಪ್ಪು ಹಾಕದ ವರ್ಮಾ ಟೀಂ ಚಿತ್ರವನ್ನು ಬಿಡುಗಡೆಗೊಳಿಸಿದೆಯಲ್ಲದೆ ಅದರ ಅಂತರರಾಷ್ಟ್ರೀಯ ಬಿಡುಗಡೆಗೆಂದು ಇಡೀ ತಂಡ ಬ್ಯಾಂಕಾಕ್‌ಗೆ ಹಾರಿ ಹೋಗಿದೆ.

ಹಿಂದೊಮ್ಮೆ ಮಣಿರತ್ನಂ ನಿರ್ದೇಶನದ 'ಬಾಂಬೆ' ಚಿತ್ರಕ್ಕೂ ಬಾಳ್ ಠಾಕ್ರೆ ಇದೇ ರೀತಿ ಕಿರಿಕ್ ಮಾಡಿದ್ದ. ಆ ಚಿತ್ರದಲ್ಲೂ ತನ್ನನ್ನು ಹೋಲುವ ಪಾತ್ರವಿದೆಯೆಂದು ಗೊತ್ತಾದಾಗ ಅದನ್ನು ತಾನು ನೋಡಿ ಪಾಸ್ ಮಾಡಿದ ನಂತರವೇ ಅದನ್ನು ಬಿಡುಗಡೆಗೊಳಿಸತಕ್ಕದ್ದು ಎಂದು ಮಣಿರತ್ನಂರವರಿಗೆ ಆದೇಶಿಸಿದ್ದ. ಹಾಗೆಯೇ ಚಿತ್ರದಲ್ಲಿ ತನ್ನನ್ನು ಹೋಲುವ ಪಾತ್ರ ಮುಂಬೈ ನರಗದಲ್ಲಿ ಸಂಭವಿಸಿದ ಕೋಮು ಗಲಭೆಗಳನ್ನು ಕಂಡು ಪಶ್ಚಾತ್ತಾಪ ವ್ಯಕ್ತಪಡಿಸುವ ದೃಶ್ಯವನ್ನು ಕತ್ತರಿಸಬೇಕೆಂದು ಆದೇಶಿಸಿದ್ದ. ಅದಕ್ಕೆ ಅಂದು ರಕ್ತಪಿಪಾಸು ಬಾಳ್ ಠಾಕ್ರೆ ನೀಡಿದ್ದ ಸಮರ್ಥನೆ "ಮುಂಬೈ ಗಲಭೆಗಳಿಂದ ನನಗೆ ಯಾವ ಬೇಸರವೂ ಆಗಿಲ್ಲ" ಎಂಬುದಾಗಿತ್ತು. ಆತನ ಇಂತಹ ಅಮಾನವೀಯತೆಗೆ ಶರಣಾಗಿದ್ದ ಮಣಿರತ್ನಂ ತಮ್ಮ ಚಿತ್ರದಿಂದ ಆ ದೃಶ್ಯವನ್ನು ಕತ್ತರಿಸಿದ್ದರು.

ಹುಟ್ಟುಗುಣ ಸುಟ್ಟರೂ ಹೋಗದು ಎಂಬುದಕ್ಕೆ ಠಾಕ್ರೆ ಕುಟುಂಬ ಒಂದು ಉತ್ತಮ ನಿದರ್ಶನದಂತಿದೆ. ಸದ್ಯ ಇಂಥವರ ಅನಾಗರಿಕ ದಬ್ಬಾಳಿಕೆಗೆ ಬಚ್ಚನ್ ಮತ್ತು ರಾಮ್ ಗೋಪಾಲ್ ವರ್ಮ ತಮ್ಮ ತಲೆ ಕೊಡದೆ ಸ್ವಾಭಿಮಾನವನ್ನು ಪ್ರದರ್ಶಿಸಿದ್ದಾರೆ.



ಯಾವಾಗ ಅಮೀರ್ ಖಾನ್‌ನ 'ಲಗಾನ್' ಸಿನಿಮಾ ಯಶಸ್ವಿಯಾಯಿತೋ ಅಂದಿನಿಂದ ಎಲ್ಲ ಭಾಷೆಗಳ ಸಿನಿಮಾಗಳಲ್ಲಿ ಕ್ರೀಡೆಯೂ ಮುಖ್ಯಪಾತ್ರವಹಿಸಲಾರಂಭಿಸಿತು. ಅದರಲ್ಲೂ ಶಾರುಖ್ ಖಾನ್‌ನ 'ಚಕ್ ದೇ ಇಂಡಿಯಾ' ಎಂಬ ಹಾಕಿ ಕೇಂದ್ರಿತ ಸಿನಿಮಾವಂತೂ ಈ ಟ್ರೆಂಡ್‌ಗೆ ಇನ್ನಷ್ಟು ಪುಷ್ಟಿ ನೀಡಿತು.

ಕನ್ನಡದವರೂ ತಾವೇನು ಕಡಿಮೆ ಎಂದು ಈ ಟ್ರೆಂಡಿನ ಹಾದಿ ಹಿಡಿದರು. ಪೋಷಕ ನಟ ಕಿಶೋರ್ ಹಾಗೂ ಅವರ 'ಖಂಡಾಯ ಮತ್ತು ವಿಸ್ತಾರ' ತಂಡ ಹೊಸ ಚಿತ್ರದಲ್ಲಿ 'ಕಬಡ್ಡಿ' ಆಡಲು ಶುರುಮಾಡಿದರು. ಆದರೆ ಹಣದ ಕೊರತೆ ಅವರ ಆಟವನ್ನು ಅರ್ಧಕ್ಕೇ ನಿಲ್ಲಿಸಿತ್ತು. ಈಗ ಎಲ್ಲ ತೊಂದರೆಗಳನ್ನೂ ಮೀರಿ 'ಕಬಡಿ' ಚಿತ್ರೀಕರಣ ಮುಗಿದಿದೆ.

ಇನ್ನೊಂದು ಇಂಟರೆಸ್ಟಿಂಗ್ ಅಂಶವೆಂದರೆ ತಮಿಳಿನಲ್ಲೂ 'ವೆನ್ನಿಲಾ ಕಬಡಿ' ಎಂಬ ಚಿತ್ರ ಆರಂಭವಾಗಿದ್ದು ಅದರಲ್ಲೂ ಕನ್ನಡದ ಕಿಶೋರ್‌ರದ್ದೇ ವಿಶೇಷ ಪಾತ್ರ. ಒಂದೇ ಬಾರಿಗೆ ಕನ್ನಡ ತಮಿಳು ಎರಡರಲ್ಲೂ ಕಬ್ಬಡ್ಡಿ ಆಡುತ್ತಿರುವ ಕಿಶೋರ್‌ರ ಕ್ರೀಡಾ ಪ್ರೇಮವನ್ನು ಮೆಚ್ಚಲೇಬೇಕಲ್ಲವೇ?

ಮಜಾ ಕೊಡದ ಧ್ವಜ



ಶಿವಧ್ವಜ್ ಎಂಬ ನಟನ ವೃತ್ತಿ ಜೀವನವೇ ವಿಚಿತ್ರವಾಗಿ ಸಾಗುತ್ತಿದೆ. ನಾಯಕನಟನಾಗಿ ಶಿವಧ್ವಜ್ ಚಿತ್ರರಂಗಕ್ಕೆ ಕಾಲಿಟ್ಟಾಗ ಕನ್ನಡಕ್ಕೆ ಮತ್ತೊಬ್ಬ ಶಶಿಕುಮಾರ್ ದೊರಕಿದ ಎಂದೇ ಉದ್ಯಮದವರು ಸಂತೋಷಪಟ್ಟಿದ್ದರು. ಆದರೆ ಅವರೆಲ್ಲ ನಿರೀಕ್ಷಿಸಿದಷ್ಟು ಈಗ ನಟನಾಗಿ ಬೆಳೆಯಲೇ ಇಲ್ಲ. ಆದರೆ ಶಿವಧ್ವಜ್ ಕೂಡಲೇ ತನ್ನ ಟ್ರ್ಯಾಕ್ ಬದಲಿಸಿ ಈತ ಕ್ಯಾಮೆರಾ ಹಿಂದೆ ನಿಂತು ನಿರ್ದೇಶಕರಾಗಿದ್ದಾರೆ. ಇವರ ನಿರ್ದೇಶನದ ಮೊದಲ ಚಿತ್ರ 'ನೀನೇ ನೀನೇ' ಈಗ ತೆರೆಕಂಡಿದೆ.

ಎಲ್ಲರಂತೆ ಶಿವಧ್ವಜ್ ಕೂಡಾ ಪ್ರೇಮ ಕಥಾವಸ್ತುವನ್ನೇ ತನ್ನ ಮೊದಲ ಚಿತ್ರಕ್ಕೆ ಆಯ್ಕೆ ಮಾಡಿಕೊಂಡಿದ್ದಾರೆ. ಸುಂದರ ನಟ ಧ್ಯಾನ್ ಮತ್ತು ಹೊಸ ನಾಯಕಿ ಐಶ್ವರ್ಯ ಯುವಕರಿಗೆ ಕಚಗುಳಿ ಇಡುವ ರೀತಿಯಲ್ಲಿ ಚಿತ್ರದ ಆರಂಭದಲ್ಲಿ ನಟಿಸಿದ್ದಾರೆ. ಆದರೆ ನಿಜವಾಗಿ ಎಡವಟ್ಟಾಗಿರುವುದೇ ಚಿತ್ರದ ಸೆಕೆಂಡ್ ಹಾಫ್‌ನಲ್ಲಿ. ಅಲ್ಲಿ ಸ್ವಲ್ಪ ಬಿಗಿಯಾದ ಚಿತ್ರಕತೆ ಮತ್ತು ನಿರೂಪಣೆ ಮಾಡಿದ್ದಲ್ಲಿ ಶಿವಧ್ವಜ್ ನಿರ್ದೇಶಕನಾಗಿ ಸಂಪೂರ್ಣವಾಗಿ ಯಶಸ್ವಿಯಾಗುತ್ತಿದ್ದರೋ ಏನೋ? ಆದರೂ ನಿರ್ದೇಶಕರಾಗಿ ಚಿತ್ರರಂಗದಲ್ಲಿ ಗಟ್ಟಿಯಾಗಿ ತಳವೂರುವ ಸೂಚನೆಯನ್ನು ಶಿವಧ್ವಜ್ ಈ ಚಿತ್ರದ ಮುಖಾಂತರ ಕೊಟ್ಟಿದ್ದಾರೆ. 'ನೀನೇ ನೀನೇ' ಚಿತ್ರವನ್ನು ಸಂಪೂರ್ಣವಾಗಿ ತಳ್ಳಿಹಾಕುವಷ್ಟು ಖರಾಬ್ ಆಗಿಲ್ಲ. ದಿನೇಶ್ ಬಾಬು ಅವರ ಛಾಯಾಗ್ರಹಣ ಮತ್ತು ನಾಯಕ ಧ್ಯಾನ್ ಮತ್ತು ನಾಯಕಿ ಐಶ್ವರ್ಯಾಳ ನಟನೆ ಇವೆಲ್ಲವೂ ಮುದ ನೀಡುತ್ತದೆ.

ಬೆಟರ್ ಲಕ್ ನೆಕ್ಸ್ಟ್ ಟೈಂ ಮಿ. ಶಿವಧ್ವಜ್.



'ಮೊಗ್ಗಿನ ಮನಸು' ಶುಭಾ ಪೂಂಜಾ ಮತ್ತು ರಾಧಿಕಾ ಪಂಡಿತ್

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, ...